(*b*) the steps they have taken to obviate the same?

A.—**Sri T. CHANNIAH** (Minister for Pubiic Health and Local Self-Government).—

(*a*) No.

(*b*) Does not arise in view of the reply to (a).

Pay of employees of Akashavani

Q.—466. **Sri U. M. MADAPPA** (Chamarajanagar).—

Will the Government be pleased to state:—

(*a*) when the Akashavani of Mysore was integrated with the Centre;

(*b*) whether it is a fact that the officers and persons who were in the service of the Akashavani when it belonged to the Mysore Government are getting the same salaries and emoluments as before even after integration?

A.—**Sri T. SIDDALINGAIYA** (Minister for Industries).—

(*a*) 1st April 1950.

(*b*) The question of equating the pay of the staff of Akashavani to that of the All-India Radio is under the consideration of the Government of India.

Repair of the Thattekere Tank Bund

Q.—527. **Sri D. M. GOVINDA RAJU** (Nelamangala).—

Will the Government be pleased to state;—

(*a*) whether it has come to their notice that the bund of the Thattekere Tank in Sompur Hobli, Nelamangala Taluk, is in a state of disrepair;

(*b*) whether an estimate has been prepared for repairing the said bund;

(*c*) the amount of the estimate;

(*d*) whether the said estimate has been sanctioned by the Government?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Yes.

(*c*) Rs. 4,000.

(*d*) No.

Ambligola Project.

Q.—542. **Sri GANGA NAYAK** (Sorab-Shikaripur—Scheduled Castes).—

Will the Government be pleased to state:—

(*a*) whether it has come to their notice that the work of Ambligola Project has not yet been started though it has been sanctioned by them for Rs. 60 lakhs;

(*b*) whether they would start the work immediately?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Not during this year.

Allotment of Shop Sites in New Mandipet, Tumkur.

Q.—561. **Sri N. HUCHMASTHY GOWDA** (Huliyurdurga).—

Will the Government be pleased to state:—

(*a*) the decision arrived at with regard to allotment of shop (mandi) sites in New Mandipet, Tumkur;

(*b*) accerding to this decision, who are all the persons entitled to get those sites;

(*c*) the condition attached to the allotment of the said sites;

(*d*) whether they have accorded sanction to the said decision;

(*e*) whether sites have been allotted in accordance with the terms and conditions embodied in the decision?

A.—**Sri T. CHANNIAH** (Minister for Public Health and Local Self-Government).—

(*a*) The Town Municipal Council, Tumkur, have considered in the Council meeting held on 31st May 1952 the question of the allotment of sites by lot to the *bona fide* merchants as already selected by the previous Council and have resolved accordingly;

(*b*) *Bona fide* merchants;

(*c*) The Town Municipal Council, Tumkur, has allotted sites subject to the

following conditions by a resolution of the Council :—

The persons to whom the sites are allotted should pay the remaining upset price within the end of July 1952, failing which the grant will be cancelled and the deposit already paid will be forfeited. These sites should be used for the construction of shops only as per plan approved by the Municipality. The shops should be constructed on the sites within a period of two years and these shops so constructed should not be alienated for a period of ten years. The grantees are permitted to exchange sites;

(*d*) Government have in their Order No. L. 8975-81—Ml. 60-50-27, dated 4th December 1950, accorded sanction to the disposal of sites by lot to the *bona fide* merchants for an upset price of Rs. 3-8-0 per sq. yard subject to the following conditions :—

(i) Persons to whom sites are allotted should construct shop within a period of three years from the date of allotment.

(ii) The Municipality shall grant the sale deeds after five years when the construction of the shops are completed.

(iv) The allottees should not alienate the sites unless they get the sale deeds from the Municipality.

(v) Condition (iv) shall not apply to those who want to pledge the sites to the House Building Society for getting money for the construction of shops.

(vi) If the allottees fail to adhere to the above conditions, the Municipality shall resume the sites.

The decision of the Municipal Council for grant of sites by lot to *bona fide* merchants at an upset price of Rs. 3-8-0 per sq. yd., is based on the Government Order dated 4th December 1950. But the modified conditions incorporated at (e) for the allotment of sites have not been approved by Government.

(*e*) Yes.

———

Result of Election to the Special Committee on Amendments to the Rules of Procedure.

Mr. SPEAKER.—The Chair desires to announce that in connection with the election to the Special Committee on Amendments tot he Rules of Procedure and Conduct of Business in the Legislative Assembly, as the number of candidates is equal to the number of places to be filled up, the following Members are declared elected and consequently there will be no election to-morrow.

Sri K. Hanumanthaiya,
Sri J. Mohamed Imam,
Sri T. Mariappa,
Sri H. S. Rudrappa,
Sri M. V. Rama Rao,
Sri N. Huchmasthy Gowda,
Sri L. Siddappa.

Under sub-rule (2) of rule 184 of the Rules of Procedure and Conduct of Business in the Mysore Legislative Assembly, the Deputy Speaker will also be a member of the Committee and I shall be the Chairman of the Committee.

Sri J. MOHAMED IMAM (Jagalur).—Sir, one clarification. Sir, is Sri K. Hanumanthaiya elected in the capacity of Minister or in his personal capacity ?

Mr. SPEAKER.—He is elected as a member.

———

Discussion on answer of Question *re*: Application of Essential Goods (Declaration and Regulation of Tax on Sale or Purchase) Act, 1952.

Mr. SPEAKER.—Sri J. Mohamed Imam has given notice under rule 39 to raise a discussion on matters arising out of answer to Question No. 376 which was taken up in the Assembly on 21st October 1952. This relates to non-application of the Essential Goods (Declaration and Regulation of Tax on Sale or Purchase) Act, 1952 to Mysore in its entirety and the exemption to certain goods under the Act.

Discussion will take place on Friday the 24th at the end of the business for the day.

———

Privilege Motion

Mr. SPEAKER.—I have received notice of a Privilege Motion relating to the privileges of Members of this House at 11-30 A.M. to-day. I will consider this and will give a ruling tomorrow.

A VOICE.—Who has given notice of this motion?

Mr. SPEAKER.—You will know it tomorrow.

DEBATE ON THE FOOD SITUATION AND THE LEVY SYSTEM.

Sri H. SIDDAVEERAPPA (Minister for Home Affairs and Agriculture).—I move:

"That the Food situation and the Levy System be taken into consideration."

Sir, it is under your direction and under your suggestion, I am placing this motion for the consideration of this House today, although the debate has already been initiated on this food policy. I have already made it clear in the opening speech as to why the Food Debate has been solicited and as to what the Government earnestly expects from the Hon'ble Members in this Debate. Since I have already discussed the points rather at length I do not think that any useful purpose would be served by my reiterating the points I have already raised. Therefore I pray that the discussion may now be resumed on the definite motion that has now been moved.

Mr. SPEAKER.—Motion moved:

"That the Food situation and of the Levy System be taken into consideration."

There is also an amendment to this motion by Sri M. Madiah to the effect that the following words be added at the end:

"and the system of procuring from surplus holders with the ultimate aim of complete de-control be adopted."

Sri J. MOHAMED IMAM (Jagalur).—I do not quite follow; let him read it out again.

Sri M. MADIAH (Nanjangud—Scheduled Castes).—I move:

"That at the end of the motion the following words be added.

'and the system of procuring from surplus holders with the ultimate aim of complete decontrol be adopted'."

Sri A. BHEEMAPPA NAIK (Molakalmuru).—How does the amended resolution read?

Sri M. MADIAH.—Sir, with the permission of the Chair, I will read the amended resolution;

"That the food situation and the Levy System be taken into consideration and the system of procuring from surplus holders with the ultimate aim of complete decontrol be adopted."

ಸ್ವಾಮಿ, ಇಂದು ದೇಶದಲ್ಲಿ ಉದ್ಭವವಾಗಿರುವ ಆಹಾರ ಪರಿಸ್ಥಿತಿಯ ವಿಚಾರದಲ್ಲಿ ನಾನು ಹೆಚ್ಚಾಗಿ ಹೇಳಬೇಕಾದ ಅಗತ್ಯ ವೇನೂ ಇರುವುದಿಲ್ಲವೆಂದು ತಿಳಿದು ಕೊಂಡಿದ್ದೇನೆ. ಏತಕ್ಕೆಂದರೆ, ಈ ವಿಚಾರವಾಗಿ ಪದೇ ಪದೇ ಅನೇಕ ವಿಷಯಗಳು ನಮ್ಮ ಸಭೆಯ ಮುಂದೆ ಬಂದು ಕೂಲಂಕಷವಾಗಿ ಚರ್ಚೆಮಾಡಲ್ಪಟ್ಟಿವೆ. ಹಾಗಿದ್ದರೂ ಸಹ ಇಂದು ದೇಶದಲ್ಲಿ ಉಂಟಾಗಿರತಕ್ಕ ಆಹಾರ ಪರಿಸ್ಥಿತಿಯನ್ನು ಒಂದು ಸೂಕ್ತ ರೀತಿಯಲ್ಲಿ ಬಗೆಹರಿಸುವ ಬಗ್ಗೆ ಸರ್ಕಾರಕ್ಕೆ ಒಂದು ನಿರ್ದಿಷ್ಟವಾದ ನೀತಿಯು ಅತ್ಯಗತ್ಯವಾಗಿರುತ್ತದೆಂದು ನನಗೆ ಅನಿಸುತ್ತದೆ. ಈ ನೀತಿಯು ಯಾವ ರೀತಿಯಾಗಿರಬೇಕು ಎಂಬ ಬಗ್ಗೆ ಈ ಮಾನ್ಯ ಸಭೆಯ ಸದಸ್ಯರ ಅಭಿಪ್ರಾಯ ಮತ್ತು ಸಲಹೆಗಳನ್ನು ಅಪೇಕ್ಷಿಸಿರುವುದರಿಂದ ಈ ದಿವಸ ಈ ವಿಚಾರ ಈ ಸಭೆಯ ಮುಂದೆ ಬಂದಿದೆ. ಈ ಸೂಕ್ತ ನೀತಿಯಲ್ಲಿ ಯಾರದೂ ಭಿನ್ನಾಭಿಪ್ರಾಯವಿದ್ದಂತೆ ಕಾಣುತ್ತಿಲ್ಲ. ಸ್ವಲ್ಪ ಹೆಚ್ಚುಕಡಮೆ ಈಗಾಗಲೇ ನಾನಾ ವಿಧವಾದ ಸಲಹೆಗಳನ್ನು ನಾನಾ ಸದಸ್ಯರೂ ಮತ್ತು ನಾನಾ ಪಕ್ಷಗಳವರೂ ಸೂಚಿಸಿರುತ್ತಾರೆ. ಈ ಸಭೆಯ ಮಾನ್ಯ ಸದಸ್ಯರಲ್ಲಿ ಅನೇಕರು ಒಂದೇ ವಿಧವಾದ ಅಭಿಪ್ರಾಯವನ್ನೂ ಮತ್ತು ಸಲಹೆಗಳನ್ನೂ ಸೂಚಿಸಿದ್ದಾರೆ. ಸರ್ಕಾರದವರಿಗೂ ಕೂಡ ಆದಷ್ಟು ಜಾಗ್ರತೆ ಆಹಾರ ಪದಾರ್ಥಗಳ ಮೇಲಿನ ಡಿ-ಕಂಟ್ರೋಲ್ ಮಾಡಿಬಿಡಬೇಕೆಂಬ ಅಭಿಪ್ರಾಯವಿರುತ್ತದೆಂದು ಖಚಿತವಾಗಿ ತಿಳಿದು ಬಂದಿದೆ. ಹೀಗೆ ಇದನ್ನು ಆದಷ್ಟು ಬೇಗ ಡಿ-ಕಂಟ್ರೋಲ್‌ಮಾಡಬೇಕೆಂಬ ವಿಚಾರದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲವೆಂದು ಹೇಳಬಹುದಾಗಿದೆ. ಕಳೆದ ಬಡ್ಜೆಟ್ ಅಧಿವೇಶನದಲ್ಲೇ ಸರ್ಕಾರದವರ ಅಂತಿಮಗುರಿ ಆದಷ್ಟು ಬೇಗ ಡಿ-ಕಂಟ್ರೋಲ್‌ಮಾಡಬೇಕೆಂಬುದೇ ಆಗಿರುತ್ತದೆಂದು ಹೇಳಿದ್ದಾರೆ. ಈಗಾಗಲೇ ಆಹಾರ ಧಾನ್ಯಗಳ ಸಾಗಾಣಿಕೆಯ ಸಂಬಂಧದಲ್ಲಿ ಸರ್ಕಾರಿ ಆಜ್ಞೆಗಳನ್ನು

ಸಡಿಲಮಾಡಿರುವುದರಿಂದ ರೈತರಿಗೆ ತುಂಬ ಉಪಕಾರ ಮಾಡಿದಂತಾಗಿದೆ. ಹೀಗೆ ಮಾಡಿದ್ದರಿಂದ ಇಂದು ಕೊಂಚಮಟ್ಟಿಗಾದರೂ ಉತ್ಪಾದನೆ ಪರಿಸ್ಥಿತಿಯಲ್ಲಿದೆ. ಇಷ್ಟಾದರೂ ದೇಶದಲ್ಲಿ ಇನ್ನೂ ಡಿಸ್ಟ್ರೆಸ್ ಕಂಡೀಷನ್ ಮುಂದುವರಿಯುತ್ತಲೇ ಇದೆ. ಈ ದಿವಸದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತಿಳಿಸುವುದಾದರೆ, ಈಗಾಗಲೇ ಮೈಸೂರು ಸಂಸ್ಥಾನದಲ್ಲಿ ಅನೇಕ ಕಡೆ ಸಕಾಲಕ್ಕೆ ಮಳೆ ಬಾರದೆ ಹೋಗಿ ಬೆಳೆಯಾಗದೆ, ಇಟ್ಟದ್ದ ಫಸಲುಗಳೆಲ್ಲವೂ ತೀರ ಹದಗೆಟ್ಟುಹೋಗಿವೆ. ಮಳೆ ಬಿದ್ದಿದೆಯಾದರೂ ಇದು ಬಹಳ ಕಾಲವಿಳಂಬ ಅಕಾಲದಲ್ಲಿ ಬಂದಿರುವ ಪ್ರಯುಕ್ತ ಎಲ್ಲಿಯೂ ಬೆಳೆ ಸರಿಯಾಗಿ ಆಗಿಲ್ಲ. ಆದರೆ ಅಲ್ಲಲ್ಲೇ ಕೊಂಚಮಟ್ಟಿಗೆ ಭತ್ತದ ಬೆಳೆ ಮಾತ್ರ ಆಗಬಹುದು. ಕಳೆದ 15 ದಿವಸಗಳಿಂದಲೂ ಬೀಳುತ್ತಿರುವ ಮಳೆಯಿಂದ ಕೆಲವು ಕಡೆ ರಾಗಿ, ಜೋಳದ ಫಸಲು ಕೊಂಚ ಉತ್ತಮಗೊಂಡಿದೆ. ದೇಶದಲ್ಲಿ ಪರಿಸ್ಥಿತಿಯ ನಿಜರೂಪ ಹೀಗಿರುವ ವೇಳೆಯಲ್ಲಿ ಮುಂದೆ ಧಾನ್ಯ ವಸೂಲಿಗಾಗಿ ಅನುಸರಿಸಬೇಕೆಂದಿರುವ ನೀತಿಯ ವಿಚಾರದಲ್ಲಿ ಈ ಮಾನ್ಯ ಸಭೆಯ ಸದಸ್ಯರು ಯಾವ ರೀತಿಯ ಸಲಹೆಗಳನ್ನು ಕೊಡುತ್ತಾರೋ ಎಂದು ಸರ್ಕಾರದವರು ಬಹಳ ಕುತೂಹಲದಿಂದ ಕಾದು ಕುಳಿತಿದ್ದಾರೆ. ಈ ದಿವಸದ ಬೆಳಗಿನ ವರ್ತಮಾನ ಪತ್ರಿಕೆಯೊಂದರಲ್ಲಿ ಕೇಂದ್ರ ಆಹಾರ ಸಚಿವರಾದ ಶ್ರೀ ಕಿದ್ವಾಯಿಯವರು ಆದಷ್ಟು ಬೇಗ ಈ ಆಹಾರ ನಿಯಂತ್ರಣಗಳನ್ನು ತೆಗೆದು ಹಾಕತಕ್ಕ ಬಗ್ಗೆ ಒಂದು ನೀತಿಯನ್ನು, ಸಮಗ್ರ ಭಾರತ ಸರ್ಕಾರಕ್ಕೆಲ್ಲ ಅನ್ವಯಿಸುವಂತೆ, ತಯಾರಿಸುವುದರಲ್ಲಿದ್ದಾರೆಂದು ತಿಳಿಸಲಾಗಿದೆ. ಅವರು ಈ ಬಗ್ಗೆ ಹೊರಪಡಿಸತಕ್ಕ ಪಾಲಸಿ ಹೇಗಿರುತ್ತದೆಂಬುದನ್ನು ನಾಳೆ ಮುಂಬೈನಲ್ಲಿ ಸೇರಲಿರತಕ್ಕ ಆಹಾರ ಸಚಿವರುಗಳ ಸಮ್ಮೇಳನದಲ್ಲಿ ತೀರ್ಮಾನಮಾಡಲ್ಪಡುತ್ತದೆಂದು ಕೂಡ ತಿಳಿಸಿದ್ದಾರೆ. ಹಾಗೆ ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಕೆಲವು ಪ್ರಾಂತಗಳಲ್ಲಿ ಆಹಾರದ ಅಭಾವ ಇರುತ್ತದೆಂದೂ ಮತ್ತೆ ಕೆಲವು ಪ್ರಾಂತಗಳಲ್ಲಿ ಈ ಅಭಾವವಿರುವುದಿಲ್ಲವೆಂದೂ, ಹಾಗೆ ಎಲ್ಲೆಲ್ಲಿ ಅಭಾವ ವಿರುತ್ತದೋ ಅಂಥ ಪ್ರದೇಶವನ್ನು ಅಭಾವವಿಲ್ಲದಿರುವಂಥ ಪ್ರದೇಶಕ್ಕೆ ಒಂದುಗೂಡಿಸಿ ಈ ಆಹಾರಕೊರತೆಯನ್ನು ನೀಗಲು ಒಂದು ಹೊಸ ಯೋಜನೆಯನ್ನೇ ತಯಾರಿಸುವಂತೆ ತಿಳಿಸಿದ್ದಾರೆ. ಈಗ ಅನೇಕ ಕಡೆಗಳಲ್ಲಿ ಎಲ್ಲೆಲ್ಲಿ ಆಹಾರದ ಅಭಾವ ಕಂಡುಬರುತ್ತಿಲ್ಲವೋ ಅಲ್ಲೆಲ್ಲಾ ಈ ನಿಯಂತ್ರಣಗಳನ್ನು ತೆಗೆದುಬಿಟ್ಟಿದ್ದಾರೆ. ಹೀಗೆ ಎಲ್ಲೆಲ್ಲಿ ಡಿ-ಕಂಟ್ರೋಲ್‌ಮಾಡಿದ್ದಾರೋ ಅಲ್ಲಿರತಕ್ಕ ಸರ್‌ಪ್ಲಸ್ ಹೋಲ್ಡರುಗಳು ಅಭಾವವಿರತಕ್ಕ ಜನರೊಂದಿಗೆ ಸಹಕರಿಸಿದರೇನೇ ಈ ಡಿ-ಕಂಟ್ರೋಲನ್ನು ಸಮಗ್ರವಾಗಿ ತೆಗೆದುಹಾಕಲು ಸಾಧ್ಯವಾಗುತ್ತದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಅವರು ಒಂದು ರೀತಿಯ ಆಶಾದಾಯಕವಾದ ನೀತಿಯನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಜನರು ಎಲ್ಲ ಕಡೆಗಳಲ್ಲೂ ಒಂದು ಸಹಕಾರ ಮನೋಭಾವದಿಂದ ವರ್ತಿಸಿದ್ದೇ ಆದರೆ ನಾವು ಹೊರದೇಶಗಳಿಂದ ಆಹಾರವನ್ನು ಆಮದು ಸಹ ಮಾಡಿಕೊಳ್ಳಬೇಕಾದ ಪ್ರಮೇಯವಿರುವುದಿಲ್ಲವೆಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಇಂದು ಒಂದೊಂದು ಪ್ರಾಂತದವರೂ ಮತ್ತೊಂದು ಪ್ರಾಂತದವರಿಗೆ ಸಹಕಾರವನ್ನು ಉದಾರವಾಗಿ ನೀಡುತ್ತಿರುವ ಕಾರಣದಿಂದಲೇ ಈ ದಿವಸ ಅನೇಕ ಸ್ಟೇಟನವರು ಅವರಿಗೆ ಕೊಡಬೇಕೆಂದು ಒತ್ತಾಯವಾಡಿ ಪಡೆದಿದ್ದ ಆಹಾರದ ಕೋಟವನ್ನೆಲ್ಲಾ ಇಂದು ತೆಗೆದುಕೊಳ್ಳದೆ ಹಿಂದಕ್ಕೆ ಬಿಟ್ಟುಬಿಡುತ್ತಿದ್ದಾರೆ. ಅವರು ಖಂಡಿತವಾಗಿಯೂ ಹೀಗೆಯೇ ಮಾಡುತ್ತಾರೆಂದು ಹೇಳುವುದಕ್ಕಾಗದೇ ಇದ್ದರೂ ಅವರು ಹೇಳಿರುವುದನ್ನು ಸಾಮಾನ್ಯವಾಗಿ ನೋಡಿದರೆ ಆದಷ್ಟು ಬೇಗ ಇದನ್ನು ತೆಗೆದುಹಾಕಬೇಕೆಂಬ ಕಾತರತೆ ಕೇಂದ್ರ ಸರ್ಕಾರಕ್ಕೆ ಇರುವಂತೆ ಕಂಡುಬರುತ್ತಿದೆ.

ಅವರು ಮಿರೆಟ್ಸ್ ಮೇಲೆ ಈ ತಿಂಗಳೊಳಗಾಗಿ ಅಥವಾ ಮುಂದಿನ ತಿಂಗಳ ಮಧ್ಯಭಾಗದೊಳಗಾಗಿ ಕಂಟ್ರೋಲ್ ತೆಗೆಯುವ ತೀರ್ಮಾನವನ್ನು ಮೊದಲನೆಯದಾಗಿ ಫುಡ್ ಕಾನ್ಫರೆನ್ಸ್‌ನಲ್ಲಿ ಮಾಡಬಹುದೆಂದು ಹೇಳಿದ್ದಾರೆ. ಹಾಗೆ ಅವರು ಹೇಳಿರುವುದರಿಂದ ನಾವು ನಮ್ಮ ದೇಶದಲ್ಲಿ ಆ ತೀರ್ಮಾನವಾಗುವುದರೊಳಗಾಗಿಯೇ ರಾಗಿ ಮತ್ತು ಜೋಳದ ಡಿ-ಕಂಟ್ರೋಲ್‌ಮಾಡುವುದು ಒಳ್ಳೆಯದು. ಏಕೆಂದರೆ ನಮ್ಮ ಮುಖ್ಯ ಮಂತ್ರಿಗಳವರು ಮತ್ತು ಆಹಾರ ಮಂತ್ರಿಗಳು ಹೇಳಿರುವ ಹಾಗೆ ಮದ್ರಾಸ್ ಪ್ರಾಂತದಲ್ಲಿ ಪೂರ್ಣ ಡಿ-ಕಂಟ್ರೋಲ್ ಆಗುವುದಕ್ಕೆ ಮುಂಚಿತವಾಗಿಯೇ ನಮ್ಮ ಸಂಸ್ಥಾನದಲ್ಲಿ ಒಂದು ವಿಧದಲ್ಲಿ ಡಿ-ಕಂಟ್ರೋಲ್ ಪ್ರಾರಂಭವಾಯಿತು. ಈಗ ಇದನ್ನೇ ಮುಂದುವರಿಸಿ ಸರ್ಕಾರದವರು ರಾಗಿ ಮತ್ತು ಜೋಳದ ಮೇಲೆ ಹತೋಟಿ ತೆಗೆಯುವುದು ಸೂಕ್ತವೆಂದು ನನಗೆನ್ನಿಸುತ್ತದೆ. ಫುಡ್ ಮಿನಿಸ್ಟರ್‌ಗಳ ಕಾನ್ಫರೆನ್ಸ್‌ನಲ್ಲಿ ಏನು ತೀರ್ಮಾನವಾಗುತ್ತದೋ ಅದನ್ನು ನೋಡೋಣ ಎಂದು ಹೇಳಬಹುದು. ನನ್ನ ಅಭಿಪ್ರಾಯದಲ್ಲಿ, ಅವರೇನೇ ತೀರ್ಮಾನ ತೆಗೆದುಕೊಂಡರೂ, ನಾವು ನಮ್ಮ ಸಂಸ್ಥಾನದಲ್ಲಿ ಕೂಡಲೆ ಹುಕುಂ ನಿರೀಕ್ಷೆ ಮೇಲೆ ಈ ಕಂಟ್ರೋಲ್ ತೆಗೆಯುವುದರಿಂದ ತೊಂದರೆಯಾಗುವುದಿಲ್ಲ.

ಇಷ್ಟು ಮಾಡಿದರೂ ಕೂಡ, ಈಗ ದೇಶದಲ್ಲಿ ಯಾವ ಪ್ರದೇಶದಲ್ಲೂ ಮಳೆ ಸರಿಯಾಗಿ ಆಗದೆ ಸಾಕಾದಷ್ಟು ಆಹಾರಪದಾರ್ಥಗಳು ಇಲ್ಲದಿರುವುದರಿಂದ, ಕೂಡಲೆ ಈ ರೀತಿ ಡಿ-ಕಂಟ್ರೋಲ್‌ಮಾಡಿದರೂ, ಹಾಲ ಪಟ್ಟಣಗಳಲ್ಲಿ ಇನ್ನೂ ರೇಷನಿಂಗ್ ಇರುವುದರಿಂದ, ಒಂದಲ್ಲ ಒಂದು ವಿಧದಲ್ಲಿ ನಾವು ಪ್ರೊಕ್ಯೂರ್‌ಮೆಂಟನ್ನು ಇಟ್ಟುಕೊಳ್ಳಬೇಕಾದದ್ದು ಅನಿವಾರ್ಯವಾಗಿದೆ. ಈಗ ಈ ಪ್ರೊಕ್ಯೂರ್‌ಮೆಂಟ್ ಪಾಲಸಿಯ ವಿಚಾರದಲ್ಲಿ, ಅದು ಯಾವ ರೀತಿ ಇರಬೇಕೆಂಬ ವಿಚಾರದಲ್ಲಿ, ನಾವೀಗ ಸಲಹೆ ಕೊಡಬೇಕಾಗಿದೆ. ಇದುವರೆಗೂ, ಕಳೆದ ನಾಲ್ಕಾರು ವರ್ಷಗಳಿಂದ ಇದ್ದಂಥ 1949ನೆಯ ಇಸವಿಯ ಸುಗ್ಗಿಯ ಆಜ್ಞೆಯಲ್ಲಿ ಗೊತ್ತುಮಾಡಿರುವ ರೀತಿ ನೀತಿಗನುಗುಣವಾಗಿ ಇನ್ನು ಮುಂದೆಯೂ ಪ್ರೊಕ್ಯೂರ್‌ಮೆಂಟ್ ಮಾಡಬೇಕೇ, ಅಥವಾ ಈಗ ಈ ಸೂಚನೆಯಲ್ಲಿ ಸೂಚಿಸಿರುವ ಹಾಗೆ, ಲೆವಿ ಪದ್ಧತಿಯ ಪ್ರಕಾರ ಪ್ರೊಕ್ಯೂರ್ ಮಾಡಬೇಕೇ ಎಂಬುದನ್ನು ಈಗ ನಾವು ಅತ್ಯಾವಶ್ಯಕವಾಗಿ ಡಿಡೆರ್ಮಾಡಿ ತೀರ್ಮಾನಮಾಡಬೇಕಾಗಿದೆ. ನನಗೆ ತೋರುವುದೇನೆಂದರೆ, ಹಾಲ ಜಾರಿಯಲ್ಲಿದ್ದ 1949ನೆಯ ಇಸವಿಯ ಆಜ್ಞೆಯಲ್ಲಿ ಅಡಕವಾಗಿರುವ ರೀತಿನೀತಿಯೇ ಉತ್ತಮವಾದ್ದೆಂದೆನಿಸುತ್ತದೆ. ಅದೇ ಹೆಚ್ಚು ಶಾಸ್ತ್ರೀಯವಾದ ರೀತಿ. ಈ ಪ್ರಕಾರ assess ಮಾಡಿ ಪ್ರೊಕ್ಯೂರ್‌ಮೆಂಟ್‌ಮಾಡುವುದೇ ಒಳ್ಳೆಯದು. ಆದ್ದರಿಂದ ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಯೋಚನೆಮಾಡಬೇಕಾದ ಅವಶ್ಯಕತೆಯಿಲ್ಲ. ಏನಿದ್ದರೂ ಈಗಾಗಲೇ ನಭಾನಾಯಕರು ಮತ್ತು ಆಹಾರದ ಮಂತ್ರಿಗಳು ಹೇಳಿದಹಾಗೆ, ರೈತರಿಗೆ ಸಾಧ್ಯವಾದಮಟ್ಟಿಗೂ ತೊಂದರೆ ಕಡಮೆಮಾಡಬೇಕು. ನಮ್ಮ ಹಿಂದಿನ ಪ್ರೊಕ್ಯೂರ್‌ಮೆಂಟ್ ಪಾಲಸಿಯಿಂದ ಉಂಟಾಗುತ್ತಿದ್ದಂಥ ಕಷ್ಟನಷ್ಟಗಳನ್ನು ಆದಷ್ಟು ಕಡಮೆಮಾಡುವುದು ಹೇಗೆಂಬುದನ್ನು ನಾವು ಪರ್ಯಾಲೋಚನೆಮಾಡಬೇಕಾಗಿದೆ. ಹಿಂದಿನ 1949ನೆಯ ಸುಗ್ಗಿಯ ಆಜ್ಞೆಯಲ್ಲಿ

(ಶ್ರೀ ಎಂ. ಮಾದಯ್ಯ).

ಇದ್ದ ಒಂದು ತೊಂದರೆಯೆಂದರೆ, ಗ್ರಾಮಾಧಿಕಾರಿಗಳು ಸರಿಯಾಗಿ assess ಮಾಡುವುದಿಲ್ಲ; ಮತ್ತು assess ಮಾಡಿದಂಥ ಆಹಾರಧಾನ್ಯಗಳನ್ನು ಪ್ರೊಕ್ಯೂರ್ ಮಾಡುವಾಗ ಅನೇಕ ವಿಧದ ತೊಂದರೆಗಳಿಗೆ ಬೆಳೆಯುತಕ್ಕ ರೈತ ಈಡಾಗುತ್ತಿದ್ದ. ಈಗ ಅದರ ನಿವಾರಣೆಗಾಗಿ ಬೇರೊಂದು ಮಾರ್ಗವನ್ನು ಹುಡುಕಬೇಕಾಗಿದೆಯೇ ಹೊರತು ನ್ಯಾಯವಾದ ರೀತಿಯಲ್ಲಿ 1949ನೆಯ ಇಸವಿಯ ಆರ್ಡರೇ ಉತ್ತಮವೆಂದು ಹೇಳಬಹುದು. ಆದ್ದರಿಂದ ಈ ತೊಂದರೆಯನ್ನು ನಿವಾರಣೆಮಾಡುವ ಬಗ್ಗೆ ನಾವೀಗ ಸರ್ಕಾರಕ್ಕೆ ಒಂದು ನೀತಿಯನ್ನು ಹಾಕಿಕೊಡಬೇಕಾಗಿದೆ. ಏನೇ ಆಗಲಿ ಸಪ್ಲೈಸ್ ಹೋಲ್ಡರುಗಳಿಂದ ಪ್ರೊಕ್ಯೂರ್‌ಮಾಡಲೇಬೇಕೆಂದು ಆಗಲೇ ಹೇಳಿದ್ದೇನೆ; ಆ ಮೇಲೆ ನಮ್ಮ ಅಂತ್ಯ ಗುರಿ ಕಂಟ್ರೋಲನ್ನು ತೆಗೆಯುವುದಾಗಿರಬೇಕು. ಈ ಎರಡು ವಿಷಯಗಳನ್ನು ಗಮನದಲ್ಲಿಟ್ಟು ನ ಪು ಸಲಹೆ ಕೊಟ್ಟು, ಸರ್ಕಾರಕ್ಕೆ ಬೆಂಬಲಕೊಡುವುದು ಅತ್ಯಗತ್ಯ ಮತ್ತು ಸೂಕ್ತವಾಗಿರುತ್ತದೆ. ನಾನು ಆಗಲೇ ಹೇಳಿದ ಹಾಗೆ, ಪಿಲೆಟ್ಸ್ ಮೇಲೆ ಕಂಟ್ರೋಲ್ ಹೋದರೆ ಉಳಿದಿರತಕ್ಕ ಆಹಾರ ಧಾನ್ಯವೆಂದರೆ ಬತ್ತ ಮಾತ್ರ. ಇದನ್ನು ಯಾವ ರೀತಿ ತೆಗೆದುಕೊಳ್ಳಬೇಕೆಂಬುದು ಸ್ವಲ್ಪ ವಿಚಾರ್ಯನ್ವದವಾದ ವಿಚಾರ. ಈ ಬಗ್ಗೆ ಮಾನ್ಯ ಸದಸ್ಯರು ಕಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಕಳೆದ ಐದು ವರ್ಷಗಳಿಂದ ದೇಶದಲ್ಲಿರುವ ಎಲ್ಲಾ ಸಪ್ಲೈಸ್ ಹೋಲ್ಡರುಗಳಿಂದ ಎಷ್ಟೆಷ್ಟು ಸಪ್ಲೈಸ್ ಧಾನ್ಯ ಸರ್ಕಾರಕ್ಕೆ ಸಂದಾಯವಾಗಿದೆ, ಆ ಲೆಕ್ಕವನ್ನು ತೆಗೆದುಕೊಂಡು ಅದರ ಸರಾಸರಿಯಲ್ಲಿ ಶೇಕಡ 25 ಭಾಗವನ್ನು ಅವರಿಗೇ ಬಿಟ್ಟು ಉಳಿದ 75 ಭಾಗವನ್ನು ಸರ್ಕಾರಕ್ಕೆ ತೆಗೆದುಕೊಳ್ಳುವುದು ಸೂಕ್ತವೆಂದು ಅನೇಕ ಮಾಹನೀಯರು ಸೂಚನೆ ಕೊಟ್ಟಿದ್ದಾರೆ. ಈಗ ಇಂಡಿಯಾ ಸರ್ಕಾರದವರು ಸಲಹೆಮಾಡಿರುವುದನ್ನೂ ಅವರು ಹೇಳಿರುವುದನ್ನೂ ನೋಡಿದರೆ, ಮತ್ತು ಅದರಂತೆ ರಾಗಿ, ಜೋಳ ಇತ್ಯಾದಿ ಧಾನ್ಯಗಳ ಮೇಲೆ ಹತೋಟಿ ತಪ್ಪಿದ ಮೇಲೆ, ಪಿಕ್ಕ ಧಾನ್ಯವಾದ ಬತ್ತವನ್ನು ಶೇಕಡ ಎಷ್ಟು ಭಾಗದಷ್ಟು ತೆಗೆದುಕೊಳ್ಳಬೇಕಾಬುದನ್ನು ಗೊತ್ತುಮಾಡುವುದು ಸ್ವಲ್ಪ ಕಷ್ಟ. ನಮ್ಮ ಸಂಸ್ಥಾನದಲ್ಲಿ ಈಗಿನ ಸಂದರ್ಭದಲ್ಲಿ ಇಷ್ಟೇ percentತೆಗೆದುಕೊಳ್ಳಬೇಕೆಂದು ಸರ್ಕಾರದವರನ್ನು ಇಕ್ಕಟ್ಟಿಗೆ ಗುರಿಮಾಡುವುದು ಉಚಿತವಾಗಿ ಕಾಣುವುದಿಲ್ಲ. ಸಪ್ಲೈಸ್ಸನ್ನು ಯಾವ ರೀತಿಯೂ ಹಿಂದು ಮುಂದೆ ನೋಡದೆ ವಸೂಲುಮಾಡಿಯೆಂದು ಹೇಳಬಹುದು. ಈಗ ಆಹಾರದ ಮಂತ್ರಿಗಳು ಹೇಳುವ ರೀತಿಯಲ್ಲಿ, ಪೂರ್ಣ ಡಿ ಕಂಟ್ರೋಲ್ ಆದಷ್ಟುಬೇಗ ಆಗಬೇಕಾಗಿರುವುದರಿಂದ, ಸಪ್ಲೈಸ್ ಹೋಲ್ಡರುಗಳೂ **ಕೇವಲ ಕೆಲವು ಕಾಲ ಇದಕ್ಕೆ ಒಪ್ಪಿಗೆ ಕೊಟ್ಟು, ಪೂರ್ಣ ಡಿ-ಕಂಟ್ರೋಲು ಇನ್ನು ಒಂದು ವರ್ಷದಲ್ಲೇ ತರುವುದಕ್ಕೆ ಸಹಾಯಮಾಡಬೇಕೆಂದು** ಹೇಳುತ್ತೇನೆ. ಈ ಬಗ್ಗೆ ಸಭೆಯ ವರು ಬೆಂಬಲವನ್ನು ನೀಡಬೇಕೆಂದು ಹೇಳಿ ನಾನು ಪ್ರಾರ್ಥಿಸುತ್ತೇನೆ.

ಆ ಮೇಲೆ ಇನ್ನು ಕೆಲವು ತೊಂದರೆಗಳಿವೆ. ಸಪ್ಲೈಸ್ ಹೋಲ್ಡರುಗಳನ್ನು ಗೊತ್ತುಮಾಡುವಕಾಲ ಈಗಾಗಲೇ ಸನ್ನಿಹಿತವಾಗಿದೆ. ಆಗಲೇ ಆಕ್ಟೋಬರ್ ಕೊನೆಯಾಗುತ್ತಿದೆ. ಸಾಮಾನ್ಯವಾಗಿ ಆಕ್ಟೋಬರ್ ಮಧ್ಯದಲ್ಲಿ ಸುಗ್ಗಿಯು ಪ್ರಾರಂಭವಾಗುತ್ತದೆ. ಆದ್ದರಿಂದ ಸುಗ್ಗಿಯ ಅಜ್ಜಿಯ ಪ್ರಕಾರ ಗ್ರಾಮಾಧಿಕಾರಿಗಳು ಸಪ್ಲೈಸ್ ಹೋಲ್ಡರುಗಳನ್ನು assess ಮಾಡಿ ಪಟ್ಟಿಯನ್ನು ತಯಾರುಮಾಡಿಸತಕ್ಕದ್ದೇ ಆಥವಾ ಇನ್ನಾವ ರೀತಿಯಿರ್ಲಾದರೂ ತಯಾರುಮಾಡಿಸುವುದೇ ಎಂಬುದು ಗಮನಾರ್ಹವಾದ ವಿಚಾರ. ಸಾಧ್ಯವಾದರೆ ಈಗಿರುವ ಸುಗ್ಗಿಯ ಅಜ್ಜಿಯ ಪ್ರಕಾರ assess ಮಾಡಿಸಿ, ಅದರ ಲಿಸ್ಟ್ ಇಟ್ಟುಕೊಂಡು, ಸಪ್ಲೈಸ್ ಹೋಲ್ಡರುಗಳನ್ನು ಗೊತ್ತುಮಾಡಬಹುದು; ಹಾಗಿಲ್ಲದಿದ್ದರೆ ಈಗಾಗಲೇ ಸರ್ಕಾರದಲ್ಲಿ ಸರಿಯಾದ ರೀತಿಯಲ್ಲಿ ತಯಾರುಮಾಡಿದ ಸಪ್ಲೈಸ್ ಹೋಲ್ಡರುಗಳ ಪಟ್ಟಿಯಿದ್ದರೆ ಅದರ ಆಧಾರದ ಮೇಲೆ ರೆವಿ ಮಾಡಿಸಬೇಕೆಂದು ನಾನು ಸೂಚನೆ ಕೊಡಬಯಸುತ್ತೇನೆ.

ಆ ರೀತಿ ರೆವಿ ಮಾಡಿದಮೇಲೆ, ಆಯಾ ಸಪ್ಲೈಸ್ ಹೋಲ್ಡರುಗಳು ಧಾನ್ಯವನ್ನು deliver ಮಾಡುವುದರಲ್ಲಿ ನೇರವಾಗಿ ಸರ್ಕಾರಿ ಡಿಪೋಗಳಿಗೇ ಕೊಡುವಂತೆ ಮಾಡಬೇಕೆಂದು ಸೂಚಿಸುತ್ತೇನೆ. ಏಕೆಂದರೆ ಇದನ್ನು ಗ್ರಾಮಾಧಿಕಾರಿಗಳಿಗೇ ಬಿಟ್ಟರೆ ಸ್ಥಳೀಯ ಅನೇಕ ತೊಂದರೆಗಳಿಗೆ ಕಾರಣವಾಗುತ್ತದೆ. ಅಂಥಾದ್ದಕ್ಕೆ ಅವಕಾಶಕೊಡದೆ ಸರ್ಕಾರಿ ಡಿಪೋಗಳಿಗೇ ಕೊಡುವಂತಾದರೆ ಅಷ್ಟು ತೊಂದರೆಗೆ ಅವಕಾಶವಿರುವುದಿಲ್ಲ.

ಈ ಸಪ್ಲೈಸ್ ಧಾನ್ಯವನ್ನು ತೆಗೆದುಕೊಳ್ಳುವುದರಲ್ಲಿ ಆತನಿಗೆ ಯಾವ ಬೆಲೆಯನ್ನು ಕೊಡಬೇಕೆಂದು ಕೆಲವರು ಪ್ರಸ್ತಾಪಮಾಡಿದರು. ನನ್ನ ಅಭಿಪ್ರಾಯದಲ್ಲಿ ಯಾವ ಕಾರಣದಿಂದಲೂ ಸೂಡ ನುಮಾರು 25 ರೂಪಾಯಿಗಳ ಮೇಲೆ ಹೋಗಕೂಡದು. ದೇಶದ ಹಿತದೃಷ್ಟಿಯಿಂದ ಇದು ಒಳ್ಳೆಯ ದಲ್ಲ. ದೇಶಕ್ಕೆ ಅನ್ನದಾತರಾಗಿರುವ ಈ ರೈತರಿಗೆ ಎಲ್ಲಾ ವಿಧವಾದ ಅನುಕೂಲ ಸಹಾಯಗಳನ್ನೂ ಕೊಡುವುದಕ್ಕೆ ನಾನು ವಿರೋಧಿಸವೆ ಇದ್ದರೂ ಸಹ, ಈಗಿನ ಸರ್ಕಾರಕ್ಕಿರುವ ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಇನ್ನು ಹೆಚ್ಚಿಗೆ ಕೊಡಲಾರರೆಂಬುದನ್ನು ಅವರು ಮನಗಾಣಬೇಕು. ಬೇಕಾದರೆ ಅವರುಗಳ ಅನುಕೂಲಕ್ಕಾಗಿ ಇನ್ನೊಂದು ಅವಕಾಶವನ್ನು ಕಲ್ಪಿಸಿಕೊಡಬಹುದು. ಸಪ್ಲೈಸ್ ಹೋಲ್ಡರುಗಳಿಂದ ಒಂದು ಗೊತ್ತಾದ ಶೇಕಡಾ ಭಾಗವನ್ನು ತೆಗೆದುಕೊಳ್ಳಬೇಕೆಂದು ನಿಗದಿಮಾಡಿದ ಮೇಲೆ, ಅವರಲ್ಲಿ ಉಳಿದಂಥ ಧಾನ್ಯವನ್ನು ತವ.ಗೆ ಇಷ್ಟಬಂದ ರೀತಿಯಲ್ಲಿ ಮಾರಿಕೊಳ್ಳಲು ಅವಕಾಶ ಕೊಟ್ಟರೆ ಅತನಿಗೆ ಎಷ್ಟೋ ಸಹಾಯವಾಡಿದ ಹಾಗಾಗುತ್ತದೆ. ಇದರಿಂದ ಎಷ್ಟೋಮಟ್ಟಿನ ಲಾಭವಿದೆ ಮತ್ತು ಅವನ ಮನಸ್ಸಿಗೂ ಒಂದು ತೃಪ್ತಿಯಾಗುತ್ತದೆ. ಏಕೆಂದರೆ, ಸರ್ಕಾರದವರು ಧಾರಣೆಯನ್ನು ಹೆಚ್ಚಿಸಿ 25 ರೂಪಾಯಿಲ್ಲ, 35 ರೂಪಾಯಿಯನ್ನು ಕೊಟ್ಟರೂ ಅವನಿಗೆ ತೃಪ್ತಿಯಾಗುವುದಿಲ್ಲ. ತಾನೇ ತನ್ನ ಇಚ್ಛೆಯಂತೆ ಮಾರುವ ಅವಕಾಶ ಅವನಿಗೆ ಬೇಕು. ಆದ್ದರಿಂದ ಸರ್ಕಾರದವರು ಈಗಿನ ಪರಿಸ್ಥಿತಿಯಲ್ಲಿ ಎಷ್ಟು ಕನಿಷ್ಠಪಕ್ಷ ಬೇಕೋ ಅಷ್ಟು ತೆಗೆದುಕೊಂಡು ಮಿಕ್ಕದ್ದನ್ನು ಅವನಿಗೆ ಮಾರಿಕೊಳ್ಳುವುದಕ್ಕೆ ಪೂರ್ಣ ಅವಕಾಶಕೊಟ್ಟರೆ ಎಷ್ಟೋ ಅನುಕೂಲಮಾಡಿದ ಹಾಗಾಗುತ್ತದೆ.

Sri Mulka GOVINDA REDDY (Chitaldrug). On a point of order. This amendment is out of order.

Mr. SPEAKER.—Not at this stage. He is almost at the end of his speech.

Sri Mulka GOVINDA REDDY.—That should not have been allowed.

Mr. SPEAKER.—It is too late. He takes one minute more. He is the mover of the amendment.

ಶ್ರೀ ಎಂ. ಮಾದಯ್ಯ.—ಈ ಗಲೂ ಕೂಡ ಯಾವ ಹಳ್ಳಿಯಲ್ಲೂ ಸರ್ಕಾರದವರು ಗೊತ್ತುಪಡಿಸಿದ ತಕ್ಕ ಬೆಲೆಗೆ ಯಾರೂ ಮಾರುತ್ತಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದು. ಆದ್ದರಿಂದ ಸರ್ಕಾರದವರು ಬೆಲೆಯನ್ನು 25 ರೂಪಾಯಿಗೆ ಜಾಸ್ತಿಗೊತ್ತುಮಾಡದೆ, ಅವನಿಂದ ಎಷ್ಟು ಬೇಕೋ ಅಷ್ಟು ತೆಗೆದುಕೊಂಡು, ಉಳಿದದ್ದನ್ನು ಅವನು ಸ್ವೇಚ್ಛೆಯಾಗಿ ಮಾರಿಕೊಳ್ಳುವುದಕ್ಕೆ ಬಿಡಬೇಕೆಂದು ಕೇಳಿ, ಇದಕ್ಕೆ ಮಾನ್ಯ ಸಭೆಯವರು ಬೆಂಬಲಕೊಟ್ಟು ಸರ್ಕಾರಕ್ಕೆ ಸಹಾಯಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

1-30 P.M.

Mr. SPEAKER.—Amendment moved :

"That at the end of the motion the following words be added :

'and the system of procuring from surplus holders with the ultimate aim of complete decontrol be adopted'."

The main motion and the amendment are before the House for debate.

ಶ್ರೀ ಮುಲ್ಕಾ ಗೋವಿಂದ ರೆಡ್ಡಿ.—ನಾನು ಒಂದು point of order ಎತ್ತಿದೆ. ಅದರ ಮೇಲೆ ರೂಲಿಂಗ್ ಕೊಡಬೇಕು.

The motion moved by the Food Minister states like this :

"That the Food situation and the Levy System be taken into consideration."

The amendment is :

"and the system of procuring from surplus holders with the ultimate aim of complete decontrol be adopted."

It is not relevant to the main motion. It is not consistent with the main motion. So, it is out of order.

Mr. SPEAKER.—I hold it is not out of order because the levy, that is, the procurement has to be made from the surplus holders. His amendment is to the effect that procurement should be made from the surplus holders. That is in order.

ಶ್ರೀ ಹೆಚ್. ಕೆ ಶಿವರುದ್ರಪ್ಪ (ಗುಂಡ್ಲುಹೇಚೆ—ಹೆಗ್ಗಡದೇವನಕೋಟೆ).—ಹಿಂದೆ ಆಹಾರದ ವಿಷಯ ಪ್ರಸ್ತಾಪ ಮಾಡುವಾಗ ನಮ್ಮ ಮುಂದೆ ಯಾವ ಸೂಚನೆಯನ್ನೂ ಇಟ್ಟಿರಲಿಲ್ಲ. ಇಂದು ಒಂದು ಸೂಚನೆಯನ್ನಿಟ್ಟು ನಮ್ಮ ಅಭಿಪ್ರಾಯ ಕೇಳಿರುವುದರಿಂದ ಆ ದಿವಸ ಮಾತನಾಡಿದವರಿಗೂ ಇವೊತ್ತು ಅವಕಾಶ ಕೊಡಬೇಕೆಂದು ಹೇಳುತ್ತೇನೆ.

Mr. SPEAKER.—Preference will be given to those who had not taken part on that day.

Sri M. LINGANNA (Nanjangud).—I want to make one suggestion. Of course, an amendment has been placed before the House at your suggestion. In order to make the procedure more regular, I suggest that opportunities also may be given to other Members to move amendments to the main motion.

Mr. SPEAKER.—Yes. They may do so within 10 minutes. In the meanwhile, we will go on with the debate.

Sri A. BHEEMAPPA NAIK (Molakalmuru).—If the amendment is accepted by the Minister, we may be able to on the entire motion. Therefore, the Hon'ble Speaker may kindly request the Minister to say whether he is going to accept the amendment or not.

Mr. SPEAKER.—If the Hon'ble Minister were to accept the amendment, the amended motion will be before the House. As it is, the discussion may proceed on the motions and the amendment. It is left to the Minister to say whether he accepts the amendment or not.

Sri H. SIDDAVEERAPPA.—There may be some Members who may wish to express their views on the amendment. My view will depend upon how the discussion shapes. I want to be educated on that point. Therefore, whether I accept the amendment or not, I will reserve my opinion to the last.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಅಧ್ಯಕ್ಷರೇ, ಸ್ವಾಮಿ, ಈ ದಿವಸ ತಮ್ಮ ಮುಂದೆ ಇರತಕ್ಕಂಥ ನಿರ್ಣಯದ ವಿಚಾರದಲ್ಲಿ ನನ್ನ ಅಭಿಪ್ರಾಯ ಏನಿದೆ ಎಂದು ಹೇಳುವ ಉದ್ದೇಶದಿಂದ ನಾನು ಇಲ್ಲಿ ನಿಂತಿದ್ದೇನೆ. ಇಂಗ್ಲಿಷ್‌ನಲ್ಲಿ ಮಾತನಾಡಿದ್ದರೆ, ಆ ಭಾಷೆಗೆ ತಕ್ಕಂತೆ ಅದರ ವಿಷಯದಲ್ಲಿ ಮನಸ್ಸಿಗೆ ತೋಚಿದ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿತ್ತು. ಆದರೂ ಕನ್ನಡದಲ್ಲಿ ಮಾತನಾಡಬೇಕು ಎಂದು ನನ್ನ ಸ್ನೇಹಿತರು ಹೇಳುತ್ತಾ ಇರುವುದರಿಂದ ಕನ್ನಡದಲ್ಲಿ ಮಾತನಾಡತ್ತೇನೆ. ಸ್ವಾಮಿ, ಈಗ ಈ ವಿಚಾರದಲ್ಲಿನ ನಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಮುಂಚಿತವಾಗಿ ಈಗ ದೇಶದಲ್ಲಿ ಇರತಕ್ಕಂಥ Harvest system ಯಾವ ಆಧಾರದ ಮೇಲೆ ನಿಂತಿದೆ. ಈಗ propose ಮಾಡತಕ್ಕಂಥ levy system ಯಾವ ಆಧಾರದ ಮೇಲೆ ಮಾಡಿದ್ದಾರೆ ಮತ್ತು ಮುಂದೆ ಸರ್ಕಾರ ಆಹಾರದ ವಿಷಯದಲ್ಲಿ ಯಾವ ರೀತಿ ಕಾರ್ಯಕ್ರಮ ಇಟ್ಟುಕೊಳ್ಳಬೇಕು ಎಂಬ ಈ ಮೂರು ವಿಷಯಗಳನ್ನು

(ಶ್ರೀ ಎಸ್. ಶ್ರೀನಿವಾಸ್ಯೆಯ್ಯಂಗಾರ್).

ವಿಮರ್ಶೆ ಮಾಡಬೇಕು. ಅದಕ್ಕೆ ಮೊದಲು ನನಗೆ ಒಂದು ಅನ್ನಿಸುತ್ತದೆ: ಯಾವುದಾದರೂ ಒಂದು ಯೋಜನೆ ನಮ್ಮ ಸಂಸ್ಥಾನದಲ್ಲಿ ಜಾರಿಗೆ ಬಂದರೆ, ಆ ಯೋಜನೆಗೆ ಕಾರಣ economics ಅಂಕಿಅಂಶಗಳಿಂದ ಒಂದು ಯೋಜನೆಯನ್ನು ತಯಾರುಮಾಡುತ್ತಾರೆ. ಆ ಯೋಜನೆಯನ್ನು ತಯಾರುಮಾಡಿದಕೂಡಲೇ, ಯೋಜನೆ ಜಾರಿಯಲ್ಲಿ ಇರತಕ್ಕಂಥ ಕಾಲದಲ್ಲಿ ಮತ್ತು ಯೋಜನೆಯನ್ನು ಬಿಟ್ಟುಕೊಡುವ ಕಾಲದಲ್ಲಿ ಕೆಲವರಿಗೆ "ಈ ಯೋಜನೆ ಬಿಟ್ಟುಬಿಟ್ಟರೆ, ದೇಶ ಮಲಗಿಹೋಗುತ್ತದೆ; ಅನಾಯಕತ್ವವಾಗುತ್ತದೆ" ಎಂಬ ಭಾವನೆ ಇದ್ದಹಾಗೆ ಕಾಣುತ್ತದೆ. ಈಗ ಮೈಸೂರು ಸಂಸ್ಥಾನದಲ್ಲಿ ಜಮೀನು ಇರತಕ್ಕದ್ದು 1 ಕೋಟಿ 75 ಲಕ್ಷ ಚಿಲ್ಲರೆ ಎಕರೆಗಳು. ಅದರ ಪೈಕಿ ಸಾಗಿಗೆ ಲಾಯಕ್ಕಾಗಿರತಕ್ಕದ್ದು 82 ಲಕ್ಷ ಎಕರೆ. ಇದರಲ್ಲಿ ಆಕಾರ ಬಂದು, ಕರಾಬು ಜಾತಾ ಸಾಗುವ ಯಲ್ಲಿ ಇರುವುದು 64·55 ಲಕ್ಷ ಎಕರೆಗಳು. 64·55 ಎಕರೆ ಜಮೀನಿನಲ್ಲಿ ಆಹಾರಧಾನ್ಯಗಳನ್ನು ಬೆಳೆಯತಕ್ಕಂಥ ವಿಸ್ತೀರ್ಣ 36·4 ಲಕ್ಷ ಎಕರೆಗಳು. ಮೈಸೂರು ಸಂಸ್ಥಾನದಲ್ಲಿ ಇರತಕ್ಕಂಥ ಪ್ರಜಾಸಂಖ್ಯೆ 90 ಲಕ್ಷ. ಈ 36ಲಕ್ಷ ಎಕರೆ ಜಮೀನಿನಲ್ಲಿ ಆಹಾರಧಾನ್ಯವನ್ನು ಮೈಸೂರು ಸಂಸ್ಥಾನದಲ್ಲಿ ಈಗ ನಾವು ಬೆಳೆಯುತ್ತಿದ್ದೇವೆ. ನಾವು ಮತ್ತು ಆಡಳಿತಗಾರರು ನಿಜವಾಗಿಯೂ ನ್ಯಾಯವಾಗಿ ಕೆಲಸಮಾಡಿದರೆ 36 ಲಕ್ಷ ಎಕರೆ ಜಮೀನಿನಲ್ಲಿ ದೇಶಕ್ಕೆಲ್ಲಾ ಬೇಕಾಗತಕ್ಕಂಥ ಆಹಾರಧಾನ್ಯಗಳನ್ನು ಬೆಳೆಯುವುದಕ್ಕೆ ಆಗುತ್ತಿರಲಿಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಇದರಲ್ಲಿ ಯಾವ ವಿಷಯದಲ್ಲಿಯೋ ರೋಪದೋಷ ಇದೆ. 36 ಲಕ್ಷ ಎಕರೆ ಜಮೀನಿನಲ್ಲಿ ಆಹಾರಧಾನ್ಯ ಬೆಳೆದು 90 ಲಕ್ಷ ಪ್ರಜೆಗಳಿಗೆ ಆಹಾರಧಾನ್ಯ ಒದಗಿಸುವುದಕ್ಕೆ ಸಾಧ್ಯವಾಗದಿದ್ದರೆ, ನಗೆಗೇಡಿನ ವಿಷಯ. ಯಾವ ಕೆಲಸಕಾರ್ಯಗಳನ್ನು ಕೈಕೊಳ್ಳಬೇಕಾಗಿತ್ತೋ ಅವು ಯಾವುವನ್ನೂ ಮಾಡಲಿಲ್ಲ ಎಂದು ಗೊತಾಗುತ್ತದೆ. ಅದು ಹಾಗಿರಲಿ. ಈಗ ಇರುವ Harvest Order 1949ನೇ ಇಸವಿಯಿಂದಲೂ ಜಾರಿಯಲ್ಲಿರತಕ್ಕಂಥ ಆಹಾರ ನಿಯಂತ್ರಣ ಕಾನೂನು. ಕಾನೂನು ಮಾಡಬೇಕಾದರೆ, ಯಾವ ಆಧಾರದ ಮೇಲೆ ಕಾನೂನು ಮಾಡಿದರೆ ಮೇಲು; ನೋಡೋಣ. ಮೊಟ್ಟಮೊದಲನೆಯ ಆಹಾರ ನಿಯಂತ್ರಣದ ಅಡಿಪಾಯ ಅಂದಾಜು. ಅದು ಮಾಡಿದ್ದು unscientific. ಅದನ್ನು ಮಾಡತಕ್ಕಂಥ ಕಾಲ ಯಾವುದು? ಇನ್ನೂ ಆಹಾರಧಾನ್ಯ ಬೆಳೆಯಲ್ಲಿ ಇದ್ದಾಗಲೇ ಮಾಡುತ್ತಾರೆ. The estimate is made by the village officers when the crop is in the stage of a standing crop. It is most uncertain. ಎರಡನೆಯ ಅಡಿಪಾಯ ಯಾವುದು? Determination of the surplus. Surplus ಎನ್ನುವ ಪದಕ್ಕೆ ಅರ್ಥವೇನೆಂದರೆ, ಜಮೀನ್ದಾರನಿಗೆ ಬೇಕಾದಂಥ ದವಸ ಎಷ್ಟು ಮತ್ತು ಬೆಳೆದ ದವಸ ಎಷ್ಟು, ಈ ಎರಡರ ವ್ಯತ್ಯಾಸವೇ ಸರ್‌ಪ್ಲಸ್. ಅನಂತರ ಉಳಿಯತಕ್ಕಂಥ ಧಾನ್ಯದ ನಿಗದಿಯ ಸಂದರ್ಭದಲ್ಲಿಯೂ ಅನೇಕ ಲೋಪದೋಷಗಳು ಬರುವುದಕ್ಕೆ ಅವಕಾಶ ಇದೆ. ಮೂರನೆಯ Harvest Order ನ ಅಡಿಪಾಯ "restriction of movement". ಯಾವ ಮನುಷ್ಯನಾಗಲಿ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ತನ್ನ ಭೂಮಿಯಿಂದ ಬೆಳೆದಂಥ ಪದಾರ್ಥವನ್ನು ಮನೆಗೆ ತರಕೂಡದು ಎನ್ನತಕ್ಕಂಥ ಒಂದು estriction, ನಿಯಮ ಇದೆ. ಒಂದೇ ಗ್ರಾಮದಲ್ಲೇನೋ ತರಬಹುದು. ನಾಲ್ಕನೆಯದು ಆಹಾರ ಸಂಗ್ರಹಣ ನಿಯಂತ್ರಣದ ಮುಖ್ಯವಾದ ಕರ್ತವ್ಯವಾದಂಥ ನಿಯಮ, ಶಿಕ್ಷೆಗೆ ಒಳಪಡುವ ನಿಯಮ. ಅದೇನೆಂದರೆ "every holder shall deliver his surplus". It is the most important section of the Harvest order. ಅದರಲ್ಲಿಯೂ ತನ್ನ ಉಪಯೋಗಕ್ಕೆ ಬೇಕಾದಂಥ ಧಾನ್ಯವನ್ನು ಬಿಟ್ಟು ಉಳಿಯತಕ್ಕ ಧಾನ್ಯವನ್ನು ಸರ್ಕಾರಕ್ಕೆ ಕೊಟ್ಟೇ ತೀರಬೇಕು ಎನ್ನತಕ್ಕಂಥ ನಿಯಮ. ಈ ನಾಲ್ಕು ನಿಯಮಗಳಿಂದ Harvest Order ಕಟ್ಟಿದೆ. ಈಗ ಇದಕ್ಕೆ ಅವಶ್ಯಕತೆ ಇದೆಯೇ? ಈ ಕಾನೂನು ಕಳೆದ 8 ವರ್ಷಗಳಿಂದ ಆಚರಣೆಯಲ್ಲಿದ್ದಾಗ ಎಷ್ಟರಮಟ್ಟಿಗೆ ಇದರಿಂದ ಅನ್ಯಾಯ ಕಂಡುಬಂದಿದೆ ಎಂಬುದನ್ನು ನೋಡಬೇಕು. ಅನೇಕ ಮಾನ್ಯ ಸದಸ್ಯರು ಹಿಂದೆ ಒಂದು ದಿನ ಈ ವಿಷಯದ ಮೇಲೆ ಈ ಸಭೆಯಲ್ಲಿ ದೀರ್ಘವಾಗಿ ಚರ್ಚೆ ಆದ ಕಾಲದಲ್ಲಿ ಮೊಟ್ಟಮೊದಲನೆಯ ಹಂತವಾದ estimated standing crop ನಿಂದ ಬಹಳ ಅನ್ಯಾಯವಾಗುತ್ತಿದೆ, ಕಿರುಕುಳವಾಗುತ್ತಿದೆ, ಶ್ಯಾನುಭೋಗರು ಕೈತೂಕ ಹಾಕುತ್ತಾರೆ, ಪಟೇಲ್ ಶ್ಯಾನುಭೋಗರು ಹಾಗೆ ಮಾಡುತ್ತಾರೆ ಹೀಗೆ ಮಾಡುತ್ತಾರೆ ಎನ್ನುವ ಕೂಗು ಸರ್ವೇ ಸಾಮಾನ್ಯವಾಗಿದೆ ಎಂದು ಹೇಳಿದ್ದಾರೆ. ಸರ್ಕಾರದ ವರಿಗೆ ಕೊಡತಕ್ಕಂಥ ಧಾನ್ಯದ ಪೊತ್ತದ ನರಾನರಿಯಲ್ಲಿ, 75ರಷ್ಟು ಭಾಗವನ್ನು ಈಗ ಕೊಟ್ಟೇ ಕೊಡಬೇಕು ಎನ್ನುವ ತತ್ವವನ್ನು ಆಚರಣೆಮಾಡೋಣ ಎಂದು ಇಲ್ಲಿ ಸಲಹೆ ಬಂತು. ಈ ಪೊತ್ತವನ್ನು ಯಾವ ಆಧಾರದ ಮೇಲೆ ಗೊತ್ತುಮಾಡುವುದು? ಅಂದಾಜಿನ ಮೇಲೆ ಮಾಡುವುದು ತಪ್ಪು, ಸರಿಯಾದ ಪೊತ್ತ ಬರುವುದಿಲ್ಲ ಎಂದು ರೈತರು ಆಗಲೇ ಗೋಳು ಹೊಯಿದುಕೊಳ್ಳುತ್ತಿದ್ದಾರೆ. ಅದೇ ಆಧಾರದ ಮೇಲೆ ಕೊಡಬೇಕು ಎನ್ನುವ ಪದ್ಧತಿಯು ಸರಿಯಲ್ಲ. It is a most unscientific method to depend on an estimate. I quite know the subject well.....

Sri H. SIDDAVEERAPPA.—Because you are an agriculturist.

Sri S. SREENIVASA IYENGAR.—I am proud of being called an agriculturist.

Sri H. SIDDAVEERAPPA.—I am also an agriculturist.

Mr. SPEAKER.—These interruptions should cease. The Member may go on.

ಶ್ರೀ ಎಸ್. ಶ್ರೀನಿವಾಸ್ಯೆಯ್ಯಂಗಾರ್.—ಎರಡನೆಯ ಹಂತದಲ್ಲಿ ನಾನು ಹೇಳಿದ ಸರ್‌ಪ್ಲಸ್‌ನ್ನು determine ಮಾಡತಕ್ಕದ್ದು. Harvest Order ನಲ್ಲಿ ಇದೆ. ತನ್ನ ಜೀವನಕ್ಕೆ ಬೇಕಾದಂಥ ದವನಧಾನ್ಯಗಳನ್ನು ಇಟ್ಟುಕೊಂಡು ಅವಕ್ಕಿಂತಲೂ ಹೆಚ್ಚಿಗೆ ಬೆಳೆದಿರತಕ್ಕಂಥ ದವಸವನ್ನು ಸರ್ಕಾರಕ್ಕೆ ಮಾರಬೇಕು ಎಂಬ ನಿಯಮಕ್ಕೆ ಒಂದು ಹಿನ್ನೆಲೆ ಇದೆ. ಅದು ಏನು ಹೇಳುತ್ತದೆ ಎಂದರೆ, ಒಂದು ಗ್ರಾಮದಲ್ಲಿ ಇದ್ದಂಥ ಜನ ಸಂಖ್ಯೆಯಲ್ಲಿ, ಜಮೀನು ಇಲ್ಲದೆ ಇರತಕ್ಕ ಪ್ರತಿಯೊಬ್ಬ ಪ್ರಜೆಗೂ ಆಹಾರಧಾನ್ಯವನ್ನು ಒದಗಿಸಿಕೊಡುವ ಉದ್ದೇಶಕ್ಕಾಗಿ, ಬೆಳೆದಂಥ ಧಾನ್ಯದ ಪೊತ್ತದಲ್ಲಿ ತನ್ನ ಜೀವನಕ್ಕೆ ಬೇಕಾಗಿರುವಷ್ಟನ್ನು ಬಿಟ್ಟು ಉಳಿದ ಹೆಚ್ಚಿಗೆ ಪೊತ್ತದ ಧಾನ್ಯವನ್ನು ನಿಗದಿ ಬೆಲೆಗೆ ನಾವು ಕೊಂಡು

ಕೊಂಡು, ಜಮೀನು ಇಲ್ಲದೇ ಇರುವವರಿಗೆ ಹಂಚುತ್ತೇವೆ ಎಂಬ ಭರವಸೆಯನ್ನು ಸರ್ಕಾರದವರು ಕೊಟ್ಟಿರುವುದರಿಂದ, ಆ ಗ್ರಾಮದಲ್ಲಿರುವ ರೈತರು ತಮ್ಮ ಜಮೀನಿನಲ್ಲಿ ಬೆಳೆದು ಸರ್ಕಾರಕ್ಕೆ ಧಾನ್ಯವನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಈಗ ಏನಾಗಿದೆ ಎಂದರೆ: 4 ಪಟ್ಟಣಗಳಲ್ಲಿರುವವರಿಗೆ ಸರ್ಕಾರದವರು ದವಸ ಒದಗಿಸುವ ಜವಾಬ್ದಾರಿ ಇಟ್ಟುಕೊಳ್ಳುತ್ತೇವೆ, ಸಂಸ್ಥಾನದಲ್ಲಿ ಉಳಿದ ಭಾಗಗಳಿಗೆ ಕೊಡುವುದಿಲ್ಲ ಎಂದು ಹೇಳಿದ ಮೇಲೆ, ಯಾವ ರೈತ, ತಮ್ಮ ಗ್ರಾಮದಲ್ಲಿ ಜಮೀನು ಇಲ್ಲದೆ ಇರುವವರ ಶಿಸ್ತಿಗೆ ಒಳಗಾಗದೆ, ನೂರಾರು ಮೈಲು ದೂರ ಪಟ್ಟಣಗಳಲ್ಲಿರುವವರಿಗೆ ಕೊಡುತ್ತಾನೆ? ಯಾರೂ ಕೊಡುವುದಿಲ್ಲ. ಕೊಡಬೇಕಾದರೂ ಬಹಳ ಕಷ್ಟಸ್ಥಿತಿಯಿಂದ ಕೊಡುತ್ತಾರೆ. ಸಂಸ್ಥಾನದ ಅಂಕಿ ಅಂಶಗಳ ಪ್ರಕಾರ ಜಮೀನು ಇರುವವರು ಮತ್ತು ಜಮೀನು ಇಲ್ಲದವರು ಎಂಬ ಎರಡು ಭಾಗಗಳಿವೆ. ಜಮೀನು ಇರುವವರು ಎಷ್ಟು ಸಂಖ್ಯೆಯಲ್ಲಿದ್ದಾರೆ, ಜಮೀನು ಇಲ್ಲದೇ ಇರುವವರು ಎಷ್ಟು ಸಂಖ್ಯೆಯಲ್ಲಿದ್ದಾರೆ ಎಂದು ಸಂಸ್ಥಾನಕ್ಕೆ ಕಾಲ್ಕಾ ಅನ್ಯಯಿಸುವ ಹಾಗೆ ಅಂಕಿಅಂಶಗಳನ್ನು ಈಗ ಕೊಡುವುದಕ್ಕಾಗುವುದಿಲ್ಲ. ಸದ್ಯದಲ್ಲಿ ಮೈನೂರು ಜಿಲ್ಲೆಯಷ್ಟಕ್ಕೇ ಕೊಡುತ್ತೇನೆ. ಮೈನೂರು ಜಿಲ್ಲೆಯಲ್ಲಿ 8.9 ಲಕ್ಷ ಎಕರೆ ಜಮೀನು ಇದೆ. 10 ಲಕ್ಷ ಪ್ರಜಾಸಂಖ್ಯೆಯ ಪೈಕಿ, ಎಷ್ಟು ಜನರಿಗೆ ಜಮೀನು ಇದೆ ಎಂದರೆ, 4 ಲಕ್ಷ ಪ್ರಜಾಸಂಖ್ಯೆಗೆ ಜಮೀನು ಇದೆ, ಏಕ್ಕ 6 ಲಕ್ಷ ಪ್ರಜಾ ಸಂಖ್ಯೆ ಕೆಲಸವಾಡಿ ಕೊಂಡು ತಿನ್ನಬೇಕು.

ಶ್ರೀ ಎಂ. ಶಂಕರಲಿಂಗೇಗೌಡ.—4 ಲಕ್ಷ ಜನರಿಗೂ ಖಾತೆ ಇದೆಯೇ ?

ಶ್ರೀ ಎಸ್. ಶ್ರೀನಿವಾಸಐಯ್ಯಂಗಾರ್.—4 ಲಕ್ಷ Families; ಒಂದು Familyಗೆ 5ರಂತೆ ಭೂಮಿ ಇರುವವರನ್ನು cover ಮಾಡುತ್ತದೆ.

Mr. SPEAKER.—May I fix a time limit for speakers ?

Sri S. SRINIVASA IYENGAR.—I have no objection.

Mr. SPEAKER.—I think, not exceeding 15 minutes may be sufficient for each speaker.

Sri A. BHEEMAPPA NAIK.—15 minutes will be too much,

Mr. SPEAKER.—Not exceeding 15 minutes, I said. It is left to my discretion.

ಶ್ರೀ ಎಸ್. ಶ್ರೀನಿವಾಸ್ಯೆಯ್ಯಂಗಾರ್.-ಪ್ರತಿಯೊಂದು ಹಳ್ಳಿಯಲ್ಲಿಯೂ ಬಹಳ ಜನ ಜಮೀನಿಲ್ಲದೇ ಇರುವವರಿದ್ದಾರೆ. ಸರ್ಕಾರದವರು ಹಿಂದಿನ ಪದ್ಧತಿಯಂತೆ ಪುನಃ ಈ ವರ್ಷವೂ ಹಾಗೆಯೇ ಶೇಕಡ 25 ರಷ್ಟು ಬಿಟ್ಟು 75 ರಷ್ಟು ಪಡೆಯುತ್ತೇವೆಂದರೆ ಅದು ನಡೆಯುವುದಿಲ್ಲ. ಮೊದಲನೆ ಪದ್ಧತಿಯ ಮೇರೆಗೆ ಯಾವ ಶಿಸ್ತನ್ನಿಟ್ಟು ಕೊಂಡಿದ್ದೀರೋ ಹಾಗೆಯೇ ಮುಂದೆಯೂ ಮಾಡುವುದು ಸಾಧ್ಯವೂ ಅಲ್ಲ, ನ್ಯಾಯವೂ ಅಲ್ಲ.

ಎರಡನೆಯದು 'ಲೆವಿ' ಪದ್ಧತಿ. ಈಗ ನಮ್ಮ ಮುಂದೆ ಸೂಚಿತವಾದ 'ಲೆವಿ' ಪದ್ಧತಿ ಆಷ್ಟೇನೂ ಧರ್ಮವಾದುದಲ್ಲ. ಇದಕ್ಕೆ ಕಾರಣ, ಐದು ಎಕರೆಗೊಳಪಟ್ಟ ಹಿಡುವಳಿದಾರರ ಸಂಖ್ಯೆ, ಒಟ್ಟು ಜಮೀನು ಹಿಡುವಳಿದಾರರ ಪೈಕಿ ಕಾಲು ಭಾಗ, ಎಂದರೆ, 80 ಲಕ್ಷ ಎಕರೆ ಜಮೀನಿನ ಪೈಕಿ 20 ಲಕ್ಷ ಎಕರೆ ಇವರಿಗೆ ಸೇರಿದೆ. ಇನ್ನೂ ನಿರ್ದಿಷ್ಟವಾದ ಅಂಕಿಹೇಳುವುದಾದರೆ, ಸಂಸ್ಥಾನದಲ್ಲಿರುವ 82·63 ಲಕ್ಷ ಎಕರೆಗಳ ಪೈಕಿ 20·61 ಲಕ್ಷ ಎಕರೆಗಳು ಐದು ಎಕರೆಗಿಂತ ಕಡಮೆ ಇರತಕ್ಕ ಹಿಡುವಳಿದಾರರಿಗೆ ಸೇರಿವೆ. ಅಂದ ಮೇಲೆ ಒಟ್ಟು ಜಮೀನು ವಿಸ್ತೀರ್ಣದ ನಾಲ್ಕು ಭಾಗದಲ್ಲಿ ಮೂರು ಭಾಗದ ವಿಸ್ತೀರ್ಣ ಶೇಕಡ 40 ರಷ್ಟು ಜನ ಹಿಡುವಳಿದಾರರಲ್ಲಿ ಉಳಿದಿದೆ. ಪ್ರಜಾ ಸಂಖ್ಯೆಯಲ್ಲಿ ಶೇಕಡ 60 ರಷ್ಟು ಜನ ಒಟ್ಟು ವಿಸ್ತೀರ್ಣದಲ್ಲಿ ಕಾಲು ಭಾಗ ಜಮೀನನ್ನು ಳ್ಳವರಾಗಿದ್ದಾರೆ.

Sixty per cent of the people hold one fourth of the total acreage of land while forty per cent hold seventy-five per cent i.e., three-fourths of the total acreage of land in the State.

ಈ ರೀತಿ ಇರುವುದರಿಂದ, 'ಲೆವಿ' ಪದ್ಧತಿಯನ್ನು ಒಂದು ವೇಳೆ ಜಾರಿಗೆ ತರಬೇಕಾದರೆ, ಐದು ಎಕರೆಗೆ ಕಡಮೆ ಜಮೀನುಳ್ಳ ಹಿಡುವಳಿದಾರನಿಗೆ ವಿನಾಯಿತಿಕೊಡಬೇಕು. ಐದು ಎಕರೆಗೆ ಕಡಮೆಯಿರುವ ಹಿಡುವಳಿದಾರರ ಸಂಖ್ಯೆಯ ಲೆಕ್ಕದಿಂದ ಸಿಕ್ಕುತ್ತದೆ. ಹೇಗೆಂದರೆ, ನಮ್ಮ ಸಂಸ್ಥಾನದಲ್ಲಿ ಶಾಸ್ತ್ರೀಯವಾಗಿ ರೆವೆನ್ಯೂ ಸರ್ವೆ ಮತ್ತು ಸೆಟಲ್‌ಮೆಂಟ್ ಆಗಿದೆ; ಖಾತೆಗಳಿವೆ. ರೆವೆನ್ಯೂ ಇಲಾಖೆಯ ಲೆಕ್ಕದಲ್ಲಿ ನುಭವವಾಗಿ ಸಿಕ್ಕುತ್ತದೆ. ಹೀಗೆ ಐದೆಕರೆಗೊಳಪಟ್ಟಿರುವ ಹಿಡುವಳಿದಾರರಿಗೆ ವಿನಾಯಿತಿ ಕೊಟ್ಟು ಇದಕ್ಕಿಂತ ಹೆಚ್ಚು ಜಮೀನಿರುವ ಹಿಡುವಳಿದಾರರಲ್ಲಿ ಸಂಸ್ಥಾನದಲ್ಲಿ ಸಾಗುವಳಿಯಲ್ಲಿರುವ ಒಟ್ಟು ಜಮೀನಿನ ವಿಸ್ತೀರ್ಣದಲ್ಲಿ ಮುಕ್ಕಾಲುಭಾಗ ಇರುವುದರಿಂದ, ಒಟ್ಟು ಜಮೀನಿಗೆ ಎಷ್ಟು ದವಸ ಬೇಕೋ ಅಷ್ಟನ್ನು ಇವರಿಂದ ವಸೂಲು ಮಾಡುವುದಕ್ಕೆ ಅವಕಾಶವಿದೆ, ನನ್ನಲ್ಲಿ ಇದಕ್ಕೆ ಆಧಾರವಾಗಿ ಅಂಕಿ ಅಂಶಗಳಿವೆ, ಅಧ್ಯಕ್ಷರು ನನಗೆ ಕಾರಾವಕಾಶ ಗೊತ್ತು ಮಾಡಿರುವುದರಿಂದ ಅವನ್ನೆಲ್ಲಾ ಹೇಳಲು ಕಾಲ ಸಾಲುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ, 'ಲೆವಿ' ಪದ್ಧತಿ ಜಾರಿಗೆ ಬರುವುದರಲ್ಲಿ ಬಹಳ ಅನಾನುಕೂಲವಿದೆ. ಇದ್ದರೂ ಒಂದೇ ಒಂದು ಸೌಲಭ್ಯವೆಂದರೆ, ಇದರಲ್ಲಿ ಖಚಿತವಾಗಿ ಒಬ್ಬ ಮನುಷ್ಯ ಎಷ್ಟು ಕೊಡಬೇಕೆಂಬುದನ್ನು ಕಂಡು ಹಿಡಿಯಬಹುದು. ಅವನಿಗಿರುವ ಜಮೀನಿನ ವಿಸ್ತೀರ್ಣದ ಮೇರೆ ದಾವಾಷಾಮೇರೆ ಹಂಚಿ ಲೆವಿ ಮಾಡಬಹುದು. ಇದರಲ್ಲಿ 5 ಎಕರೆಗಿಂತ ಕಡಮೆ ಇರುವವರನ್ನು ಬಿಟ್ಟು ನಿಮಗೆ ಬೇಕಾದ ದವಸ ವಸೂಲು ಮಾಡಲು ಸಾಧ್ಯವಿದೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಇದರಲ್ಲಿ ತರೀ ಜಮೀನೆಷ್ಟಿದೆ ?

ಶ್ರೀ ಎಸ್. ಶ್ರೀನಿವಾಸ್ಯೆಯ್ಯಂಗಾರ್.—ನಾನು ಮಾತನಾಡಿದ್ದು 7·6 ಲಕ್ಷ ಎಕರೆ ತರೀ ಜಮೀನಿನ ವಿಷಯ. ಒಟ್ಟು 36·45 ಲಕ್ಷ ಎಕರೆ ಇದೆ. ಖುಷ್ಕಿ ಜಮೀನಿನ ವಿಷಯ, ಬಾಕಿ ಜಮೀನಿನ ವಿಷಯ ಎಲ್ಲದರ ಅಂಕಿ ಅಂಶಗಳೂ ನನ್ನಲ್ಲಿವೆ. ಅವನ್ನೆಲ್ಲಾ ವಿವರಿಸಲು ಕಾಲಾವಕಾಶವಿಲ್ಲ. ಇರತಕ್ಕ ಅವಕಾಶದಲ್ಲಿ ನನ್ನ ಅಭಿಪ್ರಾಯವನ್ನು ಮಾತ್ರ ಸಭೆಯ ಮುಂದಿಟ್ಟುಬಿಡುತ್ತೇನೆ. ಹಾರ್ವೈಸ್ಟ್ ಆರ್ಡರಿನಲ್ಲಿದ್ದ ನಿರ್ಬಂಧ ಲೆವಿ ಪದ್ಧತಿಯಲ್ಲಿಯೂ ಇದ್ದೇ ಇದೆ. ಸರ್ಕಾರಕ್ಕೆ ಕೊಡಬೇಕಾದ್ದನ್ನು ಕೊಟ್ಟೇ ಕೊಡಬೇಕು. ಊರಿಂದ ಊರಿಗೆ ಸಾಗಿಸಬಾರದು. ಇದನ್ನು ಸಡಿಲ ಮಾಡಿದರೆ ಸರ್ಕಾರಕ್ಕೆ ದವಸ ಬರುವುದು ಅನುಮಾನ ಎಂದು ಸೂಚಿಸಲಾಗಿದೆ. ನಮಗೆ ಕೊಟ್ಟಿರುವ ಈ ನೋಟ್ ನೋಡಿದರೆ, ಇದರಲ್ಲಿ

(ಶ್ರೀ ಎಸ್. ಶ್ರೀನಿವಾಸ್ಯೆಯ್ಯಂಗಾರ್).

" The tenant, the holder and any other person interested in the land shall be jointly and severally responsible for the surrender " ಎಂದು ಅದರಲ್ಲಿ ಶಿಫಾರಸ್ಸಿದೆ. ಆ ರೀತಿ ಮಾಡಿದರೆ ಒಂದು ವೇಳೆ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ನಾನು ಹೇಳುವುದಿಷ್ಟು. ಸರ್ಕಾರದಲ್ಲಿ ಈಗಿರುವ ಸ್ಥಿತಿಯಲ್ಲಿ, ಯಾವಾಗ ಸರ್ಕಾರದವರು ಜಮೀನಿಲ್ಲದೇ ಇರುವವರಿಗೆ ಬೇಕಾದ ಆಹಾರವನ್ನು ಸರಬರಾಯಿ ಮಾಡತಕ್ಕ ಜವಾಬ್ದಾರಿಯನ್ನು ಇಟ್ಟುಕೊಳ್ಳುವುದಿಲ್ಲವೋ ಆಗ ರೈತ ಬೆಳೆಯುವುದರಲ್ಲಿ ತೆಗೆದುಕೊಳ್ಳುವುದಕ್ಕೆ ಅವರಿಗೆ ಹಕ್ಕಿಲ್ಲ. ಆದ್ದರಿಂದ ಡಿ-ಕಂಟ್ರೋಲ್ ಮಾಡುವುದರ ಸಮಾನ ಸಾಧುವಾದಂಥ ಮಾರ್ಗ ಇನ್ನಾವುದೂ ಇಲ್ಲ. ಡಿ-ಕಂಟ್ರೋಲ್ ಮಾಡುವುದರಿಂದ ದೇಶದಲ್ಲಿ ಖಂಡಿತವಾಗಿಯೂ ಅನಾಯಕತ್ವ ಉಂಟಾಗುವುದಿಲ್ಲ. ಹೇಗಿದ್ದರೂ ಹೊರ ದೇಶದಿಂದ 75 ಸಾವಿರ ಟನ್ ತರಿಸುತ್ತಿದ್ದೀರಿ. ಒಂದು ವರ್ಷಕ್ಕೆ ಬೇಕಾಗುವಷ್ಟು ಸ್ವಲ್ಪ ಹೆಚ್ಚು ಕಡಮೆ ಒದಗಬಹುದು. ನನ್ನ ಅನುಭವಕ್ಕೆ ಬಂದಿರುವ ಒಂದು ವಿಷಯ ಹೇಳುತ್ತೇನೆ. ಸಹಕಾರ ಸಂಘದಲ್ಲಿ ನಮ್ಮ ಟಿ. ನರಸೀಪುರದಲ್ಲಿ ಪ್ರತಿಯೊಬ್ಬ ಪ್ರಜೆಯೂ ತಪ್ಪದೆ ಕಾರ್ಡುಗಳನ್ನು ಪಡೆಯುತ್ತಿದ್ದರು. ಕಾರ್ಡಿನಲ್ಲಿ ನಾಲ್ಕು ವೀಸೆ ಕೊಡಬೇಕೆಂದಿದ್ದರೆ ಅದು ಸಾಲುವುದಿಲ್ಲ, ಅದನ್ನು ಆರು ವೀಸೆ ಮಾಡಬೇಕೆಂದು ಒತ್ತಾಯ ಮಾಡಿ, ಪ್ರತಿ ತಿಂಗಳೂ ತಪ್ಪದೆ ಅಷ್ಟು ನಕ್ಕರೆಯನ್ನೂ ಪಡೆಯುತ್ತಿದ್ದರು. ಕಂಟ್ರೋಲ್ ಇದ್ದಾಗ. ಡಿ-ಕಂಟ್ರೋಲ್ ಆದ ಮೇಲೆ ಇಲ್ಲಿಯವರೆಗೆ ಯಾರೂ ನಾಲ್ಕು ವೀಸೆ ಕೂಡ ತೆಗೆದುಕೊಂಡಿಲ್ಲ. ಯಾವಾಗ ಒಂದು ಪದಾರ್ಥಕ್ಕೆ ಅಭಾವ ಬರುತ್ತದೆಂಬ ಹೆದರಿಕೆ ಜನರಲ್ಲಿ ಇರುತ್ತದೆಯೋ ಆಗ ಮುಂದೆ ಅದು ಸಿಕ್ಕುತ್ತದೆಯೋ ಇಲ್ಲವೋ, ನಾಳೆ ಏನು ಬೆಲೆಯಾಗುತ್ತದೆಯೋ ಏನೋ ಎಂಬ ಗಾಬರಿಯಿಂದ ಹೆಚ್ಚು ಹೆಚ್ಚಾಗಿ ಕೊಂಡಿಟ್ಟುಕೊಳ್ಳುತ್ತಾರೆ. ಯಾವಾಗ ಧೈರ್ಯವಾಗಿ ಡಿ-ಕಂಟ್ರೋಲ್ ಮಾಡುತ್ತೀರೋ ಆಗ ಯಾರುಯಾರಿಗೆ ಎಷ್ಟು ಬೇಕೋ ಅಷ್ಟು ಮಾತ್ರ ತೆಗೆದುಕೊಳ್ಳುತ್ತಾರೆ. ಸರ್ಕಾರದವರು ಒಂದು ವಾದ ಹೇಳಬಹುದು. 'ನಾಳೆ ಕ್ಷಾಮ ಬಂದರೆ ಏನು ಮಾಡುವುದು, ಇರುವ ದವಸವೂ ಮಾಯವಾಗಿ ಹೋಗುತ್ತದೆ; It goes underground. Is it possible to get Reserve police, search and get every grain ; so it may not be possible' ಎಂದು ಹೇಳಬಹುದು. ಇದಕ್ಕೆ ನಾನು ಪರಿಹಾರ ಮಾರ್ಗ ಹೇಳುತ್ತೇನೆ. ನೀವು ಎಷ್ಟು ದವಸವನ್ನು ಹೊರಗಿನಿಂದ ತರಿಸುತ್ತೀರೋ ಅದರಿಂದ ಪ್ರತಿ ತಾಲ್ಲೂಕಿನಲ್ಲಿಯೂ buffer stock ಎಂದು ದಾಸ್ತಾನಿಡಿ, ಧಾರಣೆಯನ್ನು ಗೊತ್ತು ಮಾಡಿ. ಯಾವಾಗ ಅದಕ್ಕಿಂತ ಹೆಚ್ಚಿನ ಬೆಲೆಗೆ ಹೋಟೆಯಲ್ಲಿ ಮಾರುತ್ತಾರೋ ಆಗ ನಿಮ್ಮ ದಾಸ್ತಾನಿನಿಂದ ಹೊರಗೆ ತೆಗೆದು ಮಾರಿ. ಆದರೂ ಕೆಲವು ದಿವಸ ಕಷ್ಟವಾಗಬಹುದು, ಅನಾನುಕೂಲವಾಗಬಹುದು. ಆ ಮೇಲೆ ಖಂಡಿತ ಅನುಕೂಲವಾಗುತ್ತದೆ. ಕೆಲವರು ಡಿ-ಕಂಟ್ರೋಲ್ ಆದರೆ ಬೆಲೆ ಹೆಚ್ಚುತ್ತದೆಂದು ಆಕ್ಷೇಪಿಸಬಹುದು. ಆದರೆ ಈಗಿರುವ ರೀತಿಯಲ್ಲಿ ಬೆಳೆಯುವವರಿಗೆ ಉತ್ಸಾಹವಿಲ್ಲ; ಬತ್ತ ಬೆಳೆಯುವವನು ಕಬ್ಬು ಬೆಳೆಯುತ್ತಾನೆ. ಇದಕ್ಕೆ ಕಾರಣ ಈ ಕಂಟ್ರೋಲ್. ಅವನು ಬತ್ತ ಬೆಳೆದರೆ ಪಲ್ಲಕ್ಕೆ ಇಪ್ಪತ್ತು ರೂಪಾಯಿನಂತೆ ಕೊಡಬೇಕು, ಕೊಡದಿದ್ದರೆ ಪೋಲೀಸಿನವರು ಬರುತ್ತಾರೆ. ಇದರಿಂದ ಬರುವ ಪ್ರತಿಫಲ ಕಡಮೆ. ಯಾರೋ ನನ್ನಂಥ absentee landlords ಬತ್ತ ರಾಗಿ ಬೆಳೆಯುಬೇಕು. ರಾಗಿ ಬೆಳೆಯಬೇಕಾದರೆ ಒಂದೆಕರೆಗೆ 150 ರೂಪಾಯಿ ಖರ್ಚಾಗುತ್ತದೆ ಇದರಲ್ಲಿ ಕಂದಾಯ ಕೂಲಿ ಮುಂತಾದ್ದಕ್ಕೆಲ್ಲಾ 70 ರೂಪಾಯಿ ಹೋಗುತ್ತದೆ. ಆದ್ದರಿಂದ ಯಾರೂ ಬೆಳೆಯುವುದಿಲ್ಲ. Initiative in a farmer is killed by this Harvest Order. It leads to many complications. Why do you want to undertake the risk of driving a farmer being prosecuted ? Lift controls, have buffer stocks just to regularise the prices..... .....

Mr. SPEAKER.—The Hon'ble Member has taken twenty-five minutes.

ಶ್ರೀ ಎಸ್. ಶ್ರೀನಿವಾಸ್ಯೆಯ್ಯಂಗಾರ್.—ಈಗ ನಾನೊಂದು ಯೋಚನೆ ಮಾಡುತ್ತಿದ್ದೇನೆ. ಈ ದಿವಸ ಆಹಾರಾಭಾವ ಎಂದು ಹೇಳಿ, 20 ರೂಪಾಯಿ ಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಿದ್ದಾರೆ. 1930ನೆಯ ಇಸವಿಯಲ್ಲಿ ನಾನು ಪಲ್ಲಕ್ಕೆ ಮೂರು ರೂಪಾಯಿನಂತೆ ಮಾರಿದೆ. ಕಂದಾಯಕೊಡುವುದಕ್ಕೆ ಹಣವಿಲ್ಲದೆ ಜಮೀನನ್ನು ಮಾರಿ ಕಂದಾಯ ಕೊಟ್ಟೆ. ಆಗ ಸರ್ಕಾರದವರು ಏನು ಮಾಡಿದರು ? ಆಗ ಯಾರೂ ಕೇಳಲಿಲ್ಲ. ಈ ಹೊತ್ತು ನನಗೆ ನಾಲ್ಕಾಣೆ ಹೆಚ್ಚು ಬರುತ್ತದೆ ಅನ್ನುವಾಗ ಕಂಟ್ರೋಲು, ಪೋಲೀಸಿನವರು ಆಹಾರ ಇರಾಖೆಯವರು ಎಲ್ಲರೂ ಬಂದಿದ್ದಾರೆಯೇ ಹೊರತು ರೈತನಿಗೆ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆಯೋ ಅದಕ್ಕೆ ತಕ್ಕಂತೆ ಬೆಲೆಯನ್ನು ಕೊಡಿಸುತ್ತೇನೆ ಎಂದು ಯಾರೂ ಹೇಳುವುದಿಲ್ಲ. ಈ ಹೊತ್ತು 30 ರೂಪಾಯಿ ಧಾರಣೆ ಇರಬಹುದು, ನಾಳೆ ಹತ್ತೇ ರೂಪಾಯಿಗೆ ಇಳಿಯಬಹುದು. ಆದಕಾರಣ ಒಂದು minimum guaranteed price ನಿಗದಿ ಮಾಡಿ, ಆ guaranteed price ಕೊಡುತ್ತೇವೆ ಬೆಳೆಯುವವನಿಗೆ ಎಂಬ ತತ್ವವನ್ನಿಟ್ಟುಕೊಳ್ಳಿ. ಇದು ಬಹಳ ಮುಖ್ಯವಾದುದು.

(ಅಧ್ಯಕ್ಷರು ಭಾಷಣವನ್ನು ಮುಗಿಸಬೇಕೆಂದು ಸೂಚಿಸಿದರು).

ಆಗಲೇ ಅಧ್ಯಕ್ಷರು, ನನ್ನ ಮಾತನ್ನು ಮುಗಿಸಬೇಕೆಂದು 'ಬೆರ' ಮಾಡಿದರು. ಇನ್ನು ಬೇರೆ ವಿಷಯಗಳನ್ನು ಹೇಳಲು ಬೇರೆ ಅವಕಾಶ ತೆಗೆದುಕೊಳ್ಳುತ್ತೇನೆ. ಕೊನೆಯದಾಗಿ, ಇಷ್ಟು ಹೇಳುತ್ತೇನೆ. ಈಗಿರುವ ಪದ್ಧತಿಯನ್ನು ಮುಂದುವರಿಸುವುದು ಸರಿಯಲ್ಲ. ಡಿ-ಕಂಟ್ರೋಲ್ ಮಾಡಿ, buffer stock ಇಟ್ಟುಕೊಳ್ಳಿ.

ಅಲ್ಲದೆ ಬೆಳೆಯುವುದಕ್ಕೆ ಏನು ಖರ್ಚಾಗುತ್ತದೆ ಅದನ್ನು ನೋಡಿ ಬೆಲೆ ಕೊಡುವ ಕಡೆಗಮನವಿಟ್ಟುಕೊಳ್ಳಿ. ಬೆಳೆಯುವವನು ಜೀವಂತನಾಗಿದ್ದರೆ ತಾನೆ ಕೊಳ್ಳುವವನಿಗೆ ಕೊಡುವುದು? ಬೆಳೆಯುವವನನ್ನೇ ಕೊಲ್ಲುವುದಕ್ಕೆ ಹೋದರೆ ಕೊಳ್ಳುವವನಿಗೆ ಏನೂ ಸಿಕ್ಕುವುದಿಲ್ಲ. ಆದಕಾರಣ ಬೆಳೆಯುವವನಿಗೆ ಏನು ಬೆಲೆಕೊಟ್ಟರೆ ಅವನು ಬದುಕಿಕೊಳ್ಳುತ್ತಾನೆ ಎಂಬುದನ್ನು ನೋಡಬೇಕು. ಬೆಲೆ ಏನಿರಬೇಕೆಂಬುದನ್ನು ನಾನು ಅಂದಾಜು ಮಾಡಿದ್ದೇನೆ. ನಾನು ಸ್ವಂತ ಜಮೀನು ಇಟ್ಟುಕೊಂಡಿದ್ದೇನೆ. ಅದರೂ ಬೆಲೆ ಹೇಳಲು ಹಿಂತೆಗೆಯುತ್ತೇನೆ. ಏಕೆಂದರೆ ಶ್ರೀವಾರ್ ಮರಿಯಪ್ಪನವರು, ನನಗೆ ಬೇಕಾದಷ್ಟು ಬತ್ತ ಬರುತ್ತದೆ, ಅದರಿಂದ ಹಣ ಪಾಸ್ತಿ ಕೇಳುತ್ತೇನೆಂದು ಹೇಳಿ ಆಗಲೇ ಲೇಬರ್ ಹಾಕಿದರು. ಬೆಳೆಯು

ವುದಕ್ಕೆ ಒಂದು ಎಕರೆಗೆ ಆಗತಕ್ಕ ಖರ್ಚನ್ನು ಗಮನಿಸಿ, ಬೆಳೆಯುವವನು ಅದರಿಂದ ಜೀವನ ನಡೆಸಬೇಕಾದರೆ, ಒಂದು ಪಲ್ಲಕ್ಕೆ 30 ರೂಪಾಯಿಗೆ ಕಡಮೆಯಾದರೆ ಬೆಳೆಯುವವನು ಉಳಿಯುವುದಿಲ್ಲ. ನಾನೇನೂ ಕೊಂಡು ತಿನ್ನುವವನಿಗೆ ತೊಂದರೆ ಮಾಡಿ ಎಂದು ಹೇಳುವುದಿಲ್ಲ. ಈಗಿರತಕ್ಕೆ ಧಾರಣೆಯೇ ಕೊಂಡು ತಿನ್ನುವವನಿಗೆ ಹೆಚ್ಚು. ಆದುದರಿಂದ ಒಟ್ಟನಲ್ಲಿ ಕಂಟ್ರೋಲನ್ನು ರದ್ದುಮಾಡಬೇಕೆಂಬ ತತ್ವನನ್ನು ಪ್ರತಿಪಾದಿಸಿ ನನಗೆ ನನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಇಷ್ಟು ಕಾಲಾವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ಮುಕ್ತಾಯ ಮಾಡುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ–ಹೊಸನಗರ).—ಸ್ವಾಮಿ, ನಾವು ಆಹಾರನೀತಿಯ ವಿಷಯದಲ್ಲಿ, ಈಗಿರುವ ಆಹಾರ ವ್ಯವಸ್ಥೆಯನ್ನು ಮತ್ತು 'ಲೆವಿ' ವ್ಯವಸ್ಥೆಯನ್ನೂ ಚರ್ಚಿಸಿ ಯಾವುದು ಸೂಕ್ತವೆಂಬುದನ್ನು ಹೇಳಬೇಕೆಂದು ಒಂದು ಸಮಸ್ಯೆ ಬಂದಿದೆ. ಈ ಸಮಸ್ಯೆಯನ್ನು ಚರ್ಚಿಸುತ್ತಿರುವುದು ಇದು ಎರಡನೆಯ ದಿವಸ. ಇದುವರೆಗೆ ನಡೆದ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ವಿರೋಧಪಕ್ಷದವರು ತಮ್ಮ ಸಲಹೆಗಳನ್ನು ಕೊಡುವುದಕ್ಕೆ ಸರ್ಕಾರದವರು ಒಂದು ವರದಿಯನ್ನು ಸಭೆಯಮುಂದಿಡುತ್ತೇವೆಂದು ಹೇಳಿ ಅದನ್ನು ಸಕಾಲದಲ್ಲಿ ಕೊಡದೇ ಯಿದ್ದುದರಿಂದ ತಡವಾಗಿ, ಮತ್ತೆ ಇದರ ಚರ್ಚೆಯನ್ನು ಮುಂದುವರಿಸಬೇಕಾಯಿತು. ಏನೇ ಇರಲಿ, ಆಹಾರ ಸಮಸ್ಯೆ ಇಂದು ಬಹಳ ಮುಖ್ಯವಾದ ಸಮಸ್ಯೆ, ಇದು ನಮ್ಮ ದೇಶದ ಮುಂದೆ ಬಂದಿದೆ. ಆಹಾರಕ್ಕೆ ಕೊರತೆಯಿರುವುದು ; ನಮ್ಮ ದೇಶದಲ್ಲಿ ಮಾತ್ರವಲ್ಲ ಪ್ರಪಂಚದಲ್ಲೆಲ್ಲಾ ಕೊರತೆಯಿದೆ ಎನ್ನುವುದು ನಮಗೆ ಇತ್ತೀಚಿನ ನೀತಿಯಿಂದ ಕಂಡುಬಂದಿದೆ. ನಾನು, ಈ ಸಮಸ್ಯೆಯನ್ನು ಒಂದು ಪಕ್ಷದ ದೃಷ್ಟಿಯಿಂದ ನೋಡದೇಹೋದರೂ, ಒಂದು ವಿಷಯವನ್ನು ಹೇಳಬೇಕಾಗಿದೆ. ಕಳೆದ ಎಂಟು ಹತ್ತು ವರ್ಷಗಳ ಅನುಭವದಿಂದ ನೋಡಿದರೆ, ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಇಂಥ ಒಂದು ಜೀವಂತ ಸಮಸ್ಯೆಯ ಬಗ್ಗೆ ಒಂದು ದೃಢನಿಶ್ಚಯ ಅಥವಾ ನಿರ್ಧಾರವನ್ನು ಕೈಕೊಳ್ಳದೆ, ಕ್ಷಣ ಕ್ಷಣಕ್ಕೂ ತನ್ನ ನೀತಿಯನ್ನು ವರ್ಷ ವರ್ಷವೂ ಬದಲಾಯಿಸಿಕೊಂಡು ಹೋಗುತ್ತಿರುವುದೇ ದೇಶದಲ್ಲಿ ವ್ಯವಸಾಯ ಮಾಡುವ ರೈತನ ಅಧೋಗತಿಗೂ ಆಹಾರ ಕ್ಷೋಭೆಗೂ ಕಾರಣವೆಂದು ನಾವು ಈ ದಿವಸ ಹೇಳಬೇಕಾಗಿದೆ.

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಮಳೆ ಒಂದೇರೀತಿ ಸರಿಯಾಗಿ ಬರುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ನಿಜ, ಮಳೆ ಸಕಾಲದಲ್ಲಿ ಬರುವುದಿಲ್ಲ. ಏನೇ ಇರಲಿ, ಪ್ರಜೆಗಳಿಗೆಲ್ಲಾ ಆಹಾರ ಮತ್ತು ಬಟ್ಟೆಯನ್ನೊದಗಿಸುವುದು ಎಲ್ಲ ನಾಗರಿಕ ಸರ್ಕಾರಗಳ ಜವಾಬ್ದಾರಿಯೆಂದು ಎಲ್ಲರೂ, ಸರ್ಕಾರಗಳೂ ಒಪ್ಪಿಕೊಂಡಿವೆ. ಇದರಲ್ಲಿ ಭಿನ್ನಾಭಿಪ್ರಾಯ ವಿರಲು ಸಾಧ್ಯವಿಲ್ಲ.

2 P.M.

ಈ ವಿಷಯ ಸರ್ವರಿಗೂ ಸಂಬಂಧಪಟ್ಟದ್ದೆಂಬುದರಲ್ಲಿ ಯಾರಿಗೂ ಒಂದು ಭಿನ್ನಾಭಿಪ್ರಾಯವಿರಲು ಸಾಧ್ಯವಿಲ್ಲ. ಈ ದಿವಸ ನಮ್ಮ ಮುಂದೆ ಸರ್ಕಾರದವರು ತರುತ್ತಿರುವ ಯಾವ ವಿಷಯದಲ್ಲೇ ಆಗಲಿ, ಅವರ ನೀತಿ ಎಂತಹದ್ದಾಗಿರುತ್ತದೆಯೆಂಬುದನ್ನು ಒಂದೊಂದಾಗಿ ಹಾಗೆಯೇ ಪರಿಶೀಲನೆಮಾಡುತ್ತಾ ಹೋದರೆ, ಈ ದಿವಸ ಈ ಕಂಟ್ರೋಲೆಂಬುದು ಇರಬೇಕೇ ಇರಬೇಡವೇ, ಹೆಂಡ ಇರಬೇಕೇ ಅಥವಾ ಇರಬಾರದೇ, ಸೇಲ್ಸ್ ಟ್ಯಾಕ್ಸ್ ವಿಚಾರ ತೆಗೆದುಕೊಂಡರೆ ಸಿಂಗರ್‌ಪಾಯಿಂಟ್ ಟ್ಯಾಕ್ಸ್ ಇರಬೇಕೇ, ಇರಬಾರದೇ ಎಂಬುದಾಗಿ ಹೀಗೆ ಇಂಥ ವಿಷಯಗಳನ್ನೆಲ್ಲಾ ಒಂದು ಪಟ್ಟಿಯನ್ನು ತಯಾರುಮಾಡಿಕೊಂಡು ನೋಡುವುದಾದರೆ, ತಾನು ತುಳಿಯತಕ್ಕ ಪ್ರತಿಯೊಂದು ಹೆಜ್ಜೆಗೂ ಈ ಕಾಂಗ್ರೆಸ್ ಸರ್ಕಾರದಲ್ಲಿ ಯಾವ ಒಂದು ವಿಷಯದಲ್ಲೂ ಒಂದು ನಿರ್ದಿಷ್ಟವಾದ ನೀತಿ ಇರುವುದಿಲ್ಲವೆಂದು ಹೇಳಬಹುದು. ಈ ಆಹಾರ ಕೊರತೆಯ ಸಮಸ್ಯೆಗೆ ಅನೇಕ ಅಸಂಬದ್ಧವಾದ ವಿಷಯಗಳನ್ನೆಲ್ಲಾ ಗಂಟುಹಾಕಿ, ಈ ಸಮಸ್ಯೆಗೆ ನ್ಯಾಯವಾದ ಪರಿಹಾರಮಾರ್ಗವನ್ನು ಕಂಡುಹಿಡಿಯಲು ಸಾಧ್ಯವಿಲ್ಲದೆ, ಆಹಾರಮಂತ್ರಿಗಳು ಪ್ರತಿಯೊಂದು ವಿಷಯದಲ್ಲೂ ತೀರ ಅನುಮಾನಾಸ್ಪದವಾದಂಥ ನೀತಿಯಮೇರೆ ನಡೆಯುತ್ತಿರುವುದನ್ನು ನೋಡಿದರೆ, beating the bush ಎಂದು ಹೇಳುವಂತಿದೆ. ಇದು ತೀರಾ ನಿರಾಸ್ಪದವಾದಂಥ ವಿಚಾರ. ಇಲ್ಲಿಗೆ 8–10 ವರ್ಷಗಳಿಂದಲೂ ನಾವು ಏನೇನು ಕಷ್ಟಗಳನ್ನು ಅನುಭವಿಸುತ್ತಿದ್ದೇವೆಂಬುದು ಎಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗಿರತಕ್ಕ ವಿಚಾರಗಳೇ ಆಗಿವೆ. ಈ ನಾನಾ ತೊಂದರೆಗಳಿಗೆಲ್ಲಾ ಮುಖ್ಯ ಕಾರಣಗಳಾವುವೆಂಬುದನ್ನು ಅಂಕಿ ಅಂಶಗಳ ಸಹಿತ ಕಂಡುಹಿಡಿದು, ಇದನ್ನು ನಿವಾರಿಸುವುದಕ್ಕೆ ಕಡಮೆಮಾಡಬೇಕಾದದ್ದೂ ಆಡಳಿತ ನಡೆಸುತ್ತಿರುವವರ ಒಂದು ಮುಖ್ಯ ಜವಾಬ್ದಾರಿಯಾಗಿತ್ತು ಎಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಆದರೆ ಇಂಥ ಗಂಡಾಂತರದ ಕಾಲದಲ್ಲಿ ಈ ಆಹಾರ ಕೊರತೆಯನ್ನು ಎದುರಿಸತಕ್ಕ ಸಂದರ್ಭದಲ್ಲಿ ಎಲ್ಲ ಪಾರ್ಟಿಗಳ ಸಹಕಾರವನ್ನು ಕೋರತಕ್ಕದ್ದು ನ್ಯಾಯವಾದ ವಿಷಯವೇನೋ ಹೌದು. ಆದರೆ ಈ ಆಹಾರ ಕೊರತೆ ಹೇಗೆ ಸಂಭವಿಸಿತೆಂಬುದನ್ನು ಈ ದಿವಸ ವಿಚಾರವಾಡಲು ನಾವು ಯಾವುದನ್ನು ಮುಖ್ಯವಾಗಿ ಗಮನಿಸಬೇಕಾಗಿತ್ತೋ ಅದನ್ನು ಕೈಬಿಟ್ಟುಕೊಂಡು, ಈ ಕೊರತೆಯ ಸಮಸ್ಯೆಯ ಜೊತೆಗೆ ಆಹಾರದ ಹಂಚಿಕೆ ವಿಷಯವನ್ನೂ ಮಿಶ್ರಮಾಡಿಕೊಂಡಿರುವುದರಿಂದ, ಈಬಗ್ಗೆ ನಾವು ಯಾವ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೂ ಬರಲಾರದೆ ಇದು ಇಲ್ಲಿಯವರೆಗೂ ಮುಂದುವರೆದುಕೊಂಡು ಬಂದಿರುತ್ತದೆಯೆಂಬುದಾಗಿ ಕಂಡುಬರುತ್ತಿದೆ. ಈ ಎರಡರ ಜೊತೆಗೆ ಹೆಚ್ಚು ಆಹಾರ ಬೆಳೆಯಬೇಕೆಂಬ ಮತ್ತೊಂದು ಅಂಶವನ್ನು ಸೇರಿಸಿರುವುದರಿಂದ, ಈ ಸಮಸ್ಯೆ ಇನ್ನೂ ಮತ್ತಷ್ಟು ತೊಡಕಾಗಿಹೋಗಿದೆ. ಆದರೆ ನಾವು ಈ ದಿವಸ ಮುಖ್ಯವಾಗಿ ವಿಚಾರಮಾಡಬೇಕಾಗಿರತಕ್ಕದ್ದು ಆಹಾರ ಕೊರತೆಯನ್ನು ನೀಗಲು ನಾವು ಏನು ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸಬೇಕಾಗಿರುತ್ತದೆಯೆಂಬ ಬಗ್ಗೆ ಒಂದು ತೀರ್ಮಾನಕ್ಕೆ ಬರತಕ್ಕದ್ದು. ಇದಕ್ಕಾಗಿ ನಾವು ಇಲ್ಲಿಯವರೆಗೂ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾ ಬಂದಿದ್ದೇವೆ. ಆದರೆ ಏನೂ ಪ್ರಯೋಜನವಾಗಿಲ್ಲ. ಇಷ್ಟೊಂದು ಅಪಾರ ಹಣವನ್ನು ಖರ್ಚುಮಾಡಿದ್ದಾಗ್ಗೂ ರೈತಾಪಿ ಜನರಿಗೆ ಏನು ಉತ್ತೇಜನ ದೊರೆಯಬೇಕಾಗಿತ್ತೋ ಅದು ಅವರಿಗೆ ದೊರೆಯದೆ ಅವರಿಗೆ ಇದರಿಂದ ಏನೊಂದೂ ಉಪಕಾರವಾದಂತಾಗಲಿಲ್ಲ. ಈ ಒಂದು ಮುಖ್ಯ ಕಾರಣದಿಂದ ಆಹಾರಧಾನ್ಯಗಳ ಬೆಲೆ ದಿನೇ ದಿನೇ ಹೆಚ್ಚಾಗುವುದಕ್ಕೆ ಬದಲಾಗಿ ದಿನೇ ದಿನೇ ಕಡಮೆಯಾಗುತ್ತಿರುವುದು ಕಂಡುಬರುತ್ತಿದೆ. ಉದಾಹರಣೆಗಾಗಿ ಹೇಳುವುದಾದರೆ, ಸುಮಾರು 8 ಸಾವಿರ ಎಕರೆಗಳಲ್ಲಿ ಬೆಳೆಸಲಾಗುತ್ತಿದ್ದ ಹಿಪ್ಪನೇರಳೆ

(ಶ್ರೀ ಎಸ್. ಗೋಪಾಲಗೌಡ).

ವ್ಯವಸಾಯವು ಈ ದಿವಸ 22 ಸಾವಿರ ಎಕರೆಗಳವರೆಗೂ ಮುಂದುವರಿಸಲ್ಪಟ್ಟಿದೆ. ಕೊಳ್ಳೇಗಾಲದವರೆಗೂ ಬರಿ ಹಿಪ್ಪನೇರಳೆ ವ್ಯವಸಾಯವೇ ಮುಖ್ಯವಾದ ವ್ಯವಸಾಯವಾಗಿಹೋಗಿದೆ. ಅದೇ ರೀತಿ ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆಯ ಬೆಳೆಯೂ, ಚಿತ್ರದುರ್ಗ ಜಿಲ್ಲೆಯಲ್ಲಿ ನೆಲಗಡಲೇಕಾಯಿಯ ವ್ಯವಸಾಯವೂ ಅಧಿಕಪ್ರಮಾಣದಲ್ಲಿ ಮುಂದುವರಿಯುತ್ತಿರುವುದರಿಂದ ಆಹಾರ ಧಾನ್ಯಗಳ ಉತ್ಪತ್ತಿಯು ದಿನೇ ದಿನೇ ಕಡಮೆಯಾಗುತ್ತಿದೆ. ಹಣ ವೊಂದಿದ್ದರೆ ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಯಾವ ಸಾಮಾನಾದರೂ ಸಿಕ್ಕಿಯೇ ಸಿಕ್ಕುತ್ತದೆಯೆಂಬ ಭರವಸೆ ಜನರಲ್ಲಿ ಉಂಟಾದ ಕಾರಣ, ಅವರು ರಾಗಿ, ಜೋಳ ಇತ್ಯಾದಿ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಬದಲಾಗಿ ಕಮರ್ಷಿಯಲ್ ಕ್ರಾಪ್ಸ್‌ಗಳನ್ನೇ ಬೆಳೆಯಲು ಪ್ರಾರಂಭಿಸಿದ್ದಾರೆ. ಈ ಕಾರಣದಿಂದಲೇ ಒಂದೊಂದು ಜಿಲ್ಲೆಯಲ್ಲೂ ಒಂದೊಂದು ಕಮರ್ಷಿಯಲ್ ಬೆಳೆ ದಿನ ದಿನಕ್ಕೂ ಅಧಿಕವಾಗುತ್ತಾ ಬರುತ್ತಿದೆ. ಅದಕ್ಕಾಗಿ ನಾವು ಎಂದಿನವರೆಗೆ ಈ ಕಂಟ್ರೋಲುಗಳನ್ನಿಟ್ಟುಕೊಂಡಿರುತ್ತೇವೆಯೋ ಅಂದಿನತನಕವೂ ಈ ಬೆಳೆಗಳ ಮೇಲೆ ಒಂದು ಹತೋಟಿಯನ್ನು ಇಟ್ಟುಕೊಳ್ಳಲೇಬೇಕು. ಎಲ್ಲೆಲ್ಲ ಆಹಾರ ಧಾನ್ಯಗಳ ಬೆಳೆಯನ್ನು ಉದಾಸೀನಮಾಡಿ, ಬೇರೆ ವಿಧವಾದ ಬೆಳೆಗಳನ್ನು ತೆಗೆಯುತ್ತಿದ್ದಾರೆಂಬ ಬಗ್ಗೆ ಸರ್ಕಾರದವರು ನಿಗಾ ಇಡಬೇಕು. ಹಾಗೆ ಮಾಡುವುದರ ಜೊತೆಗೆ ನಮಗೆ ಯಾವ ವಸ್ತುಗಳ ಅವಶ್ಯಕತೆ ಹೆಚ್ಚಾಗಿರುತ್ತದೋ ಅಂಥ ಬೆಳೆಗೆ ಹೆಚ್ಚಿಗೆ ಸೌಕರ್ಯಗಳನ್ನು ಕೊಡಬೇಕು. ವಿಶ್ವೇಶ್ವರಯ್ಯ ನಾರಾ ಕೆಳಗೆ ಕಬ್ಬಿನಬೆಳೆಗೇ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು, ಸಕ್ಕರೆ ಉತ್ಪತ್ತಿಮಾಡುವುದಕ್ಕೇ ಹೆಚ್ಚಿನ ಗಮನವನ್ನು ಕೊಡುತ್ತಿದ್ದಾರೆ.

ಶ್ರೀ ಕೆ. ಎ. ಶಂಕರಗೌಡ (ಮಂಡ್ಯ).—ಆ ನಾಲೆಯಕೆಳಗೆ ಒಟ್ಟು ಜಮೀನಿರತಕ್ಕದ್ದು ಒಂದು ಲಕ್ಷ 20 ಸಾವಿರ ಎಕರೆಗಳು. ಆ ಪೈಕಿ ಕಬ್ಬನ್ನು ಬೆಳೆಸುತ್ತಿರುವುದು ಕೇವಲ 20 ಸಾವಿರ ಎಕರೆಗಳ ಪ್ರದೇಶದಲ್ಲಿ ಮಾತ್ರ.

Mr. SPEAKER.—Just to facilitate discussion, I would suggest to you to give the figures relating to the extent of land under commercial crops about four years back and now. If you can give those figures that would be helpful to us.

ಶ್ರೀ ಎಸ್. ಗೋಪಾಲಗೌಡ.—ನನ್ನ ಹತ್ತಿರ ಸಾಕಷ್ಟು ಅಂಕಿ ಅಂಶಗಳಿರುತ್ತವೆ. ಆದರೆ ಈಗ ತಕ್ಷಣಕ್ಕೆ ಅವುಗಳನ್ನು ಕೊಡಬೇಕೆಂದರೆ ಅದು ನನ್ನಿಂದ ಸಾಧ್ಯವಿಲ್ಲ. ಪ್ರಕೃತ ಸಂದರ್ಭದಲ್ಲಿ ಆ ಅಂಕಿ ಅಂಶಗಳನ್ನೆಲ್ಲಾ ಕೊಡಬೇಕಾದದ್ದು ಅಪ್ರಕೃತವೆಂದು ನನಗೆ ಕಂಡುಬರುತ್ತದೆ. ಈ ಅಂಶಗಳೆಲ್ಲಾ ನನಗೆ ಚೆನ್ನಾಗಿ ಮನವರಿಕೆಯಾಗಿರುವಂಥವುಗಳಾಗಿವೆ. ನನಗೆ ಸಾಕಷ್ಟು ಕಾರಾವಕಾಶವನ್ನು ಕೊಟ್ಟರೆ ತಾವು ಕೇಳುತ್ತಿರುವ ಅಂಕಿ ಅಂಶಗಳೆಲ್ಲವನ್ನೂ ನಾನು ಒದಗಿಸುತ್ತೇನೆ.

ಶ್ರೀ ಮುರ್ಕಾ ಗೋವಿಂದರೆಡ್ಡಿ (ಚಿತ್ರದುರ್ಗ).—ಈಗ ಶೇಕಡ 12½ಯಷ್ಟು ಕಬ್ಬಿನ ಬೆಳೆ ಜಾಸ್ತಿಯಾಗಿರುತ್ತದೆ.

Mr. SPEAKER.—It is not so. The Government will answer that.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಮಂತ್ರಿಗಳಿಗೆ ಗೊತ್ತಿದ್ದರೆ, ಅವರೇ ತಿಳಿಸಿಬಿಡಲಿ.

ಶ್ರೀ ಎಚ್. ಸಿದ್ದವೀರಪ್ಪ.—ಆ ವಿಚಾರಗಳನ್ನೆಲ್ಲಾ ನಾನು ಯಾವಾಗ, ಯಾವ ಕಾಲದಲ್ಲಿ ಹೇಳಬೇಕೆಂಬುದು ನನಗೆ ಚೆನ್ನಾಗಿ ಗೊತ್ತಿದೆ.

Sri J. MOHAMED IMAM.—If the Government take these statistical points and if they place the information before us, we will modify our arguments accordingly.

ಶ್ರೀ ಎಸ್. ಗೋಪಾಲಗೌಡ.—ಈ ಆಹಾರಕ್ಕೆ ಸಂಬಂಧಪಟ್ಟ ಬೆಳೆಗಳನ್ನು ಹೆಚ್ಚುಮಾಡಬೇಕಾದದ್ದು ನಮ್ಮ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ಆದಾಗ್ಯೂ ಅದನ್ನು ಸರ್ಕಾರ ಮಾಡುತ್ತಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ತಾವು ಇಲ್ಲಿಯತನಕ ಜಿ. ಎಂ. ಎಫ್. ಯೋಜನೆಯ ಬಗ್ಗೆ ಮತ್ತು ಸಬ್‌ಸಿಡಿಗೆಂದು ಒದಗಿಸಲಾಗಿದ್ದ ಪೈಬಲಗು ರೈತನಿಗೆ ನೇರವಾಗಿ ಸೇರಿ ಖರ್ಚಾಗಿದ್ದ ಪಕ್ಷದಲ್ಲಿ ಇಂದು ಜಮೀನು ಹೀಗೆಲ್ಲಾ ಹಾಳುಬಿದ್ದಿರಲು ಅವಕಾಶವೇ ಇರುತ್ತಿರಲಿಲ್ಲ. ಕಂದಾಯವನ್ನು ಕೊಟ್ಟಿದ್ದಾಗ್ಗೂ ಸಹ ಜಮೀನುಗಳು ಸಾಗುವಳಿಯಾಗದೆ ಹಾಗೆಯೇ ಪಾಳುಬಿದ್ದಿರುತ್ತವೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ನಾನೀಗ ಒಂದು ಕ್ರಿಯಾಲೋಪವನ್ನು ಸೂಚಿಸಬೇಕಾಗಿದೆ ಈಗ ನಾವು ಸಭೆಯಮುಂದೆ ಏನು ವಿಚಾರವಿರುತ್ತದೆಯೋ ಅದರಮೇಲೆ ಮಾತನಾಡದೆ, ಅವರು ಯಾವು ಯಾವುದೋ ವಿಷಯಗಳಮೇಲೆಲ್ಲಾ ಮಾತನಾಡುತ್ತಿದ್ದಾರೆ. ಅದು ಸರಿಯಾದುದಲ್ಲ.

Mr. SPEAKER.—You have got one minute more.

ಶ್ರೀ ಎಸ್. ಗೋಪಾಲಗೌಡ.—I am recollecting, because I was interrupted. ಹೀಗೆ ನ್ಯಾಯವಾಗಿರತಕ್ಕ ವಿಚಾರಗಳನ್ನೆಲ್ಲಾ ರೆಲೆವೆಂಟಲ್ಲವೆಂದು ಹೇಳುತ್ತ, ಕೇವಲ ಇರ್ರೆಲವೆಂಟ್ ಆಗಿರತಕ್ಕ ಅಂಶಗಳಿಗೇ ಹೆಚ್ಚಿಗೆ ನಿಗಾ ಕೊಡುತ್ತಿರುವುದರಿಂದ ಈ ಸಮಸ್ಯೆಯನ್ನು ಇಲ್ಲಿಯತನಕವೂ ಬಗೆಹರಿಸಲು ಸಾಧ್ಯವಾಗಿರುವುದಿಲ್ಲವೆಂದು ನಾನು ಹೇಳುತ್ತೇನೆ. ಮನಸ್ಸು ಬಿಚ್ಚಿ ಈ ವಿಷಯಗಳನ್ನೆಲ್ಲಾ ಇದ್ದಕ್ಕಿದ್ದಹಾಗೆಯೇ ಹೇಳಬೇಕೆಂದರೆ, ಕೆಲವು ಪಟ್ಟಣಗಳಲ್ಲಿರತಕ್ಕ ಕೆಲವು ಜನರಿಗೋಸ್ಕರವಾಗಿ ಇದನ್ನು ಇಟ್ಟುಕೊಂಡಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಅವರು ಈ ಕಾರಣಕ್ಕಾಗಿ 12 ಲಕ್ಷ ಪಲ್ಲ ಶೇಖರಣೆಮಾಡಬೇಕಾಗಿರುತ್ತೆಂದು ಹೇಳಿದ್ದರೂ ಅದು ಸಾಲದೇ ಬರುವುದರಿಂದ ಬಹಳಮಟ್ಟಿಗೆ 20 ಲಕ್ಷ ಪಲ್ಲಗಳನ್ನಾದರೂ ಶೇಖರಣೆಮಾಡಬೇಕಾಗಿದೆ. ಹೀಗೆ ಧಾನ್ಯಗಳನ್ನು ತರಿಸಿಕೊಂಡು ತಿನ್ನುವಂಥ ಜನರು ಕೇವಲ ಬೆಂಗಳೂರು, ದಾವಣಗೆರೆ ಮತ್ತು ಕೆ. ಜಿ. ಎಫ್. ಈ ಮೂರು ಸ್ಥಳಗಳಲ್ಲೇ ಅಲ್ಲದೆ, ಇನ್ನೂ ಬೇರೆ ಕಡೆಗಳಲ್ಲು ಹೆಚ್ಚಾಗಿಯೇ ಇದ್ದಾರೆ. ನೂರಾರು ಹಳ್ಳಿಗಳಲ್ಲು ಕೊಂಡು ತಿನ್ನತಕ್ಕಂಥ ಜನಗಳಿದ್ದರೂ ಅವರಿಗೆ ಈ ಕಾಳನ್ನು ಸರಬರಾಯಿಮಾಡದೆ ಅವರು ನೆರೆಮನೆಗಳಿಗೆ ಹೋಗಿ ಭಿಕ್ಷೆ ಬೇಡಿಕೊಂಡು ಬಂದು ತಿನ್ನುವಂಥ ಸ್ಥಿತಿಗೆ ಗುರಿಮಾಡಿದ್ದೀರಿ. ಅವರಿಗೆ ಈ ಕಂಟ್ರೋಲ್‌ನಲ್ಲಿ ದವಸ ಸಿಕ್ಕುತ್ತಿಲ್ಲ. ಹೀಗೆಲ್ಲಾ ಆಗಿ ಈ ದಿವಸ ಈ ಕಂಟ್ರೋಲ್ ಎಂಬುದು ಒಂದು ಭಯಾನಕ ಸ್ಥಿತಿಗೆ ಬಂದು, ಪೋಲೀಸಿನವರು ಮನೆಗಳಿಗೆ ನುಗ್ಗಿ ಜನರು ತಿನ್ನಲಿಕ್ಕಾಗಿ ಬೆಳೆದಿಟ್ಟುಕೊಂಡಿದ್ದುದನ್ನೆಲ್ಲಾ ಅವರಿಗೆ

ತಿನ್ನಲು ಬಡದಂತೆ ಅದನ್ನೆಲ್ಲಾ ಕಿತ್ತುಕೊಂಡುಹೋಗಿ ಬೇರೆ ಎಲ್ಲಯೋ ಇರತಕ್ಕವರಿಗೆ ಕೊಡುತ್ತಿದ್ದಾರಲ್ಲ, ಎಂಬ ಒಂದು ಭಯಾನಕ ಕೂಗು ಕಳೆದ 8-10 ವರ್ಷಗಳಿಂದಲೂ ಕೇಳಿಬರುತ್ತಿದೆಯೇ ವಿನಾ ಅದಕ್ಕೆ ಯಾವ ರೀತಿಯಲ್ಲೂ ಒಂದು ಸೂಕ್ತವಾದ ಪರಿಹಾರ ಮಾರ್ಗವನ್ನು ಕಂಡುಹಿಡಿಯಲು ಆಗಿಲ್ಲ.

ಅನೇಕ ಸದಸ್ಯರುಗಳು ದರದ ವಿಷಯವಾಗಿ ಮಾತನಾಡುತ್ತ, ಈಗ ತಾವು ಕೊಡುತ್ತಿರುವ ಧಾರಣೆಗಳು ಸರಿಯಾಗಿಲ್ಲವೆಂದು ತಿಳಿಸಿರುತ್ತಾರೆ. ಹೀಗೆ ಇದೇ ರೀತಿಯಾಗಿ ತಾವು ಅನುಸರಿಸುತ್ತಿರುವ ನೀತಿಯಲ್ಲಿ ಅನೇಕ ಲೋಪ ದೋಷಗಳು, ನ್ಯೂನತೆಗಳಿರುತ್ತವೆ. ಒಂದು ಮಗುವಿಗೆ ನೂರಾರು ಇಂಜಕ್ಷನ್‌ಗಳನ್ನು ಕೊಟ್ಟು ಬಂದಿರತಕ್ಕ ಕಾಯಿಲೆಯನ್ನು ವಾಸಿಮಾಡಲಕ್ಕಾಗದೆ ಅದನ್ನು ಕೊನೆಗೆ ಥರ್ಪ ಮಾಡತಕ್ಕ ರೀತಿಯಲ್ಲಿ, ಈ ಸಮಸ್ಯೆಯನ್ನೂ ಕೂಡ ತಾವು ಇಲ್ಲಿಯತನಕವೂ ಒಂದು ಸುಧಾರಣೆಗೆ ತರಲಾಗದೆ ಇದನ್ನು ಈ ಮಟ್ಟಕ್ಕೆ ತಂದಿರುವುದಾಗಿದೆ. ಹೀಗೆ ಏನೊಂದು ಪ್ರಯೋಜನಕರವಾದ ಸುಧಾರಣೆಯನ್ನು ತಾರದೇ ಇದ್ದಾಗ್ಗೂ ಮುಖ್ಯ ಮಂತ್ರಿಗಳಾಗಿರತಕ್ಕವರು ಬೊಂಬಾಯಿಗೆ ಹೋಗಿ ಅಲ್ಲಿ "ನಾನು ಬಹಳ ಪಾಪುಲರ್ ಆಗಿಬಿಟ್ಟಿದ್ದೇನೆ", ಎಂದು ಹೇಳಿಕೊಳ್ಳಲು ಅವಕಾಶವಾಯಿತು. ಅಲ್ಲಿಗೆ ಹೋಗಿದ್ದಾಗ "ನಾನು ಕಂಟ್ರೋಲನ್ನು ತೆಗೆದುಹಾಕಿದ್ದರಿಂದ ಬಹಳ ಪಾಪುಲರ್ ಆಗಿಬಿಟ್ಟಿದ್ದೇನೆ" ಎಂದು ಹೇಳಿಕ್ಕೊಂಡಿರುವುದು ಅಷ್ಟೇನೂ ಸೂಕ್ತವಾಗಿದ್ದಂತೆ ಕಂಡುಬರುತ್ತಿಲ್ಲ.

ಈ ದಿವಸ ಉದ್ಭವಿಸಿರತಕ್ಕ ಪರಿಸ್ಥಿತಿಯಲ್ಲಿ ಈ ಕಂಟ್ರೋಲ್ ಎಂಬುದು ಒಂದು ದೊಡ್ಡ ಪೆಡಂಭೂತವಾಗಿರುತ್ತದೆಯೆಂದು ದೇಶಾದ್ಯಂತ ಜನರೆಲ್ಲರೂ ಏಕಕಂಠದಿಂದ ಪ್ರಚಾರಕಾರ್ಯಗಳನ್ನು ಮಾಡುತ್ತಿದ್ದರೂ, ನನಗೆ ಇಂದು ಈ ಕಂಟ್ರೋಲನ್ನು ತೆಗೆದುಹಾಕಬೇಕೆಂದು ಹೇಳತಕ್ಕ ಮನಸ್ಸು ಇಲ್ಲ. ನನಗೆ ಒಂದು ಪ್ಲಾನ್ಡ್ ಎಕಾನಮಿಯಲ್ಲಿ ವಿಶ್ವಾಸವಿದೆ. ಈ ದಿವಸ ಈ ಕಂಟ್ರೋಲನ್ನು ತೆಗೆದುಹಾಕಿ ಜನರಿಗೆ ತಿನ್ನಲಿಕ್ಕೆ ಅನ್ನವಿಲ್ಲದೆ ಅವರುಗಳನ್ನೆಲ್ಲಾ ಭಿಕ್ಷುಕರ ಕಾಲೋನಿಗೆ ಸೇರಿಸಬೇಕೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಜನರಿಗೆ ಅತ್ಯಗತ್ಯವಾಗಿ ಆವಶ್ಯಕವಿರತಕ್ಕ ಅನ್ನ-ಬಟ್ಟೆ ಮತ್ತು ಒಂದು ವಸತಿ ಸೌಕರ್ಯ ಇಷ್ಟನ್ನು ಪ್ರತಿಯೊಬ್ಬ ದೇಶದ ಪ್ರಜೆಗೂ ಕಲ್ಪಿಸಿಕೊಡತಕ್ಕದ್ದು ಪ್ರತಿಯೊಂದು ನಾಗರಿಕ ಸರ್ಕಾರದ ಕರ್ತವ್ಯವಾಗಿರುತ್ತದೆ. ದೇಶದ ಆರ್ಥಿಕ ಸ್ಥಿತಿಯು ತೀರ ಹದಗೆಟ್ಟುಹೋಗಿ, ಜನರು ತಮ್ಮ ಜೀವನಕ್ಕೆ ಮಳೆ-ಬೆಳೆಗಳೇ ಮುಖ್ಯ ಕಾರಣವೆಂದು ಒಂದು ಅನಂಬದ್ಧ ನಂಬಿಕೆಗೆ ಗುರಿಯಾಗಿ ತಿನ್ನಲಿಕ್ಕಿಲ್ಲದೆ ದೇಶದಲ್ಲಿ ಎಲ್ಲ ನೋಡಲು ಅಸಮಾಧಾನವೇ ಎದ್ದುಕಾಣುತ್ತದೆ. ಪರಿಸ್ಥಿತಿಯ ನಿಜಸ್ವರೂಪ ಹೀಗಿರುವಾಗ ಇದಕ್ಕೆ ಒಂದು ಸೋಗು ಹಾಕಿಕೊಂಡು ಜನರಿಗೆ ತಿನ್ನಲು ಸಾಕಷ್ಟು ಆಹಾರ ಸಾಮಗ್ರಿಗಳನ್ನು ಒದಗಿಸಲು ಸಾಮರ್ಥ್ಯವಿಲ್ಲದೆ ಈ ದಿವಸ ಈ ಕಂಟ್ರೋಲುಗಳನ್ನು ಸಡಿಲ ಮಾಡುತ್ತೇವೆಂದು ಹೇಳುತ್ತಿರುವುದನ್ನು ನೋಡಿದರೆ ದೇಶದಲ್ಲಿ ಅತಿ ಜಾಗ್ರತೆಯಾಗಿ ಸಂಭವಿಸಲಿರುವ ದೊಡ್ಡ ಕ್ಷಾಮದ ಮಾರಿಗೆ ದೇಶದ ಜನತೆಯನ್ನು ಬಲಿಗೊಡಲು ಇದೊಂದು ಸನ್ನಾಹವೆಂದು ಕಂಡುಬರುತ್ತಿದೆ.

[ಶ್ರೀ ಎಚ್. ಎಸ್. ರುದ್ರಪ್ಪನವರು ಮಾತನಾಡಲು ಎದ್ದುನಿಂತರು.]

ಶ್ರೀ ಎಸ್. ಗೋಪಾಲಗೌಡ.—ನಾನು 15 ನಿಮಿಷ ಕಾಲವನ್ನು ಕೂಡ ಸರಿಯಾಗಿ ತೆಗೆದುಕೊಂಡಿಲ್ಲ. ತಾವು ನನಗೆ ಖಂಡಿತ ಇನ್ನೂ ಕೊಂಚ ಕಾಲಾವಕಾಶ ಕೊಡಲೇ ಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I am sorry I cannot give you any more time.

*ಶ್ರೀ ಎಚ್. ಎಸ್. ರುದ್ರಪ್ಪ (ಹೊನ್ನಾಳಿ).—ಸ್ವಾಮಿ, ಈ ಆಹಾರನಿಯಂತ್ರಣದ ವಿಷಯದಲ್ಲಿ ಸರ್ಕಾರದವರು ಒಂದು ನಿರ್ಣಯದ ಮೂಲಕ ಅದನ್ನು ನಿರ್ಧಾರಮಾಡಬೇಕೆಂದು ಒಂದು ಸೂಚನೆಯನ್ನು ಸಭೆಯ ಮುಂದಿಟ್ಟಿರತಕ್ಕದ್ದು ಬಹಳ ಸೂಕ್ತವಾಗಿದೆ ಮತ್ತು ಸಮಯೋಚಿತವಾಗಿಯೂ ಇದೆ. ಏತಕ್ಕೆಂದರೆ ಈಗಿನ ಸಂದರ್ಭದಲ್ಲಿ ಸರ್ಕಾರದವರು ಏನು ಒಂದು ನಿಯಂತ್ರಣವನ್ನು ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೋ ಆ ರೀತಿಯೇ ಉತ್ತಮವಾದುದೆಂದೂ ಮತ್ತು ಆ ರೀತಿಯಲ್ಲೇ ನಡೆಯಬೇಕೆಂದೂ ಅನೇಕರು ಭಾವಿಸಿರುತ್ತಾರೆ. ಈಗಿನ ಸರ್ಕಾರ, ದೂರಾಲೋಚನೆಯಿಂದ ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯ ಸದಸ್ಯರು ಯಾವ ನೀತಿಯನ್ನು ತಿಳಿಸುತ್ತಾರೋ ಸರ್ಕಾರದವರೂ ಕೂಡ ಆ ನೀತಿಯನ್ನೇ ಒಪ್ಪಿಕೊಳ್ಳುವುದಕ್ಕೆ ತಯಾರಾಗಿರುತ್ತೇವೆಂದು ಹೇಳಿರತಕ್ಕದ್ದು ಬಹಳ ಸೂಕ್ತವಾಗಿದೆ. ಹಾಗೆ ಹೇಳಿರುವುದರಿಂದ ಇಂದಿನವರೆಗೂ ಸರ್ಕಾರದ ಮೇಲಿದ್ದ ಜವಾಬ್ದಾರಿ ಇಂದು ಸದಸ್ಯರಾದ ನಮ್ಮೆಲ್ಲರ ಮೇಲೆ ಬಿದ್ದಿದೆ. ಅದಕ್ಕೋಸ್ಕರವಾಗಿ ಈ ದಿವಸ ನಾವೆಲ್ಲರೂ ದೀರ್ಘವಾಗಿ ಆಲೋಚನೆಮಾಡಿ ಸರ್ಕಾರದವರಿಗೆ ಸೂಕ್ತ ಸಲಹೆಗಳನ್ನು ನೀಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಅನೇಕ ಮಾನ್ಯ ಸದಸ್ಯರುಗಳು ಬಹಳ ಉಪಯುಕ್ತವಾದಂಥ ಸಲಹೆಗಳನ್ನು ನೀಡಿದ್ದಾರೆ; ಆದರೆ ಶ್ರೀಮಾನ್ ಗೋಪಾಲಗೌಡರು ಹೇಳಿರತಕ್ಕ ವಿಚಾರಗಳು ಅಷ್ಟು ಇದಕ್ಕೆ ಸಮಂಜಸವಾಗಿರುವುದಿಲ್ಲ.....

Sri MULKA GOVINDA REDDY.—I am sorry he is misrepresenting what Sri Gopala Gowda said. The Member has gone out and this statment should not go unchallenged.

ಶ್ರೀ ಎಚ್. ಎಸ್. ರುದ್ರಪ್ಪ.—ಆದರೆ ನಮ್ಮ ಪಾರ್ಟಿಯವರು ಈ ನೀತಿಯ ಬಗ್ಗೆ ಇನ್ನೂ ಯಾವ ಒಂದು ಅಭಿಪ್ರಾಯಕ್ಕೂ ಬಂದಿರುವುದಿಲ್ಲ. ನಾವು ಈಗ ಸರ್ಕಾರದವರು ಕೇಳಿರುವುದಕ್ಕೆ ಎಷ್ಟು ಬೇಕೋ ಅಷ್ಟು ಸಲಹೆಗಳನ್ನು ಮಾತ್ರ ನೀಡಲೇ ಬೇಕಾಗಿದೆ. ನಮ್ಮ ಪಾರ್ಟಿಯವರು ಇಂದು ಸರ್ಕಾರವನ್ನು ನಡೆಸುತ್ತಿರುವುದರಿಂದ ಅವರು ಬಹಳ ಜಾಗರೂಕತೆಯಿಂದ ನಡೆದುಕೊಳ್ಳಬೇಕಾಗಿದೆ. ಅದಕ್ಕಾಗಿ ನಾವು ಅವರಿಗೆ ಕೊಡತಕ್ಕ ಸಲಹೆಗಳನ್ನು ನಿರ್ದಿಷ್ಟವಾಗಿ ತಿಳಿಸಬೇಕಾದುದು ಅತಿಮುಖ್ಯವಾದ ವಿಚಾರ. ದೇಶದ ಅರ್ಧಭಾಗದಲ್ಲಿ ಈ ವರ್ಷ ಸರಿಯಾಗಿ ಬೆಳೆಯಾಗಿಲ್ಲ ಮತ್ತು ಮಳೆ ಸಹ ಬಿದ್ದಿಲ್ಲವೆಂಬುದು ಸಕಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಹೋದವರ್ಷ ಏಪ್ರಿಲ್ ತಿಂಗಳಿನಿಂದ, ಡಿಸೆಂಬರ್ ಅಖೈರಿನವರೆಗೆ 1 ಲಕ್ಷ 85 ಸಾವಿರ ಟನ್ ಧಾನ್ಯವನ್ನು ಸರ್ಕಾರದವರು ತಂದು ಜನರಿಗೆ ಒದಗಿಸಿದ್ದಾರೆ. ಈ ಕಂಟ್ರೋಲನ್ನು ಡಿ-ಕಂಟ್ರೋಲ್ ಮಾಡತಕ್ಕ ಬಗ್ಗೆ ನಾವು ಸ್ವಲ್ಪ ನಿಧಾನವಾಗಿ ಹೋಗುವುದು ಒಳ್ಳೆಯದು. ಇದರ ಜವಾಬ್ದಾರಿಯನ್ನು ಸರ್ಕಾರದವರು ಹೊತ್ತಿರುವುದರಿಂದ ಇದನ್ನು ನಿರ್ವಹಿಸತಕ್ಕವರು ಈ ಆಜ್ಞೆಗಳನ್ನು ಎಷ್ಟರಮಟ್ಟಿಗೆ ಯಾವ ಯಾವ ಕಾಲದಲ್ಲಿ ನಡೆಲಮಾಡಬಹುದೆಂದು

(ಶ್ರೀ ಎಚ್. ಎಸ್. ರುದ್ರಪ್ಪ).

ಊಹಿಸುತ್ತಾರೋ ಅಷ್ಟರಮಟ್ಟಿಗೆ ನಡಿಲ ಮಾಡಬಹುದೇ ಶಿವಾಯ ಏಕ್‌ದಂ ಇದನ್ನು ತೆಗೆದುಬಿಡಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರದ ಸಚಿವರಾದ ಮಾನ್ಯ ಖದ್ವಾಯಿಯವರಾದರೂ ಏನು ಹೇಳಿದ್ದಾರೆ? ಮೂವ್‌ಮೆಂಟ್ ಕಂಟ್ರೋಲನ್ನು ತೆಗೆದುಹಾಕಬಹುದೆಂದು ಹೇಳಿದ್ದಾರೆಯೆ ಶಿವಾಯ ಈ ನಿಯಂತ್ರಣವನ್ನೇ ತೆಗೆದುಹಾಕುತ್ತೇವೆಂದೇನೂ ಅವರು ಹೇಳಿರುವುದಿಲ್ಲ. ಹಾಗೇನಾದರೂ ಕಂಟ್ರೋಲನ್ನು ತೆಗೆದುಹಾಕಿದ್ದೇ ಆದರೆ, ಆಗ ಯಾವನಾದರೂ ಒಬ್ಬ ಮನುಷ್ಯ ಒಂದು ರಾತ್ರಿ ಉಪವಾಸಮಾಡಿದರೆ ಆತನಿಗೆ ಮೂರು ದಿವಸಗಳಾದರೂ ತಿನ್ನಲ್ಲಕ್ಕೆ ಅನ್ನವೇ ಇರಲಲ್ಲವೆಂದು ಹೇಳತಕ್ಕ ಜನರೂ ಅನೇಕವಾಗಿದ್ದಾರೆ. ಇಂಥ ಜನರೇ ವಿಶೇಷವಾಗಿರುತ್ತಾರೆ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ ಯಾರು ಈ ಜವಾಬ್ದಾರಿಯನ್ನು ಹೊತ್ತುಕೊಂಡಿರುತ್ತಾರೋ ಅವರ ಜವಾಬ್ದಾರಿಗೇ ಇದನ್ನು ಬಿಡತಕ್ಕದ್ದು ಬಹಳ ಸೂಕ್ತವಾದದ್ದೆಂದು ನಾನು ಸೂಚಿಸಲು ಇಚ್ಛಿಸುತ್ತೇನೆ. ಅವರು ಪರಿಶೀಲನೆಮಾಡಿ ಹೇಗಾದರೂ ಮಾಡಲಿ, ಇದು ಅವರ ಮೇಲೆ ಬಿದ್ದಿರತಕ್ಕ ಭಾರ. ಹೋದವರ್ಷವೂ ಸಹ ಮಳೆ ಹೋಗಿ ಬೆಳೆಗಳು ಸರಿಯಾಗಿ ಜನರ ಕೈಸೇರಲಿಲ್ಲ. ಆದ್ದರಿಂದ ಹೋದ ಸಾರ್ತಿ ಇಷ್ಟು ಮಳೆ ಅಭಾವವಿಲ್ಲದಿದ್ದಾಗ್ಗೂ ಸಾಕಷ್ಟು ಬೆಳೆಯಾಗದೆ ಇದ್ದ ಕಾರಣ 1 ಲಕ್ಷ 56 ಸಾವಿರ ಟನ್‌ಗಳಷ್ಟು ಆಹಾರ ಧಾನ್ಯವನ್ನು ಏಪ್ರಿಲ್‌ನಿಂದ ಡಿಸೆಂಬರ್ ಅಖೈರಿನವರೆಗೆ ತರಿಸಲಾಗಿತ್ತು. ಹಾಗೆ ತರಿಸಿದ್ದ ಧಾನ್ಯದ ಜೊತೆಗೆ ಮತ್ತಷ್ಟನ್ನು ಇಲ್ಲಿ ವಸೂಲು ಮಾಡಿ ಒಟ್ಟು 1 ಲಕ್ಷ 86 ಸಾವಿರ ಟನ್‌ಗಳಷ್ಟನ್ನು ಒದಗಿಸಲಾಗಿತ್ತು. ಇಷ್ಟೆಲ್ಲಾ ಕಷ್ಟಪಟ್ಟು ಧಾನ್ಯವನ್ನು ಒದಗಿಸಿದ್ದಾಗ್ಗೂ ಪದೇ ಪದೇ ಜನರಿಂದ ಡಿಪೋಗಳಲ್ಲಿ ಕಾಳೇ ಇಲ್ಲವೆಂಬ ಕೂಗು ಕೇಳಿಬರುತ್ತಿತ್ತು. ಜನರು ಒಂದು ಹೊತ್ತು ಊಟಮಾಡಿದರೆ ಮತ್ತೊಂದು ಹೊತ್ತಿಗೆ ಊಟಕ್ಕೆ ಅವಕಾಶವಿರುತ್ತಿರಲಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಈ ವರ್ಷದ ಮಳೆಬೆಳೆಗಳನ್ನು ಪರಿಶೀಲಿಸಿ ನೋಡುವುದಾದರೆ ಮುಂದಿನವರ್ಷದಲ್ಲಿ ನಮಗೆ ಕನಿಷ್ಠಪಕ್ಷ 2 ಲಕ್ಷ ಟನ್‌ಗಳಷ್ಟು ಆಹಾರವನ್ನು ಒದಗಿಸಿಕೊಳ್ಳಲೇ ಬೇಕಾಗಿರುತ್ತೆಂದು ತೋರುತ್ತದೆ. ಇದನ್ನು ಒದಗಿಸುವುದು ಸರ್ಕಾರದವರ ಜವಾಬ್ದಾರಿ. ಆದರೆ ಆ ಬಗ್ಗೆ ಸಲಹೆ ನೀಡತಕ್ಕದ್ದು ಮಾತ್ರ ನಮ್ಮ ಜವಾಬ್ದಾರಿ. ಹಿಂದೆ ಕಂಟ್ರೋಲನ್ನು ಇಟ್ಟುಕೊಂಡಿದ್ದಾಗ ನಾರ್ಮಲ್ ಇಯರ್ಸ್‌ಗಳಲ್ಲೇ ನಮಗೆ 75 ಸಾವಿರ ಟನ್ ಆಹಾರ ಬೇಕಾಗಿತ್ತು. ಅದು ಇತ್ತೀಚೆಗೆ ಮಾನ್ಯ ಖದ್ವಾಯಿಯವರು ಬಂದನಂತರ ನಮಗೆ 2 ಲಕ್ಷ ಟನ್ ಆಹಾರ ದೊರೆಯುವಂತಾಯಿತು. ಅಲ್ಲಗೂ ಸಹ ಅದೂ ಸಾಲದೆ ನಾವು ಅದರ ಜೊತೆಗೆ ಇನ್ನೂ 12 ಲಕ್ಷ ಪಲ್ಲವನ್ನು ವಸೂಲು ಮಾಡಬೇಕಾಗಿರುತ್ತದೆ. ದುಡ್ಡನ್ನು ಜಾಸ್ತಿ ಕೊಡವೆ ಕೇವಲ ಕರುಕಾಳ ಕೊಟ್ಟು ಧಾನ್ಯ ವಸೂಲು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸ್ವಲ್ಪ ಧಾರಣೆಯನ್ನು ಜಾಸ್ತಿಕೊಟ್ಟರೂ ಚಿಂತೆಯಿಲ್ಲ, ನಮ್ಮ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡು ಹೋಗುವಂಥ ಪ್ರತಿಯೊಂದು ಪೌಷ್ಟಿಕ ಧಾನ್ಯವನ್ನೂ ಸಹ ಈ ವರ್ಷ ನಾವು ಶೇಖರಣೆಮಾಡಬೇಕಾಗಿದೆ. ಹಾಗೆ ಮಾಡಿದರೇನೆ ನಮಗೆ ಬೇಕಾಗುವಷ್ಟು ಧಾನ್ಯ ಸಂಗ್ರಹಣೆ ಆಗುತ್ತದೆ.

ನಾನಾಗಲೆ ಹೇಳಿದಹಾಗೆ, ಈ ವರ್ಷ ನಮ್ಮಲ್ಲಿ ಬೆಳೆ ಹೋಗಿದೆ, ಹೋದ ವರ್ಷ ಅಷ್ಟು ಬೆಳೆ ಹೋಗಿರಲಿಲ್ಲ. ಆದಾಗ್ಯೂ ಹೊರಗಡೆ ಯಿಂದ 1,50,000 ಟನ್‌ಗಳಷ್ಟು ಧಾನ್ಯಗಳನ್ನು ತರಿಸಿದ್ದೇವೆ. ಈ ಸಾರಿ ಏಪ್ರಿಲ್‌ನಿಂದ ಇಲ್ಲಿಯವರೆಗೆ 1 ಲಕ್ಷದ 86 ಸಾವಿರ ಟನ್ ತರಿಸಿದ್ದೇವೆ. ಇಷ್ಟಾದರೂ ಡಿಪೋಗಳಲ್ಲಿ ಆಹಾರ ಧಾನ್ಯಗಳಲ್ಲ, ಆ ಊರಿನಲ್ಲ ಆಹಾರ ಸಿಕ್ಕಲಲ್ಲ ಈ ಊರಿನಲ್ಲ ಸಿಕ್ಕಲಲ್ಲ ಎಂದು ಕೂಗು ಕೇಳಿಬರುತ್ತಿದೆ. ಎಷ್ಟೋ ಜನರು ನಿಜವಾಗಿಯೂ ಒಂದೇ ಹೊತ್ತು ಊಟ ಮಾಡುತ್ತಿದ್ದಾರೆ. ಇದನ್ನೆಲ್ಲಾ ಯೋಚನೆಮಾಡಿದರೆ ಮುಂದಿನ ವರ್ಷ ಎರಡು ಲಕ್ಷ ಟನ್‌ಗಳಿಗೆ ಕಡಮೆಯಿಲ್ಲದೆ ದವಸ ನಮಗೆ ಬೇಕಾಗುತ್ತದೆ. ಇಷ್ಟನ್ನೂ ಹೇಗೆ ತರಿಸುತ್ತೀರೋ ಗೊತ್ತಿಲ್ಲ. ತಾವು ಹಾಕಿರುವ ರೇಷ್ಮಾಚಾರ ಸಾಮಾನ್ಯ ವರ್ಷಗಳಿಗೆ ಸರಿಹೋಗಬಹುದು. ಆದ್ದರಿಂದ ಹೊರಗಡೆಯಿಂದ ಎಷ್ಟು ಕಳುಹಿಸಿಕೊಡುತ್ತೀವೆಂದು ಖದ್ವಾಯಿಯವರು ಹೇಳಿದ್ದಾರೋ ಅಷ್ಟು ತೆಗೆದುಕೊಂಡು, ಅದರ ಜೊತೆಗೆ ಇಲ್ಲೇ open ಮಾರ್ಕೆಟ್‌ನಲ್ಲಿ ಎಷ್ಟು ಧಾನ್ಯ ಶೇಖರಣೆ ಮಾಡುವುದಕ್ಕೆ ಸಾಧ್ಯವೋ ಅಷ್ಟು ಕೊಂಡುಕೊಳ್ಳಿ. ಮುಂದೆ ಆಹಾರವಿಲ್ಲದೆ ಜನಗಳಿಗೆ ಕರುಕಾಳವಾಗುವುದಕ್ಕೆ ಅವಕಾಶಕೊಡಬೇಡಿ. ಡೀ-ಕಂಟ್ರೋಲ್ ಎನ್ನುವುದೇನೋ ಕಿವಿಗೆ ಇಂಪಾಗಿರುತ್ತದೆ. ಆದರೆ ನಿಜವಾಗಿ ಕಷ್ಟ ಬಂದಾಗ ಒಂದು ಪಲ್ಲ ಒದಗಿಸಬೇಕಾದರೂ ಎಷ್ಟು ಕಷ್ಟವಿದೆ! ಆದ್ದರಿಂದ ನಿಯಂತ್ರಣವನ್ನು ತೆಗೆಯಬೇಕೆಂದು ಏನು ಮನಸ್ಸು ಮಾಡಿದ್ದೀರೋ ಅದರ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಜಾಗರೂಕತೆಯಿಂದ ಮುಂದುವರಿಯಬೇಕು. ಮುಂಜೆ ಅಷ್ಟು ಮಟ್ಟಿಗೆ ಆಹಾರ ಶೇಖರಿಸಿಕೊಳ್ಳುವುದು ಸರ್ವಥೋಚಿತವಾಗಿದೆ. ಇದಕ್ಕಾಗಿ ಶೇಕಡ 75 ರಷ್ಟನ್ನು ನಿಗದಿಯ ಮೂಲಕ ವಸೂಲು ಮಾಡಿಕೊಳ್ಳುವುದಲ್ಲದೆ, ಉಳಿದ ಜನರಿಗೂ ಸಂದರ್ಭಬಂದಾಗ ಆಹಾರವನ್ನೊದಗಿಸುವುದಕ್ಕೆ ಅನುಕೂಲವಾಗುವಂತೆ ಸುಗ್ಗಿಯ ಕಾಲದಲ್ಲಿ ಒಂದಿಷ್ಟು ಧಾನ್ಯವನ್ನು ಕೊಂಡಿಡುವುದು ಸೂಕ್ತವೆಂದು ಕಾಣುತ್ತದೆ.

ಆ ಮೇಲೆ, ಈಗ ಪ್ರತಿಯೊಬ್ಬರ ಗಮನವೂ ಫುಡ್ ಕಾರ್ಪೊರೇಷನ್ ಕಡೆಗಿದೆ. ಅವರೇನೋ ಇಂಡಿಯಾ ದೇಶದ ಒಟ್ಟು ಸಮಾಚಾರಗಳನ್ನು ಸಂಗ್ರಹಿಸಿ ಕ್ರೋಢೀಕರಿಸಿ ಹೇಳುತ್ತಿದ್ದಾರೆ, ನಿಜ. ಶ್ರೀ ರಾಜಗೋಪಾಲಾಚಾರಿಯವರು ಕಂಟ್ರೋಲ್ ತೆಗೆದರೆಂಬುದೂ ನಿಜ. ಅವರು ಕಂಟ್ರೋಲ್ ತೆಗೆದ ಮಾತ್ರಕ್ಕೆ ಅದರಿಂದ ಸಂತೋಷಪಟ್ಟುಕೊಂಡಿದ್ದಾರೆಯೇ! ಅಲ್ಲನ ಪರಿಣಾಮವೇನಾಯಿತು! ಕಂಟ್ರೋಲನ್ನು ತೆಗೆದರೂ ಕಾಳನ್ನು ಜನರಿಗೆ ಒದಗಿಸಬೇಕಾದದ್ದು ನಮ್ಮ ಜವಾಬ್ದಾರಿ. ರೂಪಾಯಿಗೆ ಒಂದು ಸೇರಿನಂತೆ ಒದಗಿಸುವುದಲ್ಲ; ಸಾಮಾನ್ಯ ಜನರು ಕೊಳ್ಳುವುದಕ್ಕೆ ಸಾಧ್ಯವಿರುವ ರೀತಿಯಲ್ಲಿ ಒದಗಿಸಬೇಕು. ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಹೇಳಿದರು 30 ರೂಪಾಯಿಗಳಂತೆ ಕೊಂಡುಕೊಳ್ಳಿ, ರೂಪಾಯಿಗೆ 10 ಸೇರಿನಂತೆ ಮಾರಿ ಎಂದು. ಇದು ಹೇಗೆ ತಾನೆ ಸಾಧ್ಯ! ಇಂಥ ಮಾತನ್ನು ಯಾರು ಹೇಳಬಹುದು! ಜವಾಬ್ದಾರಿಯನ್ನರಿತವರು ಹೇಳುವ ಮಾತಲ್ಲ.

ಶ್ರೀ ಜೆ. ಮಹಮದ್ ಇಮಾಮ್— ಅವರು ರೂಪಾಯಿಗೆ 10 ಸೇರಿನಂತೆ ಮಾರಬೇಕೆಂದು ಹೇಳಲಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ— ಪಲ್ಲಾಕ್ಕೆ 30 ರೂಪಾಯಿನಂತೆ ಕೊಂಡುಕೊಳ್ಳಿ; 10 ರೂಪಾಯಿನಂತೆ ಮಾರುವಂತಾಗಬೇಕೆಂದರು.

ಆದ್ದರಿಂದ ನಾನು ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ, ಮುಂದೆ ತಾವು ಡೀ-ಕಂಟ್ರೋಲ್ ನೀತಿಯನ್ನನುಸರಿಸುವುದಕ್ಕೆ ಮುಂಚೆ ತಮಗೆ ಯಾವ ಯಾವ ರೀತಿಯಲ್ಲಿ ಶೇಖರಣೆ ಮಾಡುವುದಕ್ಕೆ ಸಾಧ್ಯವೋ ಆ ರೀತಿಯಲ್ಲೆಲ್ಲಾ ಶೇಖರಣೆ ಮಾಡಬೇಕು. ಏಕೆಂದರೆ

ನಾವು ಬಹಳ ಜವಾಬ್ದಾರಿಯುತರಾಗಿರಬೇಕು. ಕಷ್ಟ ಕಾಲದಲ್ಲಿ ಕೊಂಡುತಿನ್ನುವವರೂ ಬೆಳೆಯುವವರೂ ಎಲ್ಲರೂ ಸಹಕರಿಸಬೇಕೆಂಬುದೇನೋ ಎಲ್ಲರೂ ಒಪ್ಪ ತಕ್ಕದ್ದೇ. ಆದರೂ ನಾನೇ ಎಷ್ಟೋಕಡೆ ನೋಡಿದ್ದೇನೆ, ಈಗಲೂ ರೂಪಾಯಿಗೆ ಒಂದು ಸೇರು, ಎರಡು ಸೇರು ರಾಗಿಯನ್ನು ಮಾರುವವರಿದ್ದಾರೆ. ಈ ರೀತಿ ರೂಪಾಯಿಗೆ ಒಂದು ಸೇರಿನಂತೆ ಎಲ್ಲರಿಗೂ ಕೊಂಡುಕೊಳ್ಳುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆಮಾಡಬೇಕು. ಆದ್ದರಿಂದ ಅಷ್ಟು ಕಡಮೆ ಬೆಲೆಗೂ ಹೇಗಾದೆ, ಜಾಸ್ತಿಯಾಗಿಯೂ ಮಾಡದೆ, ಕೊನೆಯಪಕ್ಷ ರೂಪಾಯಿಗೆ ನಾಲ್ಕು ಸೇರಿನಂತೆ ನ್ಯಾಯವಾದ ಬೆಲೆಗೆ ಮಾರುವಂತೆ ಮಾಡಬೇಕು ಹೀಗೆ ಮಾಡಬೇಕಾದರೆ ಎಲ್ಲ ಧಾರಣೆ ಏರುತ್ತದೆಯೋ ಅಲ್ಲಿಗೆ ತಕ್ಷಣ ಹೆಚ್ಚಿಗೆ ಧಾನ್ಯವನ್ನು ಸರ್ಕಾರದವರು ಒದಗಿಸುವುದಕ್ಕೆ ಸಿದ್ಧವಾಗಿರಬೇಕು. ಧಾನ್ಯ ಇದೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದು ಒಂದು ಕೆಲಸ; ಧಾರಣೆ ಹೆಚ್ಚದ ಹಾಗೆ ನೋಡಿಕೊಳ್ಳುವುದೂ ಇನ್ನೊಂದು ಮುಖ್ಯವಾದ ಕೆಲಸ. ಆದ್ದರಿಂದ ಸರ್ಕಾರದವರು ಎಷ್ಟು ಧಾನ್ಯವನ್ನು ಶೇಖರಣೆ ಮಾಡುತ್ತಿರೋ ಅಷ್ಟು ಒಳ್ಳೆಯದು. ರೈತರು ಈ ವರ್ಷ ಹೆಚ್ಚಿಗೆ ಧಾರಣೆಯನ್ನೇನೋ ಕೇಳಬಹುದು; ಅವರಿಗೆ ಎಷ್ಟು ಕೊಟ್ಟರೂ ಸಾಲದೆಂದೇ ಹೇಳಬೇಕು. ಏಕೆಂದರೆ ವ್ಯವಸಾಯದ ಕನಬೇ ಅಷ್ಟು ಕಷ್ಟವಾದದ್ದು. ಆದರೆ ಈ ಕಷ್ಟಕಾಲದಲ್ಲಿ ಅವರು ಸಹಕರಿಸಬೇಕು. ಇಲ್ಲದಿದ್ದರೆ ಕೊಂಡು ತಿನ್ನುವವರಿಗೆ ಬಹಳ ಕಷ್ಟವಾಗುತ್ತದೆ. ಅವರು ಹೆಚ್ಚಿಗೆ ದರವನ್ನು ಕೇಳುವುದು ಸರಿಯಲ್ಲ. ಈಗಿರುವ ಧಾರಣೆಗೆ 5 ರೂಪಾಯಿಗಳನ್ನು ಜಾಸ್ತಿ ಮಾಡಿದರೆ ಅದೇ ಜಾಸ್ತಿ. ಆದ್ದರಿಂದ 5 ರೂಪಾಯಿಗಳಿಗಿಂತ ಹೆಚ್ಚಿಗೆ ಧಾರಣೆ ಏರಿಸಕೂಡದೆಂದು ನನ್ನ ಸಲಹೆ. ಆದರೆ ವಸೂಲು ಮಾಡುವುದರಲ್ಲಿ ಯಾವ ಕಿರುಕುಳಕ್ಕೂ ಅವಕಾಶಕೊಡದ ರೀತಿಯನ್ನು ಯೋಚನೆ ಮಾಡಿ ಮಾಡುವುದು ಅವಶ್ಯಕ. ಕಂಟ್ರೋಲ್ ಹೋಗ ತಕ್ಕದ್ದೇ ಆದರೂ, ಇನ್ನೂ ಸದ್ಯಕ್ಕೆ ಸ್ವಲ್ಪಕಾಲ ಅದು ಇರಬೇಕಾಗಿದೆ. ಏಕೆಂದರೆ ಪ್ರೊಕ್ಯೂರ್‌ಮೆಂಟನ್ನು ಪೂರ್ತಿ ಮಾಡಬೇಕೆಂದು ಖಡ್ಡಾಯಿಯವರೂ ಕೇಳಿಲ್ಲ. ಸಾಗಾಣಿಕೆಯ ಮೇಲಣ ಕಂಟ್ರೋಲನ್ನು ತೆಗೆಯಿರೆಂದು ಮಾತ್ರ ಹೇಳಿದ್ದಾರೆ. ಆದ್ದರಿಂದ ಪ್ರೊಕ್ಯೂರ್‌ಮೆಂಟ್ ಮಾಡುವಾಗ ಜನರಿಂದ ವಸೂಲು ಮಾಡುವುದನ್ನು ಮೊದಲೇ ನಿಗದಿ ಮಾಡಿ ಇಂಥಿಂಥವರು ಇಷ್ಟೇ ಕೊಡಬೇಕೆಂದು ತಿಳಿಸುವುದು ಒಳ್ಳೆಯದು. ಇದರಿಂದ ರೈತನಿಗೆ ತಾನು ಮುಂದಿನ ವರ್ಷ ಅಷ್ಟು ಬೆಳೆದು ಕೊಟ್ಟು ಬಿಟ್ಟರಾಯಿತು, ಹೆಚ್ಚಿಗೆ ಬೆಳೆದು ಕೊಂಡರೂ ಕೇಳುವುದಿಲ್ಲ, ತನಗೂ 3—4 ಕಾಸು ಹೆಚ್ಚಿಗೆ ಸಂಪಾದನೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಭಾವನೆ ಹುಟ್ಟಿ ಹೆಚ್ಚಿಗೆ ಬೆಳೆಯುತ್ತಾನೆ. ಆದ್ದರಿಂದ ಪ್ರತಿಯೊಬ್ಬನಿಗೂ ಅವನ ಶಕ್ತಿಯನ್ನು ನೋಡಿಕೊಂಡು ಇಷ್ಟು ದವಸವನ್ನು ಆತ ಕೊಡಬೇಕು ಎಂದು ಪಟ್ಟಿ ಕೊಡುವ ರೀತಿಯಲ್ಲಿ ಕಾರ್ಡು ಕೊಡಬೇಕು. ಆಹಾರ ಧಾನ್ಯ ಶೇಖರಣೆಯಿರುವವರೆಗೂ ಆತ ಇಷ್ಟು ಮಾತ್ರ ಕೊಡಬೇಕೆಂದು ಹೇಳಿದರೆ ಅವನನ್ನು ಬೆಳೆಯುವುದಕ್ಕೂ ಅನುಕೂಲವಾಗುತ್ತದೆ. ತಾವು ಕಾನ್‌ಫೆರೆನ್ಸಿಗೆ ಹೋದಾಗ ಇಂಡಿಯಾ ಸರ್ಕಾರದವರು ಇಂಡಿಯಾ ದೇಶದ ಇತರ ಪ್ರಾಂತಗಳಲ್ಲಿ, ಉತ್ತರ ಪ್ರದೇಶ, ಮಧ್ಯ ಪ್ರಾಂತ, ಪಂಜಾಬು, ಪಶ್ಚಿಮ ಬಂಗಾಳ ಇವುಗಳಲ್ಲೆಲ್ಲಾ ಬಹಳ ಚೆನ್ನಾಗಿದೆಯೆಂದು ಲೆಕ್ಕಹಾಕಿ ತೋರಿಸುಬಹುದು. ಆದರೆ ಬರೀ ಆ ಲೆಕ್ಕಗಳನ್ನು ನೋಡಿಕೊಂಡೇ ನಾವು ಮುಂದುವರಿದರೆ ಎಂಜಿನಿಯರ ಲೆಕ್ಕ ನೋಡಿಕೊಂಡು ಸಮುದ್ರಕ್ಕೆ ಬಿದ್ದಹಾಗಾಗುತ್ತದೆ. ಪಂಜಾಬಿನಿಂದ ಇಷ್ಟು ಬರುತ್ತದೆ, ಸಿ ಪಿ. ಯಿಂದ ಇಷ್ಟು ಬರುತ್ತದೆ ಎಂಬ ಲೆಕ್ಕಾಚಾರವೆಲ್ಲಾ ತಲೆ ಕೆಳಗಾಗಬಹುದು. ಮುಂದಿನ ವರ್ಷ ಮಳೆಬೆಳೆ ಚೆನ್ನಾಗಿ ಆಗದೆ ಹೋದರೆ ಈ ಲೆಕ್ಕಗಳೆಲ್ಲಾ ತಲೆಕೆಳಕಾಗುತ್ತವೆ. ಆದ್ದರಿಂದ ಎಷ್ಟು ಆಹಾರವನ್ನು ಶೇಖರಣೆ ಮಾಡುತ್ತೀರೋ ಅದರ ಮೇಲೆ ಆಹಾರ ನಿಯಂತ್ರಣವನ್ನು ನಿರ್ಧರಿಸಬೇಕೆಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮ್ (ಕೋಲಾರ).—ಮಾನ್ಯ ಅಧ್ಯಕ್ಷರೇ, ಈಗ ನಾವು ಆಹಾರದ ವಿಚಾರದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇದರ ವಿಷಯದಲ್ಲಿ ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ಮುಂಚೆ, ಮುಖ್ಯವಾಗಿ ಅದರ ಹಿನ್ನೆಲೆಯಾಗಿ ಒಂದೆರಡು ಮಾತುಗಳಲ್ಲಿ ಹೇಳಬಯಸುತ್ತೇನೆ

ಈ ದಿವಸ ಕೆಲವು ಅಂಕಿ ಅಂಶಗಳನ್ನು ನಮ್ಮ ಮುಂದಿಡಲಾಗಿದೆ. ಒಂದನೆಯದು, ಈ ಆಹಾರದ ವಿಚಾರದಲ್ಲಿ ಈಗ ಕ್ಷಿಪ್ರದಲ್ಲೇ ಒಂದು ವ್ಯವಸ್ಥೆಯನ್ನು, ಒಂದು ನೀತಿಯನ್ನು ಅನುಸರಿಸತಕ್ಕಂಥ ಮನೋಭಾವ ನಮ್ಮಲ್ಲಿ ಮೂಡಿದೆಯೆಂಬುದು. ಇದರಿಂದ ನಾವು ತಿಳಿಯಬಹುದಾಗಿದೆ, ಬೆಂಗಳೂರು, ಕೋಲಾರದ ಚಿನ್ನದಗಣಿ, ದಾವಣಗೆರೆ—ಈ ಮೂರು ಕಡೆಗಳನ್ನು ಸ್ಟ್ಯಾಜುಟೆರಿ ರೇಷನಿಂಗ್ ಪ್ರದೇಶಗಳೆಂದು ಮಾಡಿ,ಅಂದರೆ, ಅಲ್ಲಿರತಕ್ಕ ಜನಗಳಿಗೆ ಅವರ ಪಟ್ಟೆಯಲ್ಲಿನಮೂದಾಗಿರತಕ್ಕ ಆಹಾರ ಪದಾರ್ಥಗಳಷ್ಟನ್ನೂ ಅವರಿಗೆ ಕೊಡ್ತೇ ಕೊಡುತ್ತೇವೆ ಎಂಬ ದೊಡ್ಡ ಜವಾಬ್ದಾರಿಯನ್ನು ಸರ್ಕಾರ ಹೊತ್ತಿದೆ ಎಂದು. ಇದೊಂದು ದೊಡ್ಡ ಪ್ರಶ್ನೆಯಾಗಿದೆ. ಆಮೇಲೆ ಇನ್ನೊಂದು ಒಂದು ಬಫರ್ ಸ್ಟಾಕ್ ಅಂದರೆ ಆಪದ್ಧನ ವಿದ್ದಹಾಗೆ ಕಷ್ಟಕಾಲ ಬಂದಾಗ ಸಹಾಯವಾಗುವ ರೀತಿಯಲ್ಲಿ ಸ್ವಲ್ಪ ಧಾನ್ಯವನ್ನು ಶೇಖರಣೆ ಮಾಡುವುದು —ಇದು ನಮಗೆ ಕೇವಲ ಎರಡು ತಿಂಗಳಿಗಾಗುವಂಥದು. ಈ ಪ್ರಕಾರ, ಎರಡು ಅಂಕಿಗಳ ಮೂಲಕ ನಮಗೆ ಹೇಳುತ್ತಿದ್ದಾರೆ. 12 ಲಕ್ಷ ಪಲ್ಲ ಬತ್ತ ಕೊಟ್ಟೇಕೊಡಬೇಕಾಗುತ್ತದೆ, ಎರಡು ಲಕ್ಷದಷ್ಟನ್ನು ಕ್ರಮ ಕ್ರಮೇಣ ಕೊಡಬೇಕಾಗುತ್ತದೆ ಎಂದು. ಇದರಿಂದೇನು ಅರ್ಥವಾಗುತ್ತದೆ? ಇವರು ಇನ್ನೂ ಕೂಡ ಈ ನಿಯಂತ್ರಣವನ್ನು ತೆಗೆದುಹಾಕುವ ರೀತಿಯಲ್ಲಿ ಒಂದು ನಿರ್ದಿಷ್ಟವಾದ ಎದೆಗಾರಿಕೆಯಾದ ನೀತಿಯನ್ನನುಸರಿಸುವುದಕ್ಕೆ ಇಷ್ಟಪಡುತ್ತಿಲ್ಲವೆಂದು ಕಾಣುತ್ತದೆ. ಇದು ಸರಿಯೇ ಅಲ್ಲವೇ ಎಂಬ ಪ್ರಶ್ನೆಗೆ ನಾನೀಗ ಹೋಗುವುದಿಲ್ಲ. ಬಹುಶಃ ಈಗ ಮೂರು ನಾಲ್ಕು ತಿಂಗಳ ಹಿಂದೆ ಇದೇ ರೀತಿ ಆಹಾರದ ವಿಷಯ ಚರ್ಚೆಗೆ ಬಂದಾಗ ನನ್ನ ಸ್ವಂತ ಅಭಿಪ್ರಾಯವನ್ನು ಹೇಳಿದ್ದೇನೆ. ಈಗಲೂ ನನಗೆ ಅದೇ ಸರಿಯೆಂದೆನಿಸುತ್ತದೆ. ಏಕೆಂದರೆ, ಈಗ ನನ್ನ ಮಿತ್ರರಾದ ಮಾನ್ಯ ಮಂತ್ರಿಗಳು ಕೊಟ್ಟರುವ ಅಂಕಿ ಅಂಶಗಳನ್ನೇ ಯೋಚನೆ ಮಾಡೋಣ. ಈಗ ನಮಗೆ ಬೇಕಾಗಿರುವುದು ಸುಮಾರು ಒಟ್ಟು 1 ಲಕ್ಷ 52 ಸಾವಿರ ಟಿಕೆಗಳೆಂದು ನೀವು ಹೇಳಿದ್ದೀರಿ. ಇದರಲ್ಲಿ 75,000 ಟಿಕೆಗಳನ್ನು ಇಂಡಿಯಾ ಸರ್ಕಾರದವರು ಬೇರೆ ಕಡೆಯಿಂದ ಆಮದು ಮಾಡಿ ತರಿಸಿಕೊಡುತ್ತಾರೆಂದೂ ಉಳಿದ 80 ಸಾವಿರ ಚಿಲ್ಲರೆಯಷ್ಟು ಟಿಕೆಗಳನ್ನು ಇಲ್ಲಿಯೇ ಸರಿಪಡಿಸಿಕೊಳ್ಳುತ್ತೇವೆಂದೂ ತಿಳಿಸಿದ್ದೀರಿ. ಈ 75,000 ಟಿಕೆಗಳಿಗೆ ಎಷ್ಟು ಖರ್ಚಾಗುತ್ತದೆಂದು ನೋಡೋಣ. ಈ ಹಣ ಮತ್ತು ಮಾನ್ಯ ನಚಿವರು ಹೇಳಿದಹಾಗೆ ಉಳಿದ 80ಸಾವಿರ ಟಿಕೆಗಳನ್ನು ಇಲ್ಲಯೇ 20 ರೂಪಾಯಿನಲ್ಲೋ 25 ರೂಪಾಯಿನಲ್ಲೋ ಹೆಚ್ಚಿಗೆ

(ಶ್ರೀ ಕೆ. ಪಟ್ಟಾಭಿರಾಮ್).

ದರದಲ್ಲಿ ಸಂಗ್ರಹಣ ಕಾರ್ಯದಿಂದ ಶೇಖರಿಸಬೇಕಾಗಿರುವುದರಿಂದ ಇದರಿಂದ ಇದಕ್ಕಾಗುವ ಹಣ, ಇವೆರಡನ್ನೂ ಲೆಕ್ಕ ಹಾಕಿದರೆ ಅದು $3\frac{1}{2}$ ಕೋಟಿ ರೂಪಾಯಿಗಳಾಗುತ್ತವೆ. ಅಂದರೆ, ವರ್ಷವೊಂದಕ್ಕೆ ಬೆಂಗಳೂರು, ಕೋಲಾರದ ಚಿನ್ನದಗಣಿ ಮತ್ತು ದಾವಣಗೆರೆ—ಈ ಪ್ರದೇಶಗಳಲ್ಲಿ ಖರ್ಚು ಮಾಡುವ ದವಸದಿಂದ ಬರಬಹುದಾದ ದುಡ್ಡು ಮತ್ತು ನಾವು ಖರ್ಚು ಮಾಡಿಕೊಳ್ಳುವ ದುಡ್ಡು ಇವನ್ನು ಲೆಕ್ಕಹಾಕಿದರೆ ವರ್ಷಕ್ಕೆ ಸುಮಾರು $1\frac{1}{2}$ ಕೋಟಿ ರೂಪಾಯಿಗಳವರೆಗೂ ಹೆಚ್ಚಿಗೆ ಖರ್ಚು ಮಾಡಬೇಕೆಂದು ಅಂದಾಜು ಮಾಡಿದ ಹಾಗಾಯಿತು. ಈ ರೀತಿ $1\frac{1}{2}$ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರಿಂದ ಯಾರಿಗಾದರೂ ಸಮಾಧಾನವಾಗುತ್ತದೆಯೇ, ಜನರ ಕೂಗು ತಪ್ಪುತ್ತದೆಯೇ, ಆ ಪಟ್ಟಣಿಗರಾದರೂ ತೃಪ್ತಿಪಡುತ್ತಾರೆಯೇ? ಇಷ್ಟು ಖಂಡಿತವಾಗಿ ಹೇಳಬಹುದು: ಸರ್ಕಾರದವರಿಗೆ $1\frac{1}{2}$ ಕೋಟಿ ರೂಪಾಯಿಗಳು ನಷ್ಟವಾಗುತ್ತಿರುವುದರಿಂದ ಪಟ್ಟಣಿಗರಿಗೇನೂ ಅನುಕೂಲವಾಗಿರುವುದಿಲ್ಲ. ಮಾನ್ಯ ಸ್ನೇಹಿತರಾದ ಶ್ರೀವಾಣಿ ಶಂಕರಲಿಂಗೇಗೌಡರು ಒಂದು ಪ್ರಶ್ನೆ ನಮ್ಮ ಮುಂದಿಟ್ಟರು, ಅದನ್ನು ಸ್ವಲ್ಪ ನಾವು ಗಮನಿಸಬೇಕು. ಅದಷ್ಟು ಉಹೇಪೆಕ್ಷೆ ಮಾಡುವಂಥದಲ್ಲ. ನೀವು ಕೊಟ್ಟಿರುವಕ್ಕೆ ಅಂದಾಜಿನಲ್ಲಿ ಬಫರ್ ಸ್ಟಾಕ್, ಅಂದರೆ ಆಪತ್ತಿಗೆಂದು ಕೂಡಿಡುವುದು, ಅದನ್ನು ನೋಡಿದರೆ ಈ ಎರಡು ಮೂರು ಪಟ್ಟಣಗಳನ್ನು ಬಿಟ್ಟು ಉಳಿದ ಕಡೆಗಳಲ್ಲಿನ ಜನರಿಗೆ ಸಹಾಯ ಮಾಡುವ ನಿರೀಕ್ಷಣೆಯಿಂದ ನೀವು ಅಂಕಿ ಸಂಗ್ರಹ ಮಾಡಿಲ್ಲವೆಂದು ಕಾಣುತ್ತದೆ. ಶ್ರೀವಾಣಿ ಶಂಕರಲಿಂಗೇಗೌಡರು ಮಾತನಾಡುವಾಗ ಕೆಲವರು ಪ್ರತಿಭಟಿಸಿ ಹೇಳಿದ್ದನ್ನು ಕೇಳಿ ನನಗೊಂದು ಶಂಕೆಯುಂಟಾಯಿತು. ಅವರು ಎಲ್ಲರಿಗೂ ಆಹಾರ ಕೊಡುತ್ತೇವೆಂಬ ಭಾಗ್ವಾನ ಮಾಡುತ್ತಿಲ್ಲವೆಂದು ಹೇಳಿದ ಹಾಗಾಯಿತು. ಇಲ್ಲಿ ನಾವು ಮಾತನಾಡಬೇಕಾದರೆ, ಪ್ರತಿನಿಧಿಗಳಾಗಿ ನಿಂತು ನಮ್ಮ ಜವಾಬ್ದಾರಿಯನ್ನರಿತು ಮಾತನಾಡಬೇಕು. ಧಾನ್ಯ ಸಂಗ್ರಹಣ ಮಾಡುವಾಗ ಹಳ್ಳಿಗಾಡಿನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 12 ಲಕ್ಷ ಪಲ್ಲಗಳನ್ನು ತೆಗೆದುಕೊಂಡು ಹೋಗುವವರಾಗಿದ್ದೀರಿ. ಇದಲ್ಲದೆ 2 ಲಕ್ಷ ಪಲ್ಲ ಬೇರೆ ತೆಗೆದುಕೊಳ್ಳುತ್ತೀರಿ. ಇದರಿಂದ ಅಲ್ಲಿನ ಪರಿಸ್ಥಿತಿಯೇನಾಗುತ್ತದೆ? ಸಂಗ್ರಹಣವಾಗಿ ಹಳ್ಳಿಗಾಡಿನ ಪ್ರದೇಶಗಳಿಂದ ಪಟ್ಟಣಕ್ಕೆ 14 ಲಕ್ಷ ಪಲ್ಲ ಸಾಗಿಬಿಟ್ಟ ಮೇಲೆ ಆ ಹಳ್ಳಿಗಾಡುಗಳಲ್ಲಿ ಏನು ಪರಿಣಾಮವಾಗುತ್ತದೆ? ನೀವು ಯಾವ ದರವಲ್ಲ ತೆಗೆದುಕೊಳ್ಳುತ್ತೀರೋ ಆ ದರವೇ ಸಾಮಾನ್ಯವಾಗಿರುತ್ತದೆ. ಅಲ್ಲಿಗೆ ನೀವು 14 ಲಕ್ಷ ಪಲ್ಲ ತೆಗೆದುಕೊಂಡು ಹೋದ ಮೇಲೆ, ಉಳಿದಿರುವ ಧಾನ್ಯವನ್ನು ಸಾಮಾನ್ಯವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕೊಂಡುಕೊಂಡು ಹೋಗಬೇಕಾದರೆ ಯಾವ ದರದಲ್ಲಿ ಕೊಂಡುಕೊಳ್ಳಬೇಕಾಗಿರುತ್ತದೆ, ಏನು ಕಷ್ಟವಾಗುತ್ತದೆಂಬುದನ್ನು ತಾವೇ ಸ್ವಲ್ಪ ಯೋಚನೆ ಮಾಡಿ. ದರಗಳು ವಿಪರೀತ ಜಾಸ್ತಿಯಾಗುತ್ತವೆಂಬುದರಲ್ಲಿ ಅನುಮಾನವಿಲ್ಲ.

ಇನ್ನೊಂದು ದೃಷ್ಟಿಯಿಂದಲೂ ಇದನ್ನು ನೋಡಬೇಕು. ದೇಶದಲ್ಲಿ ಈ ಸಾರಿ ಮಳೆ ಬೆಳೆ ಚೆನ್ನಾಗಿಲ್ಲ. ಕ್ಷಾಮ ಕ್ಷಾಮ ಎಂದು ಬೊಬ್ಬೆ ಕೇಳಿ ಬರುತ್ತಿದೆ. 9 ಜಿಲ್ಲೆಗಳಲ್ಲಿ ಮೂರು ಜಿಲ್ಲೆಗಳಾದ ಕೋಲಾರ, ತುಮಕೂರು, ಚಿತ್ರದುರ್ಗಗಳಲ್ಲಿ ಹೆಚ್ಚಾಗಿ ಕ್ಷಾಮವಿದೆಯೆಂದು ನೀವೇ ಹೇಳುತ್ತಿದ್ದೀರಿ; ಅಲ್ಲಿ ಧಾನ್ಯ ಸಂಗ್ರಹಣ ಮಾಡುವುದಕ್ಕಾಗುವುದಿಲ್ಲ. ಇದೇ ರೀತಿಯಲ್ಲಿ ಬೇರೆ ಕಡೆಗಳಲ್ಲೂ ಹೇಗೆ ಸಂಗ್ರಹಣ ಮಾಡುವುದು ಕಷ್ಟವೆಂಬುದನ್ನು ಹೇಳುತ್ತೇನೆ. ನೀವೀಗ ನಿಮಗೆ ಬೇಕಾದ 12 ಲಕ್ಷ ಪಲ್ಲ ಬತ್ತದ ವಸೂಲಿಗಾಗಿ ಜಮೀನುಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡಿದ್ದೀರಿ, ಇದರ ಪ್ರಕಾರ, ಹಳೆಯ ಕಾಲದ ನಾಲಾ ಕೆಳಗಿನ ಸುಮಾರು 2 ಲಕ್ಷ ಎಕರೆಗಳಲ್ಲಿ ಎಕರೆಗೆ 3 ಪಲ್ಲಗಳಂತೆ ಸುಮಾರು $4\frac{1}{2}$ ಲಕ್ಷ ಬರುವುದಾಗಿಯೂ, ಹೊಸ ನಾಲೆಗಳ ಕೆಳಗಿನ 1 ಲಕ್ಷ ಎಕರೆಗಳಿಂದ ಎಕರೆಗೆ ಒಂದು ಪಲ್ಲದಂತೆ 75,000 ಪಲ್ಲಗಳು ಬರುವುದಾಗಿಯೂ, ಕೆರೆಗಳು ಮತ್ತು ಬಾವಿಗಳ ಕೆಳಗಿನ $4\frac{1}{2}$ ಲಕ್ಷ ಎಕರೆಗಳಿಂದ ಎಕರೆಗೆ ಎರಡು ಪಲ್ಲಗಳಂತೆ $7\frac{3}{4}$ ಲಕ್ಷ ಪಲ್ಲಗಳು ಬರುವುದಾಗಿಯೂ, ಮಳೆಯಿಂದಲೇ ಆಗುವ ಪ್ರದೇಶಗಳಾದ $1\frac{1}{2}$ಲಕ್ಷ ಎಕರೆಗಳಿಂದ ಸುಮಾರು 56,000 ಪಲ್ಲ ಬರುವುದಾಗಿಯೂ ನಿರೀಕ್ಷಣೆ ಮಾಡಿದ್ದೀರಿ. ಇರುವ ತೊಂದರೆಯೇನೆಂದರೆ, ಕೆರೆಗಳ ಮತ್ತು ಬಾವಿಗಳ ಕೆಳಗಣ ಜಮೀನುಗಳಿಂದ ಬರಬೇಕೆಂದಿರುವ 7 ಲಕ್ಷ 76 ಸಾವಿರ ಪಲ್ಲಗಳನ್ನು ವಸೂಲು ಮಾಡುವುದು ಸಾಧ್ಯವೇ? ಈ ಕೆರೆ ಬಾವಿಗಳು ಹೆಚ್ಚಾಗಿರುವುದು ಕೋಲಾರ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ. ಈಗ ನಿನ್ನೆ ತಾನೆ ನಡೆದ ಚರ್ಚೆಯಿಂದ ತಿಳಿದು ಬಂದಿರುವಂತೆ ಮೈನರ್ ಕೆರೆಗಳ ಜೀರ್ಣೋದ್ಧಾರದ ಕೆಲಸ ಸರಿಯಾಗಿ ನಡೆಯದೆ ಅನೇಕ ಕೆರೆಗಳು ನಾದುರಸ್ತಿಯಲ್ಲವೆ.

2-30 P. M.

ಶ್ರೀ ಎಚ್. ಸಿದ್ದವೀರಪ್ಪ.—ಒಂದು ನಿಮಿಷ ಅವಕಾಶ ಕೊಟ್ಟರೆ ಒಂದು ವಿಷಯ ಹೇಳಬಯಸುತ್ತೇನೆ. ಈಗ ತಮಗೆ ಕೊಟ್ಟಿರುವ ವರದಿಯನ್ನು ತಯಾರು ಮಾಡಿದ ಕಾಲಕ್ಕೂ ಈಗ್ಗೂ ಬಹಳ ಬದಲಾವಣೆಯಾಗಿದೆ. ಆಗಿನ ಸನ್ನಿವೇಶ ಈಗಿಲ್ಲ. ಈಗ ಪರಿಸ್ಥಿತಿ ಬದಲಾಯಿಸಿದೆಯೆಂದು ನಾನು ಹಿಂದೆಯೇ ಹೇಳಿದ್ದೇನೆ. It is extremely conjuctural to think of those days ಎಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮ್.—ಅವರು ಹೇಳಿದ ಮಾತಿನಿಂದ ನನ್ನ ವಾದಕ್ಕೆ ಸಮರ್ಥನೆ ದೊರತಂತೇ ಆಯಿತು. ನಾನಾಗಲೇ ಹೇಳಿದಂತೆ, ಈ ಮೂರನೆಯ ಭಾಗದಿಂದ ಕ್ಷಾಮದ ಕಾರಣದಿಂದಲೂ, ಮತ್ತು ಕೆರೆಗಳು ನಾದುರಸ್ತಿಗಿರುವುದರಿಂದಲೂ ಮತ್ತು ಈಗ ಬೇಸಗೆಯ ಬೆಳೆಯಾಗದಿರುವುದರಿಂದಲೂ ನೀವು ನಿರೀಕ್ಷಿಸಿದಷ್ಟು ಸಂಗ್ರಹಣವಾಗುವುದು ಬಹಳ ಕಷ್ಟ. ಅದರಲ್ಲೂ ಅಲ್ಲಿ ಎಕರೆಗೆ ಎರಡು ಪಲ್ಲ ಬರಬೇಕೆಂದು ಹೇಳಿದ್ದೀರಿ. ಈ ರೀತಿಯಲ್ಲಿ ಅಂಕಿ ಅಂಶಗಳ ಪ್ರಕಾರ ನಿಮ್ಮ ನಿರೀಕ್ಷಣೆಯಷ್ಟು ಧಾನ್ಯ ಸಂಗ್ರಹಣೆಯಾಗುವುದಿಲ್ಲ. ಇನ್ನೊಂದು ಕಡೆ $1\frac{1}{2}$ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು. ಮತ್ತೊಂದು ಕಡೆ ಕ್ಷಾಮ ತಲೆದೋರಿದೆ. ಹೀಗಿರುವಲ್ಲಿ ನನಗನ್ನಿಸುತ್ತದೆ: ನಿಮಗೆ ಸಂಗ್ರಹಣ ಕಾರ್ಯದಲ್ಲಿ ಈ ಸಾರಿ ಬಹಳ ಕಷ್ಟವಿದೆ. ಒಟ್ಟಿನಲ್ಲಿ ಕೆಲವು ಭಾಗಗಳನ್ನು ಬಿಟ್ಟರೆ, ಶ್ರೀವಾಣಿ ಗೋಪಾಲಗೌಡರು ಹೇಳಿದ ಮಾತುಗಳು ಬಹಳ ಮಾನ್ಯವಾಗಿವೆಯೆಂದು ನನ್ನ ಅಭಿಪ್ರಾಯ. ಇವೊತ್ತಿನ ದೃಷ್ಟಿಯಲ್ಲಿ ಸಂಗ್ರಹಣ ಕಾರ್ಯದಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ ಏಕೆಂದರೆ ಈಗ ನಡೆಯುತ್ತಿರುವ (ಪ್ರೊಕ್ಯೂರ್‌ಮೆಂಟ್ ಸಿಸ್ಟಂ) ವಸೂಲಿ ಪದ್ಧತಿಯಲ್ಲಿ ಬಹಳ ಕಷ್ಟವಿದೆ. ಪಹಣಿ ಬರೆಯುವುದು, ಸರ್‌ಪ್ಲಸ್ ಹೊಲ್ಡರುಗಳೆಂದು (declare) ಇತ್ಯರ್ಥ ಮಾಡುವುದು, ಇದೆಲ್ಲಾ ಬಹಳ ಕಿರುಕುಳಗಳಿಗೆ ಅವಕಾಶವಾಗುತ್ತದೆ. ಹಳ್ಳಿಗಳಲ್ಲಿ

ಬಹುಶಃ ಜವಾಬ್ದಾರಿ ಸರ್ಕಾರ ಬಂದು ಸರ್ಕಾರದ ವರಿಗೂ ಜನಗಳಿಗೂ ವಿಧುರ ಬಾಂಧವ್ಯದ ಒಂದು ಕಾರ್ಯಕ್ರಮವಿರಬೇಕೆನ್ನುವ ಸಂದರ್ಭದಲ್ಲಿ, ಮೊಟ್ಟ ಮೊದಲನೆಯದಾಗಿ ದುರದೃಷ್ಟವಶಾತ್ ಈ ಪ್ರೊಕ್ಯೂರ್‌ಮೆಂಟ್ ಪದ್ಧತಿ ಅನಿವಾರ್ಯವಾಗಿ ಬರುವುದು ಜನತೆಗೂ ಸರ್ಕಾರದವರಿಗೂ ವೈಮನಸ್ಯವುಂಟಾಗಲು ಕಾರಣವಾಯಿತು; ಸ್ನೇಹ ಸೌಹಾರ್ದ ಉಂಟಾಗಲಲ್ಲ. ಇದು ದೇಶದ ದುರದೃಷ್ಟವೆಂದು ಹೇಳಬೇಕು. ಪ್ರಜಾ ನತ್ತೆ ತನ್ನ ಒಂದು ಜವಾಬ್ದಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ನಮ್ಮಲ್ಲಿ ಹಿತಕರವಾದ ವಾತಾವರಣವಿಲ್ಲ ವಲ್ಲಾ ಎಂದು ನನಗೆ ವ್ಯಸನವಾಗುತ್ತದೆ. ಆದ್ದರಿಂದ ಪ್ರೊಕ್ಯೂರ್ ಮೆಂಟನ್ನು ಬಿಡುವುದು ಸುವ್ಯವಸ್ಥಿತವಾದ ಮಾರ್ಗ; ಅದಕ್ಕೆ ಸ್ವಲ್ಪ ಎಚ್ಚರಿಕೆ ಬೇಕು. ಇದು ಬಿಟ್ಟು ರೆವಿ ಸಿಸ್ಟಂ ತೆಗೆದುಕೊಂಡರೆ ಇನ್ನೊಂದು ತೊಂದರೆ ಬರುತ್ತದೆ. ನಾನು ನಮ್ಮನೆ ಪಜಗಳನ್ನು ಹಿಡಿದು ಟೀಕಿಸುತ್ತಿದ್ದೇನೆಂದು ತಾವು ಭಾವಿಸಬಾರದು. ವಾಸ್ತವವಾಗಿಯೂ ರೆವಿ ಪದ್ಧತಿಯು ಇವೊತ್ತಿನ ಸಂದರ್ಭದಲ್ಲಿ ಸರಿಹೋಗುವುದಿಲ್ಲ. ಅದರಿಂದ ಇನ್ನೂ ಅನೇಕ ತೊಡಕುಗಳು ಜಾಸ್ತಿಯಾಗುತ್ತವೆಂದು ನನಗನ್ನಿಸುತ್ತದೆ. ಅದನ್ನೆಲ್ಲಾ ನಾನು ವಿವರಿಸುವುದಕ್ಕೆ ಹೋಗುವುದಿಲ್ಲ. ಪ್ರಾಯಶಃ ಇದುವರೆಗೆ ಆಗಿರತಕ್ಕ ಚರ್ಚೆಯನ್ನು ನೋಡಿದರೆ ಈ ರೆವಿ ಪದ್ಧತಿಯ ವಿಚಾರವಾಗಿ ಹೆಚ್ಚಿಗೆ ಮಾತನಾಡುವುದು ಅಪ್ರಕೃತ, ಅನಗತ್ಯವೆಂದು ತೋರುತ್ತದೆ. ಆದ್ದರಿಂದ ಇಂದು ನಡೆಯುತ್ತಿರುವ ಪ್ರೊಕ್ಯೂರ್‌ಮೆಂಟ್ ಪದ್ಧತಿಯೂ ಕಷ್ಟವಾದದ್ದು. ರೆವಿ ಪದ್ಧತಿ ಇನ್ನೂ ಕಷ್ಟತರವಾದದ್ದು. ಅವುಗಳಿಂದ ನಾವು ಕೋರತಕ್ಕ ಪರಿಹಾರಕ್ಕಿಂತ ಸಡೆಯತಕ್ಕ ಕಷ್ಟವೆ ಜಾಸ್ತಿ. ಈ ಸಂದರ್ಭದಲ್ಲಿ ಶ್ರೀಮಾನ್ ರುದ್ರಪ್ಪನವರು ಹೇಳಿದ ಎರಡು ಮಾತುಗಳನ್ನು ಸಭೆಯ ಗಮನಕ್ಕೆ ತರುತ್ತೇನೆ. ಶ್ರೀಮಾನ್ ಖಿದ್ವಾಯಿಯವರು ಇಂಡಿಯಾ ದೇಶಕ್ಕೆ ಅನ್ವಯಿಸುವ ಒಂದು ನೀತಿಯನ್ನು ಇಂದು ಪ್ರತಿಪಾದಿಸಿದ್ದಾರೆ. ಅದರಲ್ಲಿ ಡೀಕಂಟ್ರೋಲಿನ ಆದರ್ಶವನ್ನು ಮುಂದಿಟ್ಟುಕೊಂಡು ಇಂದು ಹೆಜ್ಜೆಯಿಡಬೇಕೆಂದು ಹೇಳಿದ್ದಾರೆ. ನನಗಿದನ್ನು ಕೇಳಿದರೆ ಬಹಳ ಆಶ್ಚರ್ಯವಾಗುತ್ತದೆ. ಡೀಕಂಟ್ರೋಲ್ ಮಾಡಬೇಕೆಂಬ ಭಾವನೆಯಿರುವವರು ನಮ್ಮನೆ ಡೀಕಂಟ್ರೋಲಿನ ಆದರ್ಶ, ಆದರ್ಶ ಎಂದೇಕೆ ಹೇಳುತ್ತಾರೋ ಗೊತ್ತಿಲ್ಲ. ಅದರಂತೆ ಮುಂದುವರಿಯುವುದಕ್ಕೆ ಎದೆಯಲ್ಲೇಕೆ ನಡುಕವಾಗಿದೆ?

Sri J. MOHAMED IMAM.—It is their cherished goal.

ಶ್ರೀ ಕೆ. ಪಟ್ಟಾಭಿರಾಮ್.—ಹೌದು; ಯಾವಾಗ ನೋಡಿದರೂ cherished goal, cherished goal ಎನ್ನುತ್ತಲೇ ಇದ್ದಾರೆ. ಸಿಟಿಗಳವರಾದರೂ ನೀವು ನಿಯಂತ್ರಣವಿಟ್ಟುಕೊಂಡಿರುವುದರಿಂದ ತೃಪ್ತಿ ಪಟ್ಟುಕೊಂಡಿದ್ದಾರೆಯೇ? ಇಲ್ಲ! ಸರ್ಕಾರಕ್ಕೂ ಇದರಿಂದ ಮುಂದೆ ತೊಂದರೆಬರುತ್ತದೆ. ನಾವಿಲ್ಲಿ ಪ್ರತಿನಿಧಿಗಳಾಗಿ ಬಂದು ನಿಂತು ನಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕಾಗಿ ಇದನ್ನು ಹೇಳುತ್ತಿದ್ದೇವೆಂದು ತಾವು ತಿಳಿಯಬೇಕು. ಶ್ರೀಮಾನ್ ಗೋಪಾಲಗೌಡರು ಹೇಳಿದ ಒಂದು ಮಾತನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದಾದರೆ ಎಲ್ಲವೂ ಸರಿಹೋಗುತ್ತದೆ. ಅವರು ಹೇಳಿದರು, ದೇಶದಲ್ಲಿ ಸಮನ್ವಯಗೊಂಡ ನಿಯಂತ್ರಣ ಪದ್ಧತಿ (integrated control system) ಬರಬೇಕು ಎಂದು. ಆದರೆ ಈದೇಶ ಅದಕ್ಕಿನ್ನೂ ತಯಾರಾಗಿಲ್ಲ.

ಆದ್ದರಿಂದ ಕಡೆಯದಾಗಿ ಇಷ್ಟುಮಾತ್ರ ಹೇಳುತ್ತೇನೆ. ಇದೇ ಈಗ್ಗೆ ದಿವ್ಯೌಷಧ. ಏನೆಂದರೆ ಶ್ರೀಮಾನ್ ವಿದ್ವಾಯಿಯವರು ಹೇಳಿದ್ದನ್ನು ಈ ಕೂಡಲೆ ಮಾಡಬೇಕು. ಸಚಿವರು ಹೇಗೂ 27ನೆಯ ತಾರೀಖು ಬೊಂಬಾಯಿಗೆ ಹೋಗುತ್ತಾರೆ; ಮೂರು ತಿಂಗಳ ಹಿಂದೆ ಅವರು ಧೈರ್ಯದಿಂದ ಹೆಜ್ಜೆಯಿಟ್ಟರು; ಮೈನೂರಿನಲ್ಲಿ ಕಂಟ್ರೋಲನ್ನು ತೆಗೆದುಹಾಕಿದರು, ಸಡಿಲಿಸಿದರು. ಅದರಿಂದೇನೂ ತೊಂದರೆಯಾಗಲಿಲ್ಲ. ನಿಯಂತ್ರಣವನ್ನು ತೆಗೆದುಹಾಕಿದಕ್ಷಣ ಸರ್ಕಾರದವರು ಆಹಾರವನ್ನು ಒದಗಿಸುವ ಜವಾಬ್ದಾರಿಯನ್ನು ಬಿಟ್ಟುಬಿಡುತ್ತಾರೆಂಬ ವಾದವು ಸರಿಯಲ್ಲ. ನಾನು ಹೇಳುವುದೇನೆಂದರೆ, ಪ್ರೊಕ್ಯೂರ್‌ಮೆಂಟನ್ನು ಬಿಟ್ಟು ಸರಿಯಾದ ದರದಲ್ಲಿ open ಮಾರ್ಕೆಟ್ಟಿನಲ್ಲಿ ಸರ್ಕಾರವೂ ಕೂಡ ಧಾನ್ಯವನ್ನು ಕೊಳ್ಳಲಿಕ್ಕೆ ಪ್ರಯತ್ನಪಡಲಿ. ಹೇಗೂ ತಾವು $1\frac{1}{2}$ ಕೋಟಿ ರೂಪಾಯಿಗಳನ್ನು ನಷ್ಟಮಾಡಿಕೊಳ್ಳಲಿಕ್ಕೆ ತಯಾರಾಗಿದ್ದೀರಿ. ಆ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ open ಮಾರ್ಕೆಟ್ಟಿನಲ್ಲಿ ಕೊಂಡುಕೊಂಡು ಫೇರ್ ಪ್ರೈಸ್ ಡಿಪೋಗಳು ಎಲ್ಲೆಲ್ಲಿ ಅವಶ್ಯಕವೆಂದೆಯೆಂದು ಕಂಡುಬರುತ್ತದೆಯೋ ಅಲ್ಲೆಲ್ಲಾ ಅವುಗಳನ್ನು ಏರ್ಪಡಿಸಿ, ನಿಯಂತ್ರಣವನ್ನು ಕಿತ್ತುಹಾಕಬೇಕೆಂದು ಹೇಳುತ್ತೇನೆ. ಆ ಒಂದೂವರೆ ಕೋಟಿ ರೂಪಾಯಿಗಳನ್ನು ಈ ರೀತಿಯಲ್ಲಿ ರೈತಾಪಿ ಜನರಿಗಾದರೂ ಕೊಟ್ಟರೆ ಎಷ್ಟೋ ಸಹಾಯಮಾಡಿದಹಾಗಾಗುತ್ತದೆ.

ಇನ್ನೊಂದು ಮಾತು ಹೇಳುತ್ತೇನೆ. ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಮಡಿಯನ್ನಿಸಬೇಕೆಂದಿದ್ದೇನೆ. ಇದಕ್ಕಾಗಿ ಯಾರೂ ತಪ್ಪು ಅಭಿಪ್ರಾಯಪಡಬಾರದು. ಇಷ್ಟೆಲ್ಲಾ ಕಷ್ಟಗಳಾಗಿದ್ದರೂ ಕೂಡ ಇನ್ನೂ ನಾವು ಹೆಚ್ಚು ಬೆಳೆಯತಕ್ಕ ರೀತಿಯಲ್ಲಿ ಯಾವ ಕ್ರಾಂತಿಕಾರಕವಾದ ಮಾರ್ಪಾಟುಗಳಿಗೂ ಸಿದ್ಧರಾಗಿಲ್ಲ. ಇದು ಮೊದಲನೆಯ ದಾರಿ. ಶ್ರೀಮಾನ್ ಖಿದ್ವಾಯಿಯವರು ಹೇಳಿದ ಹೇಳಿಕೆಯ ಒಂದು ಪದವನ್ನೇ ಉಪಯೋಗಿಸಿ ಹೇಳುವುದಾದರೆ "Self-sufficiency for food is the ideal" ಆಹಾರದ ಬಗ್ಗೆ ಸ್ವಪರಿಪೂರ್ಣತೆ ಎಂಬುದು ನಮ್ಮ ಗುರಿಯಾಗಿರಬೇಕು. ಕೇಂದ್ರ ಸಚಿವರು ಹೇಳಿದ ಆ ಮಾತುಗಳು ಪ್ರತಿಯೊಬ್ಬ ಸಚಿವರ ಬಾಯಲ್ಲಿಯೂ ಬಂದು ಪ್ರತಿಯೊಂದು ಹಳ್ಳಿ, ಊರು, ಪ್ರಾಂತಗಳಲ್ಲೂ ಇಂದೇ ದೇಶವನ್ನು ಸ್ವಪರಿಪೂರ್ಣವಾಗಿ ಮಾಡುವುದಕ್ಕೆ ಪ್ರಯತ್ನಮಾಡಲಿ. ಆ ದಾರಿಯಲ್ಲಿ ಹೆಜ್ಜೆಯಿಟ್ಟಿದ್ದರೆ ಸಾಲದು. ಹೀಗೆಯೇ ಇನ್ನೂ ಅನೇಕ ವಿಚಾರಗಳನ್ನು ಹೇಳಬಲ್ಲೆ. ಆದರೆ ಕಾಲಾವಕಾಶವಿಲ್ಲ. ಒಟ್ಟಿನಲ್ಲಿ ಇಷ್ಟು ಮಾತ್ರ ಹೇಳಬಹುದು. ಇಂದು ಈ ಒಂದು ದೊಡ್ಡಹೆಜ್ಜೆ ಇಡದಿದ್ದೇಹೋದರೆ ನಾವು ಮುಂದೆ ಬಹಳ ಕಷ್ಟಕ್ಕೊಳಗಾಗಬೇಕಾಗುತ್ತದೆ. ಶ್ರೀಮಾನ್ ಖಿದ್ವಾಯಿಯವರು ಹೇಳಿದಹಾಗೆ ಡೀಕಂಟ್ರೋಲನ್ನು ಕೂಡಲೆ ಮಾಡೋಣ. ಜೊತೆಗೆ open ಮಾರ್ಕೆಟ್ಟಿನಲ್ಲಿ ರೈತನಿಗೆ ಯಾವ ದರವನ್ನು ಕೊಟ್ಟರೆ ತೃಪ್ತಿಯಾಗುತ್ತದೆಯೋ, ವಸ್ತುಸ್ಥಿತಿಯನ್ನರಿತು ಯಾವ ದರ ಕೊಡಬಹುದೋ ಅದನ್ನು ಕೊಟ್ಟು ಕೊಂಡು ಕೊಳ್ಳಿ ....

ಶ್ರೀ ಕೆ. ಹನುಮಂತಯ್ಯ.—ಒಂದು ವಿಷಯ ಕೇಳಬೇಕೆಂದಿದ್ದೇನೆ. Open ಮಾರ್ಕೆಟ್ಟಿನಲ್ಲಿ ಸರ್ಕಾರದವರೇ ಕೊಂಡುಕೊಳ್ಳುವುದಕ್ಕೆ ಬದಲಾಗಿ ಅದೇ ವ್ಯಾಪಾರದಲ್ಲಿರುವ ಲೈಸೆನ್ಸ್‌ದಾರ್ತ ವರ್ತಕರಿಂದ ಮಾಡಿಸಿದರೆ ಅನುಕೂಲವಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮಿ.—ನಾನು ಏನಯಂದಿಂದ ಒಂದು ಹೇಳುತ್ತೇನೆ. ಅದನ್ನು ತತ್ವಾನುಸಾರ ಒಪ್ಪಿ ಕೊಳ್ಳದೇಕೇ ಹೊರತು ನಮ್ಮ ದೇಶದ ಈಗಿನ ಸ್ಥಿತಿ ಯೊಳಗಲ್ಲ. ಈ ವಿಚಾರದಲ್ಲಿ ನಮಗಿರುವ 5—6 ವರ್ಷದ ಅನುಭವವನ್ನು ತೆಗೆದುಕೊಂಡರೆ ಆ ಪದ್ಧತಿ ಯಿಂದ ಕೆಡುಕುಬರುತ್ತದೆ. ಅನ್ಯಾಯವಾಗಿ ದೇಶಕ್ಕೆ ಕೆಟ್ಟಹೆಸರು ಬರುತ್ತದೆ; ಸರ್ಕಾರಕ್ಕೂ ಕೆಟ್ಟಹೆಸರು ಬರುತ್ತದೆ. ಆದ್ದರಿಂದ ಧೈರ್ಯವಾಗಿ ಮುಂದಕ್ಕೆ ಹೋಗಿ. ಯಾವಾಗಲೂ ಜನರಲ್ಲಿ ಉತ್ಸಾಹ ಉಂಟಾ ಗುವಂತೆ ಮಾಡಬೇಕು. ಯಾವಾಗ ಉತ್ಸಾಹ ಬರು ತ್ತದೆ? ಒಳ್ಳೆಯ ದರದಲ್ಲಿ ಕೊಂಡುಕೊಳ್ಳತಕ್ಕ ಒಂದು ಪ್ರೋತ್ಸಾಹವನ್ನು ರೈತನಿಗೆ ಕೊಡಿ. ಎಲ್ಲಾ ಸಹಾಯ ಗಳನ್ನೂ ಮಾಡಿ. ಆಹಾರವನ್ನು ಬೆಳಸಲಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೆಂದು ಕೂಡ ನಾನು ಹೇಳ ಬಲ್ಲೆ. ಆದರೆ ಕಾಲಾವಕಾಶವಿಲ್ಲ. ಒಟ್ಟಿನಲ್ಲಿ ನನ್ನ ಖಚಿತವಾದ ಅಭಿಪ್ರಾಯವನ್ನು ಹೇಳುವುದಾದರೆ, ಯಾವ ಮಾರ್ಗವನ್ನು ಶ್ರೀಮಾನ್ ಹನುಮಂತಯ್ಯನವರು ಮೊಟ್ಟಮೊದಲನೆಯದಾಗಿ ಪ್ರಾರಂಭಮಾಡಿದರೋ, ಯಾವುದನ್ನು ಇಂದು ಖಚ್ಯಾಯಿಯವರು ಪೂರ್ತಿಮಾಡು ವುದಕ್ಕೆ ಸಿದ್ಧವಾಗಿದ್ದಾರೋ, ಅದೇ ಸರಿಯಾದ ಮಾರ್ಗ. ಈಗ ತಾವು ಧೈರ್ಯಮಾಡದೆ ಹೋದರೆ ದೇಶ ದಲ್ಲಿ ಯಾವುದೂ ಸರಿಹೋಗುವುದಿಲ್ಲ. ತಮ್ಮ ಆಹಾ ರದ ನೀತಿಯ ಮೇಲೆ ದೇಶದ ಅನೇಕ ಸಮಸ್ಯೆಗಳು ನಿಂತಿವೆ. ಇದರಿಂದ ದೇಶದ ಆರ್ಥಿಕಾಭಿವೃದ್ಧಿ ಬಹು ಮಟ್ಟಿಗೆ ಪೆಟಕಾಗಿದೆ; ಸ್ಥಬ್ಧವಾಗಿ ನಿಂತಿದೆಯೆಂದು ಹೇಳಬಲ್ಲೆ. ಆದ್ದರಿಂದ ಈ ಒಂದು ಪ್ರಶ್ನೆ ಬಗೆಹರಿದರೆ ದೇಶದಲ್ಲಿ ಇನ್ನೂ ಅನೇಕ ಸಮಸ್ಯೆಗಳು ಬಗೆಹರಿಯು ವುವು. ಆದ್ದರಿಂದ ದೀಕಂಟ್ರೋಲ್‌ಮಾಡಿ ಸರಿಯಾದ ದರವನ್ನು ಕೊಟ್ಟು ರೈತನಿಗೆ ಉತ್ಸಾಹವನ್ನುಂಟು ಮಾಡುವಂತೆ open ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳ ಬೇಕೆಂದು ಹೇಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ (ಮಂಡ್ಯ).—Open ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುವುದೆಂದರೆ ಯಾವ ರೀತಿ ವಹಾಡುವುದು? ಯಾರ ವಾಖಾಂತರ ಕೊಂಡುಕೊಳ್ಳ ಬೇಕು? ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಕೊಂಡು ಕೊಳ್ಳಬೇಕೇ? ಹೇಗೆ?

ಶ್ರೀ ಕೆ ಪಟ್ಟಾಭಿರಾಮಿ.—ಅದನ್ನೆಲ್ಲಾ ಈಗ ನಾನು ವಿವರಿಸುವುದಕ್ಕೆ ಹೋಗುವುದಿಲ್ಲ. ಆದರೆ ಸಭಾ ಪತಿಗಳ ಒಂದು ಆಣತಿ ಮತ್ತು ಸ್ನೇಹಿತರ ಒತ್ತಾಯದ ಮೇರೆ ಇಷ್ಟುಮಾತ್ರ ಹೇಳುತ್ತೇನೆ. ಹಾಗೆ ಕೊಳ್ಳುವು ದಕ್ಕೆ ಸಾಧ್ಯವಿದೆ. ಈಗಿನ ಕಷ್ಟಕಾಲದಲ್ಲಿ ಬಹುಶಃ producers' co-oparativeಸೊಸೈಟಿಗಳನ್ನು ಮಾಡ ಬಹುದು. ಇದು ಒಳ್ಳೆ ಸುಸಮಯ. ಹೆಚ್ಚಿನ ಆದರ್ಶ ಗಳು, ಏನೇನು ಉತ್ತಮ ವ್ಯವಸ್ಥೆಗಳನ್ನು ಮಾಡಬೇ ಕೆಂದು ನಮಗೆ ಕಾಂಕ್ಷೆಯಿದೆಯೋ ಅದನ್ನು ಕಾರ್ಯಗತ ಮಾಡುವುದಕ್ಕೆ ತಕ್ಕಕಾಲ ಇದು. ಅದು ಹೇಗೆಂಬು ದನ್ನು ಅವಕಾಶಕೊಟ್ಟರೆ ಇನ್ನೊಮ್ಮೆ ಸ್ಥಾಪನೆಮಾಡ ಬಲ್ಲೆ, ಸಿದ್ಧಾಂತಮಾಡಬಲ್ಲೆ. ಆದ್ದರಿಂದ ನೀವು ಮನಸ್ಸು ಮಾಡಿದರೆ, ನಾವು ಏನೇನು ಮಾಡಬೇಕೆಂದು ಅಂದುಕೊಳ್ಳುತ್ತಿದ್ದೇವೋ ಅವುಗಳನ್ನು ಮಾಡುವುದಕ್ಕೆ ಒಂದು ಅವಕಾಶ ಸಿಕ್ಕಿದಹಾಗಾಗುತ್ತದೆ. ಕೂಡಲೆ ಆ ರೀತಿಮಾಡಿ ಶ್ರೀಮಾನ್ ಖಚ್ಯಾಯಿಯವರು ತೋರಿಸಿರ ತಕ್ಕ ಮಾರ್ಗದಲ್ಲಿ ಹೆಜ್ಜೆಯಿಟ್ಟು, 27ನೆಯ ತಾರೀಖಿನಲ್ಲಿ ಬರುವ ಕಾಂಫರೆನ್ಸ್‌ನಲ್ಲಿ ಅದಕ್ಕೆ ಒತ್ತಾಯಮಾಡಿದರೆ ಎಲ್ಲವೂ ಸರಿಹೋಗುತ್ತದೆ; ಇನ್ನಾವ ಮಾರ್ಗದಲ್ಲಿ ಹೋದರೂ ಸುಭಿಕ್ಷ, ಸಾಹಾರ್ದ ತರುವುದಕ್ಕೆ ಸಾಧ್ಯ ವಿಲ್ಲವೆಂದು ಹೇಳಿ, ಮಾನ್ಯ ಸಭಾಪತಿಗಳು ನನಗೆ ತೋರಿದ ಔದಾರ್ಯಕ್ಕಾಗಿ ನಮಸ್ಕಾರ ಮಾಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು—ಮೂಡಿಗೆರೆ).—ಮಾನ್ಯ ಸಭಾಧ್ಯಕ್ಷರೆ, ಈ ದಿವಸ ನಮ್ಮ ಸರ್ಕಾರದವರು ಮಾನವಜೀವನಕ್ಕೆ ಅತ್ಯಂತ ಉಪಯು ಕ್ತವಾದ ಮತ್ತು ಕಳೆದ ಹತ್ತು ವರ್ಷಗಳಿಂದ ನಡೆದು ಕೊಂಡು ಬಂದಿರುವ ಆಹಾರದ ಹತೋಟಿಯ ವಿಚಾರ ದಲ್ಲಿ ಮುಂದೆ ಏನು ಬದಲಾವಣೆ ಮಾಡಬೇಕೆಂಬ ವಿಚಾ ರವನ್ನು ಸಭೆಯ ಮುಂದಿಟ್ಟಿದ್ದಾರೆ; ಈ ಪ್ರಶ್ನೆ ಸುಲಭ ವಾದುದಲ್ಲ. ಸುಮ್ಮನೆ ಒಂದೇ ಒಂದು ದೃಷ್ಟಿಯಿಂದ ನಮ್ಮ ಅಭಿಪ್ರಾಯವನ್ನು ಹೇಳುವುದಕ್ಕಾಗುವುದಿಲ್ಲ. ಒಂದಕಡೆ ರೈತರ ದೃಷ್ಟಿಯಿಂದ, ಇನ್ನೊಂದುಕಡೆ ಸರ್ಕಾರದ ಆಡಳಿತ ದೃಷ್ಟಿಯಿಂದ, ಮತ್ತೊಂದುಕಡೆ ಕೊಂಡುಕೊಳ್ಳುವವರ ದೃಷ್ಟಿಯಿಂದ, ಹೀಗೆ ಎಲ್ಲರ ದೃಷ್ಟಿ ಯನ್ನೂ ಗಮನದಲ್ಲಿಟ್ಟುಕೊಂಡು ಯೋಚಿಸಿ ಮಾತ ನಾಡಬೇಕಾಗಿದೆ. ಈ ಕಂಟ್ರೋಲಿನ ದೆಸೆಯಿಂದ ನಾವು ಏನೇನು ಅನಾನುಕೂಲಗಳನ್ನನುಭವಿಸಿದ್ದೇವೆಂಬುದು ಎಲ್ಲರಿಗೂ ಗೊತ್ತಿದೆ. ಅಲ್ಲದೆ ಸರ್ಕಾರ ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚಮಾಡಿದ್ದಾರೆ. ಹಾಗೆ ಮಾಡಿದರೂ ನಿಜವಾಗಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬಂದಿಲ್ಲ. ರೈತರಿಂದ ಸ್ವಲ್ಪ ಹೆಚ್ಚುಬೆಲೆ ಕೊಟ್ಟು ಕೊಂಡರೂ ಅವರಿಗೆ ಜಾಸ್ತಿ ಸುಖವಿಲ್ಲವೆಂದು ಹೇಳ ಬೇಕಾಗಿದೆ. ಬೆಂಗಳೂರು, ಕೋಲಾರ ಚಿನ್ನದಗಣಿ, ದಾವಣಗೆರೆ ಈ ಮೂರು ಪಟ್ಟಣಗಳಿಗೆ ಆಹಾರ ಒದಗ ಸುವುದಕ್ಕಾಗಿ ಈ ಕಂಟ್ರೋಲು ಇರಬೇಕೇ ಎಂಬು ದೊಂದು ಪ್ರಶ್ನೆ. ಈಗ ಇಂಡಿಯಾ ಸರ್ಕಾರದಿಂದ 85 ಸಾವಿರ ಟನ್ ಧಾನ್ಯವನ್ನು ತಂದು ಒದಗಿಸಬೇಕಾಗಿದೆ. ಇದಕ್ಕಾಗಿ ಸಿಬ್ಬಂದಿ ಖರ್ಚು ಸುಮಾರು ಒಂದೂವರೆ ಕೋಟಿ ರೂಪಾಯಿ ಆಗಬಹುದು. ಇಷ್ಟು ಹೆಚ್ಚಿನ ಹಣವನ್ನು ಖರ್ಚುಮಾಡಿ, ಇಷ್ಟು ಜವಾಬ್ದಾರಿಯನ್ನು ಹೊತ್ತು ಸರ್ಕಾರ ಆಹಾರವನ್ನೊದಗಿಸುವ ಕೆಲಸವನ್ನಿ ಟ್ಟುಕೊಳ್ಳಬೇಕೆ ಎಂಬ ಪ್ರಶ್ನೆ ಏಳುತ್ತದೆ. ನಾನು ಖಂಡಿತ ವಾಗಿ ಹೇಳಬೇಕಾದರೆ, ಖಂಡಿತವಾಗಿಯೂ ಕಂಟ್ರೋ ಲನ್ನು ತೆಗೆಯುವುದೇ ಸೂಕ್ತ. (ಕೇಳಿ! ಕೇಳಿ!) ನಾವೇ ಹಿಂದೆ ಕಂಟ್ರೋಲ್ ತೆಗೆಯಬೇಕೆಂದು ಹೇಳಿದೆವು. ಅದರಂತೆ ತೆಗೆದರು. ಆದರೆ ಜನರು ಸಹಕಾರಮಾಡದೇ ಹೋದದ್ದರಿಂದ ಮತ್ತೆ ಕಂಟ್ರೋಲ್ ಹಾಕತಕ್ಕ ಸಂದರ್ಭ ಬಂತು ದೇಶದಲ್ಲಿ. ಆದರೆ ಮುಂದೆಯೂ ಇಂಥ ಪ್ರಸಂಗ ಬರುತ್ತದೆ ಎಂಬ ಹೆದ ರಿಕೆಯಿಂದ ಮುಂದೆಯೂ ಈ ಕಂಟ್ರೋಲ್ ಪದ್ಧತಿಯನ್ನು ಬೆಳೆಸಿಕೊಂಡು ಹೋಗುವುದು ಸರಿಯಾದ ನೀತಿಯಲ್ಲ. ಇದನ್ನು ಎಷ್ಟು ದಿವಸ ಇಟ್ಟುಕೊಂಡರೂ ಬೆಳೆದು ಕೊಂಡು ಹೋಗುತ್ತದೆ. ಪೆಟ್ರೋಲ್, ಸಕ್ಕರೆ ಮುಂ ತಾದ ಪದಾರ್ಥಗಳಮೇಲೂ ಕಂಟ್ರೋಲ್ ಇತ್ತು. ಅವುಗಳನ್ನು ತೆಗೆದಮೇರೆ ಈಗ ಜನ ಸುಖವಾಗಿದ್ದಾರೆ. ಆಹಾರದ ವಿಷಯದಲ್ಲಿ ಹಾಗೆ ಮಾಡಲು ಮಳೆ ಕಷ್ಟ ಕೊಡುತ್ತಿದೆ ಎಂದು ಹೇಳಬಹುದು. ಇದು ಶಾಸನ ಸಭೆಯಾಗಿದ್ದು, ಜವಾಬ್ದಾರಿಯುತರಾಗಿರುವವರು ಆ ರೀತಿ ಹೇಳುವುದು ಸರಿಯಲ್ಲ. ನಮ್ಮದೇಶಕ್ಕೆ ಮಳೆ ಬರು ತ್ತದೆ ಅಥವಾ ಇಲ್ಲ ಎನ್ನುವುದು ಅಷ್ಟು ಸುಲಭವಾಗಿ ಹೇಳತಕ್ಕ ಮಾತಲ್ಲ. ಈಗ ಏನಾದರೂ ಸರ್ಕಾರದ ಆಹಾರ ನೀತಿ ಯಾವ ರೀತಿ ಇರಬೇಕೆಂಬುದನ್ನು ಹೇಳ ಬೇಕಾಗಿದೆ. ಸಂಸ್ಥಾನದಲ್ಲಿ 7·60 ಲಕ್ಷ ಎಕರೆ ತರೀ ಜಮೀನು ಮಾತ್ರ ಇದೆ ವ್ಯವಸಾಯವಾಗುವುದು, ಎಂದು ಹೇಳಿದರು. ಸಾಮಾನ್ಯವಾಗಿ ತರೀ ಜಮೀನಿ ನಿಂದ ಬರಬೇಕಾದ ದವಸ ಹೆಚ್ಚಾಗಿ ಮಲೆನಾಡಿನಿಂದ

ಬರಬೇಕಾಗಿದೆ. ಮಲೆನಾಡಿನ ವಿಚಾರವನ್ನು ನಾನು ಹೇಳಿದರೆ ದಯವಿಟ್ಟು ಕ್ಷಮಿಸಬೇಕು; ಯಾವಾಗಲೂ ಮಲೆನಾಡಿನ ವಿಚಾರ ಹೇಳುತ್ತೇನೆಂದು ತಿಳಿದುಕೊಳ್ಳಬಾರದು. ಬೇರೆ ಜಿಲ್ಲೆಗಳಲ್ಲಿ ತಮಗೆ ಬೇಕಾದ ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ, ಅದರಿಂದ ಹೆಚ್ಚು ಹಣ ಸಂಪಾದನೆಮಾಡುತ್ತಾರೆ. ಇದಕ್ಕೆ ಅಲ್ಲಿ ಅವಕಾಶ ಇದೆ. ಆದರೆ ಮಲೆನಾಡಿನ ಒಂದೇ ಬೆಳೆಯೆಂದರೆ ಬತ್ತ. ಈ ವರ್ಷ ಮಳೆಯಿಲ್ಲದೆ ಬತ್ತದ ಬೆಳೆ ಹಾಳಾಗಿದೆ. ಖೋತಾ ಆಗುತ್ತದೆ. ನಾನು ಇದನ್ನು ಹೇಳಿದ್ದರೆ ನನ್ನ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ; ಅದರಿಂದ ಹೇಳುತ್ತಿದ್ದೇನೆ. ಪ್ಯೂದಾನದ ಕಡೆ ಬೇಸಿಗೆಯಲ್ಲಿ ಜೋಳ, ಹೈಕ್ರಾಗಿ, ಕಬ್ಬು ಮುಂತಾದುವನ್ನು ಬೆಳೆಯುತ್ತಾರೆ. ಇದರಿಂದ ಆಹಾರವೂ ಆಯಿತು, ವ್ಯಾಪಾರವೂ ಆಯಿತು. ನಮ್ಮ ಮಲೆನಾಡಿನಲ್ಲಿ ಬರಿಯ ಬತ್ತವನ್ನು ಬೆಳೆಯುತ್ತಾರೆ. ಇದುವರೆಗೆ ನೀವು ವಸೂಲುಮಾಡುವ ಬತ್ತದಲ್ಲಿ ಬಹುಭಾಗ ಮಲೆನಾಡಿನಿಂದರೇ ಬರುತ್ತಿದೆ. ಈ ವರ್ಷವೂ ಹಾಗೆಯೇ ಅವರಿಂದ ವಸೂಲುಮಾಡಿದರೆ ಮಲೆನಾಡಿನ ಜನರಿಗೆ ಬಹಳ ತೊಂದರೆಯಾಗುತ್ತದೆ. ಹಿಂದಿನ ಐದು ವರ್ಷಗಳ ಸರಾಸರಿ ತೆಗೆದುಕೊಂಡು ಶೇಕಡ 25 ಭಾಗ ಅದರಲ್ಲಿ ಕಡಮೆಮಾಡಿ ವಸೂಲುಮಾಡಬೇಕೆಂದು ಹೇಳಿದರು. ಇದಕ್ಕೆ ರೆಕ್ಕಪಾಕಿ ಒಬ್ಬೊಬ್ಬರಿಂದಲೂ ಎಷ್ಟೆಷ್ಟು ಪಡೆಯಬೇಕೆಂಬುದನ್ನು ನಿರ್ಧರಮಾಡುವುದಕ್ಕೆ ಸಿಬ್ಬಂದಿ ಬೇಕು. ಅಮಲ್ದಾರರು, ಸಬ್‌ಡಿವಿಜನ್ ಆಫೀಸರು ಮುಂತಾದ ಅಧಿಕಾರಿಗಳು ಬೇಕು; ಇವರಲ್ಲಿಗೆ ರೈತರು ಹೋಗಬೇಕು; ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಹಿಂದೆ 500 ಪಲ್ಲ ಬತ್ತವನ್ನು ಸರ್ಕಾರಕ್ಕೆ ಕೊಡತಕ್ಕ ರೈತನನ್ನು ಒಬ್ಬ ಗುಮಾಸ್ತ ಸೇರಿನಿಂದ ಹೊಡೆದ ಪ್ರಸಂಗ ಅನೇಕರಿಗೆ ಗೊತ್ತಿರಬಹುದು. ಹಳ್ಳಿಯ ರೈತರು ಅನೇಕರು ವ್ಯಾಪಾರ ವ್ಯವಹಾರ ಪ್ರಪಂಚದಲ್ಲಿ ತೀರ ದಡ್ಡರು. ದೇಶಕ್ಕೆ ಬೇಕಾದ ಆಹಾರವನ್ನು ಒದಗಿಸುವವರು ರೈತರು. ಇಂಥ ರೈತರ ದೃಷ್ಟಿಯಿಂದಲೂ ಸರ್ಕಾರದ ದೃಷ್ಟಿಯಿಂದಲೂ ಈ ಕಂಟ್ರೋಲ್ ಖಂಡಿತ ಹೋಗಲೇಬೇಕು. ಶ್ರೀವಾಜಗೊವಾಲಗೌಡರು ಕಂಟ್ರೋಲ್ ಇರಬೇಕೆಂದು ಹೇಳಿದರು. ಇನ್ನು ಕೆಲವರೂ ಹಾಗೆಯೇ ಹೇಳುತ್ತಾರೆ. ಕಂಟ್ರೋಲಿದ್ದರೆ, ನಾಲ್ಕಾರು ಜನರಿಗೆ ಸರ್ಕಾರವನ್ನು ಟೀಕೆಮಾಡುವುದಕ್ಕೆ ಅನುಕೂಲವಾಗುತ್ತದೆ. ಟೀಕೆ ಮಾಡುವ ಉದ್ದೇಶವನ್ನು ಬಿಟ್ಟು ನಮ್ಮ ನಿಜವಾದ ಅಭಿಪ್ರಾಯವನ್ನು, ದೇಶದ ಹಿತದೃಷ್ಟಿಯಿಂದ, ಸಭೆಯ ಮುಂದಿಡಬೇಕೇ ಏನಾ ಬೇರೆಮಾರ್ಗವನ್ನನುಸರಿಸಬಾರದು. ಈ ದೃಷ್ಟಿಯಿಂದ ಹೇಳುವುದಾದರೆ, ನನ್ನ ಅಭಿಪ್ರಾಯದಲ್ಲಿ ಈ ಕಂಟ್ರೋಲನ್ನು ಖಂಡಿತ ತೆಗೆಯಬೇಕು. ಶ್ರೀ ಪಟ್ಟಾಭಿರಾಮಾರವರು ಓಪನ್ ಮಾರ್ಕೆಟ್ಟನಲ್ಲಿ ಸರ್ಕಾರದವರು ಕೊಂಡುಕೊಳ್ಳಬೇಕೆಂದು ಹೇಳಿದರು. ಹೇಗೆ ಕೊಳ್ಳಬೇಕೆಂಬುದು ಗೊತ್ತಿದೆ, ಅವರೇ ಹೇಳಿದ್ದಾರೆ. ನಮ್ಮ ದೇಶದಲ್ಲಿ ಉತ್ಪತ್ತಿ ಸರಿಯಾಗಿದೆಯೆ ಎಂಬುದು ಒಂದು ಪ್ರಶ್ನೆ. ನರಸಿಂಹರಾಜಪುರ ಒಂದು ಸಣ್ಣ ತಾಲ್ಲೂಕು, ಆದರೂ 50 ಸಾವಿರ ಪಲ್ಲ ಬತ್ತ ಕೊಡುತ್ತಿದೆ. ಅಂಥ ತಾಲ್ಲೂಕಿನಲ್ಲಿ ಸರ್ಕಾರದವರು ಕೆರೆ ಕಟ್ಟಿಲ್ಲ, ಹಣ ಖರ್ಚುಮಾಡಿಲ್ಲ. ನಾನು ಮಲೆನಾಡಿನ ಮಾತನ್ನಾಡಿದರೆ, ಮಲೆನಾಡನ್ನು ಪಾಕಿಸ್ತಾನಮಾಡುತ್ತಾರೆಂದು ಟೀಕೆಮಾಡುತ್ತಾರೆ. ಇದರಿಂದ ನನಗೆ ಸಂಕೋಚವಾಗುತ್ತದೆ ಈ ಮಾತನಾಡುವುದಕ್ಕೆ. ಧರ್ಮದೃಷ್ಟಿಯಿಂದ, ನ್ಯಾಯದೃಷ್ಟಿಯಿಂದ ಅವರೇ ವಿಮರ್ಶೆಮಾಡಲಿ. ಸಹಕಾರ ವ್ಯವಸಾಯ ಎಂದು ಯಾವಾಗಲೂ ಹೇಳುತ್ತಾರೆ. ಅನೇಕ ಬೇರೆ ಜಿಲ್ಲೆಗಳಲ್ಲಿ ಈ ಏರ್ಪಾಡು ಮಾಡಿದ್ದಾರೆ. ಮಲೆನಾಡಿನ ಜನ ಬಹಳ ಸಾತ್ವಿಕರು, ಒಳ್ಳೆಯ ಸ್ವಭಾವದವರು. ಹೀಗಿದ್ದೂ ಅಲ್ಲಿ ಸಹಕಾರ ಪದ್ಧತಿಯಮೇರೆ ವ್ಯವಸಾಯಮಾಡುವ ಏರ್ಪಾಡನ್ನು ಜಾರಿಗೆ ತಂದಿದ್ದಾರೆಯೆ? ಮಲೆನಾಡಿನಲ್ಲಿ ಬೇಕಾದಷ್ಟು ಫಲವತ್ತಾದ ಭೂಮಿ ಇದೆ. ಆದರೂ ಸರ್ಕಾರದ ದೃಷ್ಟಿ ಆ ಕಡೆ ಬೀಳಲಿಲ್ಲ. ಈ ಏರ್ಪಾಡುಮಾಡಿದರೆ ಅಲ್ಲಿ ಬೇಕಾದಷ್ಟು ದವಸ ಬೆಳೆಯಬಹುದು. ಇದನ್ನು ನನ್ನ ಹಿತದೃಷ್ಟಿಯಿಂದ ಹೇಳುತ್ತಿಲ್ಲ; ಸರ್ಕಾರದ, ದೇಶದ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಇಂಥದನ್ನು ಅಲ್ಲ ಏಕೆ ಮಾಡಬಾರದು? ಅಲ್ಲಿ ನೀರಾವರಿ ಕೆಲಸಗಳನ್ನು ಏಕೆ ಮಾಡಬಾರದು? ಇದ್ದದ್ದನ್ನು ಜನರಿಗೆ ಹಂಚುವ ಮಾರ್ಗ ಮಾತ್ರ ಏಕೆ; ಸರಿಯಾದ ಅನುಕೂಲಗಳನ್ನು ಕೊಟ್ಟರೆ ಮಲೆನಾಡಿನಲ್ಲಿ ಎಷ್ಟು ಬೇಕೋ ಅಷ್ಟನ್ನು ಬೆಳೆಯುತ್ತಾರೆ. ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಹಾಗಿಲ್ಲದೆ ಸುಮ್ಮನೆ ಇರುವ ದವನವನ್ನು, ದೇಶದ ಜನರಿಗೆಲ್ಲಾ ಹಂಚಬೇಕೆಂದರೆ ಅದು ಬಹಳ ಕಷ್ಟ. ನಮ್ಮ ಮಲೆನಾಡು ಕಬ್ಬು ಕಾಫಿ ಬೆಳೆಯುವ ಪ್ರದೇಶ. ಅಲ್ಲಿ ಐವತ್ತು ಅರವತ್ತು ಸಾವಿರ ಕೂಲಿಯವರಿದ್ದಾರೆ, ಕಾಫಿ ತೋಟಗಳಲ್ಲಿ ಕೆಲಸಮಾಡುವವರು. ಅವರು ಮಂಗಳೂರು ದಕ್ಷಿಣಕನ್ನಡ ಜಿಲ್ಲೆಯಿಂದ ಅಲ್ಲಿಗೆ ಕೆಲಸಮಾಡಲು ಬರುತ್ತಾರೆ. ನೀವು ಮಲೆನಾಡಿನಿಂದ ಆಹಾರ ಧಾನ್ಯವನ್ನು ಬೇರೆ ಕಡೆಗೆ ಸಾಗಿಸಿದರೆ, ಅವರು ಹೊಟ್ಟೆಗೆ ಏನುಮಾಡಬೇಕು? ಪೊದಲು ಆಳು ಕಾಳುಗಳನ್ನೂ ರೆಕ್ಕಪಾಕಿಕೊಂಡು ಅವರಿಗೆ ಬೇಕಾದಷ್ಟು ಬಟ್ಟು ಉಳಿದುದನ್ನು ಸರ್ಕಾರದವರು ತರುತ್ತಿದ್ದರು. ಈ ಹೊಸ ಲೆವಿ ಪದ್ಧತಿಯನ್ನು ಜಾರಿಗೆ ತಂದರೆ, ಅವರು ಮುಂದೆ ಸರ್ಕಾರದವರನ್ನೇ ಆಹಾರ ಕೇಳಬೇಕಾಗುತ್ತದೆ. ಆದುದರಿಂದ ಈ ಕಷ್ಟಗಳೆಲ್ಲಾ ಸರ್ಕಾರಕ್ಕೆ ಬೇಡ. ಖಂಡಿತವಾಗಿ ಕಂಟ್ರೋಲ್ ತೆಗೆದುಹಾಕಿ. ಕೇಂದ್ರ ಸರ್ಕಾರದ ಮಂತ್ರಿಗಳಾದ ಖಿದ್ವಾಯಿಯವರು ಹೇಳಿರುವುದು ಬಹಳ ಒಳ್ಳೆಯದು. ನಮ್ಮ ಆಹಾರ ಸಚಿವರು ಅವರನ್ನು ನೋಡಲು ಅಲ್ಲಿಗೆ ಹೋದರೆ, ಈ ಸಲಹೆಯನ್ನು ಕೊಡಬೇಕು. ನಮ್ಮ ಖಚಿತವಾದ ಅಭಿಪ್ರಾಯವನ್ನು ತಿಳಿಸಲು ಏನೂ ಹೆದರ ಭಾರದೆಂದು ಹೇಳಿ, ನನ್ನ ಸಲಯೆಯನ್ನು ಸರ್ಕಾರದ ಮುಂದಿಟ್ಟಿದ್ದೇನೆ.

Mr. SPEAKER—Sri Hutche Gowda, would you like to speak now or after lunch?

Sri B. HUTCHE GOWDA.—Now and I shall continue after lunch.

Mr. SPEAKER—Sri G. Sivappa.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ)—ಸ್ವಾಮಿ, ಆಹಾರ ಪ್ರಶ್ನೆ ಅತಿ ಮುಖ್ಯವಾದುದು. ಈ ವಿಚಾರದಲ್ಲಿ ಮಾನ್ಯ ಸದಸ್ಯರನೇಕರು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ. ನಾನು ಎರಡು ಮೂರು ಅಂಶಗಳನ್ನು ಸರ್ಕಾರಕ್ಕೆ ತಿಳಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ಪೊದಲನೆಯದಾಗಿ, ಈ ಸಮಸ್ಯೆ ಬಹಳ ದಿವಸಗಳಿಂದ ನಮ್ಮ ದೇಶದಲ್ಲಿದೆ. ಹೊದ ಅಧಿವೇಶನದಲ್ಲಿ ಸೇರಿದಾಗ ಈ ಸಮಸ್ಯೆ ಇಲ್ಲದಂತೆ ಮಾಡತಕ್ಕ ಪರಿಸ್ಥಿತಿ ಬರುತ್ತದೆಯೋ ಏನೋ ಎಂದು ಭಾವಿಸಿದ್ದೆವು. ಆದರೆ ಅನಿರೀಕ್ಷಿತ ಕಾರಣದಿಂದರೋ ಏನೋ ಕೇಂದ್ರ ಸರ್ಕಾರದವರು ಕಂಟ್ರೋಲನ್ನು ಇಟ್ಟುಕೊಂಡಿದ್ದರಿಂದ ಈ

(ಶ್ರೀ ಜಿ. ಶಿವಪ್ಪ.)

ಸಮಸ್ಯೆ ಸಮಸ್ಯೆಯಾಗಿಯೇ ಉಳಿಯುತ್ತದೆಯೆಂಬ ಹೆದರಿಕೆಯಿತ್ತು. ಆದರೆ ನಿನ್ನೆಯ ದಿವಸ ಪತ್ರಿಕೆಗಳಲ್ಲ ಪ್ರಕಟವಾಗಿರುವ ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳು ಹೇಳಿರುವ ಮಾತನ್ನು ನೋಡಿದರೆ ಒಂದು ಆಶಾದಾಯಕ ಪರಿಸ್ಥಿತಿ ಉಂಟಾಗಬಹುದೆನ್ನಿಸುತ್ತದೆ. ಈ ಸಮಸ್ಯೆಯನ್ನು ಏನಾದರೂ ಪ್ರಯತ್ನಮಾಡಿ ಧೈರ್ಯದಿಂದ, ಕೆಚ್ಚೆದೆಯಿಂದ ಇಲ್ಲದಂತೆ ಮಾಡಬೇಕೆಂಬುದು ನನ್ನ ಆಶೆ. ಇಂದಿನ ಪರಿಸ್ಥಿತಿಯಲ್ಲಿ ಇಡೀ ಹಿಂದೂ ಸ್ಥಾನವೇ ಒಂದು ಯೂನಿಟ್ಟಾಗಿದೆ. ಉತ್ತರ ಇಂಡಿಯಾದಲ್ಲ ಬೆಳೆ ಚೆನ್ನಾಗಿದೆ. ಆದಕಾರಣ ಪರಿಸ್ಥಿತಿ ಎಲ್ಲಕಡೆಯೂ ಸರಿಹೋಗಬಹುದೆಂಬ ಆಶೆಯನ್ನಿಡಬಹುದಾಗಿದೆ. ಅಲ್ಲದೆ ಈಗ ಇಲ್ಲಿ ಯಥೇಚ್ಛವಾಗಿ ಮಳೆಯಾಗಿ ಮುಂದೆ ಬೆಳೆ ಸರಿಯಾಗುವ ನಿರೀಕ್ಷಣೆಯಿರುವುದರಿಂದಲೂ ಈ ಸಮಸ್ಯೆ ಉಳಿಯದಂತೆ ಮಾಡಲು ಸರ್ಕಾರದವರು ಕೆಚ್ಚೆದೆಯಿಂದ ನಿಯಂತ್ರಣವನ್ನು ತೆಗೆದರೆ ಅನುಕೂಲವಾಗುತ್ತದೆ. ಇದಕ್ಕೆ ಪ್ರಯತ್ನಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಹೀಗೆಮಾಡಿದರೆ ಏನಾಗುತ್ತದೆಯೋ ಏನೋ ಎಂಬ ಶಂಕೆಯನ್ನಿಟ್ಟುಕೊಳ್ಳಬಾರದು. ಕೇಂದ್ರಮಂತ್ರಿ ಶ್ರೀ ವಿದ್ಯಾಭಯಿಯವರು ಹೇಳಿದಹಾಗೆ, ಜೋನ್‌ಗಳನ್ನುಮಾಡಿ ಇಡೀ ಹಿಂದೂಸ್ಥಾನದಲ್ಲ ಆಹಾರವನ್ನು ಒಂದುಕಡೆಯಿಂದ ಇನ್ನೊಂದುಕಡೆ ಸಾಗಿಸಲು ಅವಕಾಶ ಕೊಟ್ಟರೆ ಏನೂ ತೊಂದರೆಯಾಗಲಾರದೆಂದು ಭಾವಿಸುತ್ತೇನೆ. ಅವರ ಭಾಷಣದಲ್ಲ ಇನ್ನೊಂದು ವಿಚಾರವನ್ನು ಹೇಳಿದ್ದಾರೆ, ಅದನ್ನು ಗಮನಿಸಬೇಕು. ಆ ರೀತಿ ಇಂಡಸ್ಟ್ರಿಯರ್ ಸಿಟಿಗಳಿಗೆ ಕೇಂದ್ರ ಸರ್ಕಾರದವರೇ ಆಹಾರ ಒದಗಿಸಲು ಒಪ್ಪಿದರೆ ಬಂಡಿತವಾಗಿ ಇದೊಂದು ದೊಡ್ಡ ಸಮಸ್ಯೆಯೆಂದು ಯೋಚನೆ ಮಾಡುವುದಕ್ಕೆ ಅವಕಾಶವಿಲ್ಲ. ಉತ್ತರ ಇಂಡಿಯಾದಲ್ಲರುವ ದೊಡ್ಡ ದೊಡ್ಡ ನಗರಗಳಾದ ಬೊಂಬಾಯಿ, ಕಲ್ಕತ್ತ, ದೆಹಲಿ, ಇವುಗಳಿಗೆ ಆಹಾರ ಒದಗಿಸುವ ಜವಾಬ್ದಾರಿಯನ್ನಿಟ್ಟುಕೊಂಡು ಈ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಮಾಡುವುದಾಗಿ ತಿಳಿಸಿದ್ದಾರೆ. ಅದೇ ರೀತಿ, ಮೈಸೂರು ಸಂಸ್ಥಾನದ ಆಹಾರ ಸಚಿವರು ಅವರನ್ನು ನೋಡಲು ಬೊಂಬಾಯಿಗೆ ಹೋದಕಾಲದಲ್ಲ ಬೆಂಗಳೂರು, ಕೋಲಾರ ಚಿನ್ನದಗಣಿ ಇವುಗಳಿಗೆ ಆಹಾರವನ್ನೊದಗಿಸುವಂತೆ ಸೂಚಿಸಿ, ಅವರು ಒಪ್ಪಿಕೊಂಡರೆ ಇದೊಂದು ದೊಡ್ಡ ಸಮಸ್ಯೆಯಾಗಲಾರದೆಂದು ನನ್ನ ಭಾವನೆ. ಅನೇಕ ಮಿತ್ರರು, ಹಳ್ಳಿಗಳ ಪರಿಸ್ಥಿತಿ ಏನು, ಅವುಗಳ ಗತಿ ಏನು, ಅಲ್ಲಿನ ಕಷ್ಟವನ್ನು ಹೇಗೆ ನಿವಾರಣೆಮಾಡುತ್ತಾರೆಂದು ಕೇಳಿದರು. ಅದಕ್ಕೆ ನಾನು ಹೇಳುವುದಿಷ್ಟೆ; ಕಳೆದ ಆರೇಳು ವರ್ಷಗಳಿಂದಲೂ ಯಾವ ಸರ್ಕಾರವೂ ಹಳ್ಳಿಗಳ ಪರಿಸ್ಥಿತಿಯನ್ನು ನಿಜವಾಗಿಯೂ ಪರಿಶೀಲಿಸಿಲ್ಲ. ಈ ಕಂಟ್ರೋಲಿನಿಂದ ಹಳ್ಳಿಗಳಿಗೆ ಯಾವಾಗಲೂ ಹೆಚ್ಚಿನ ಪ್ರಯೋಜನವಾಗಿಲ್ಲ. ಒಟ್ಟಿನಲ್ಲ ಬೆಂಗಳೂರು, ಕೆ. ಜಿ. ಎಫ್. ಇವೆರಡು ನಗರಗಳಿಗೆ ಆಹಾರ ಕೊಡಲು ಕೇಂದ್ರ ಸರ್ಕಾರದವರೊಪ್ಪಿಕೊಂಡರೆ, ನಮ್ಮ ಸರ್ಕಾರ ಈಗ ಮಾಡುವಂತೆ ಒಂದೂವರೆ ಕೋಟಿ ರೂಪಾಯಿ ಖರ್ಚು ಮಾಡುವ ಅವಶ್ಯಕತೆಯಿರುವುದಿಲ್ಲ. ಆದುದರಿಂದ ಧೈರ್ಯಮಾಡಿ ಯಾವ ಯಾವ ರೀತಿ ಇದಕ್ಕೆ ಅವಶ್ಯಕವಾದ ಪರಿಹಾರ ಮಾರ್ಗಗಳನ್ನು ಹುಡುಕಬೇಕೋ ಅದನ್ನು ಹುಡುಕಬೇಕು. ಈ ಜವಾಬ್ದಾರಿ ಸರ್ಕಾರದ್ದು. ನಾನು ಇಷ್ಟು ಸಲಹೆ ಕೊಟ್ಟಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

Mr. SPEAKER.—The House will now adjourn for lunch and meet again at 3-30 P.M.

The Assembly adjourned for Lunch at Fifty-eight Minutes past Two of the Clock and re-assembled at Thirty Minutes past Three of the Clock.

[MR. SPEAKER in the Chair.]

ಶ್ರೀ ಬಿ. ಮಾಧವಾಚಾರ್ (ಧಾರವಾಡ).—ಸ್ವಾಮಿ, ಸಂಸ್ಥಾನದಲ್ಲರತಕ್ಕ ಆಹಾರ ನಿಯಂತ್ರಣದ ನೀತಿಗೆ ಸಂಬಂಧಪಟ್ಟ ಸಮಸ್ಯೆಯನ್ನು ಕುರಿತು ಸದಸ್ಯರಾದ ನಾವೆಲ್ಲರೂ ಆ ಬಗ್ಗೆ ನಮ್ಮ ಸಲಹೆಗಳನ್ನು ನೀಡಬೇಕೆಂದು ತಾವು ಕೋರಿದ್ದೀರಿ. ಸರ್ಕಾರದವರು ಹೋದ ಅಧಿವೇಶನದಲ್ಲೇ ಈ ಕಂಟ್ರೋಲುಗಳನ್ನು ದಿನಕ್ರಮೇಣದಲ್ಲ ತೆಗೆದುಹಾಕುತ್ತೇವೆಂದು ಹೇಳಿದ್ದುದು ನಿಜ. ಆದರೆ ಹಾಗೆ ಇದನ್ನು ತೆಗೆದುಹಾಕಲು ಈಗ ಸಕಾಲವಾಗಿಲ್ಲ. ಆದಕಾರಣ ದೇಶದಲ್ಲರತಕ್ಕವರೆಲ್ಲರಿಗೂ ಒಂದು ಸಮರ್ಪಕವಾಗಿರುವಂಥ ಒಂದು ಪಾಲಸಿಯನ್ನು ಅನುಸರಿಸತಕ್ಕ ಬಗ್ಗೆ ಮತ್ತು ಇಂದು ಉದ್ಭವಿಸಿರುವ ಆಹಾರ ಸಮಸ್ಯೆಯನ್ನು ಎದುರಿಸತಕ್ಕ ಬಗ್ಗೆ ನಾವು ಸರ್ಕಾರಕ್ಕೆ ಈಗ ಸೂಕ್ತ ಸಲಹೆಗಳನ್ನು ಕೊಡಬೇಕಾಗಿದೆ. ಈ ದಿವಸ ದೇಶದಲ್ಲ ನಾನಾ ಪ್ರದೇಶವನ್ನು ಬಿಟ್ಟರೆ ಬೇರೆ ಎಲ್ಲಯೂ ಬೆಳೆ ಸರಿಯಾಗಿ ಆಗಿಲ್ಲ. ಇಂಥ ಸಂದರ್ಭದಲ್ಲ ಸರ್ಕಾರದವರು ತಾವು ಹೇಳಿದ್ದಂಥ ಡೀ ಕಂಟ್ರೋಲ್ ವಿಚಾರವನ್ನು ಇನ್ನೂ ಕೆಲವು ಕಾಲ ಮುಂದಕ್ಕೆ ವರಿಸಿಕೊಂಡುಹೋಗುವುದು ಸೂಕ್ತವಾದದ್ದಾಗಿದೆ. ಈ ದಿವಸ ಮಳೆ ಬೆಳೆಗಳ ಸ್ಥಿತಿ ಹೇಗಾಗಿರುತ್ತದೆ ಎಂಬುದನ್ನು ನೋಡಿದರೆ ಈ ಕಂಟ್ರೋಲನ್ನು ಉಳಿಸಿಕೊಂಡು ಬರತಕ್ಕಂಥ ನೀತಿಗೆ ಸ್ವಾಗತ ನೀಡತಕ್ಕದ್ದಾಗಿದೆಯೆಂದು ಎದ್ದು ತೋರುತ್ತದೆ. ಆದರೆ ಇತ್ತೀಚೆಗೆ ಈ ಕಂಟ್ರೋಲ್ ಆಜ್ಞೆಗಳಲ್ಲ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಇದು ಬಹಳ ಶ್ಲಾಘನೀಯವಾದ ವಿಚಾರ. ಈ ದಿವಸ ಯಾವ ಮೂರು ಪಟ್ಟಣಗಳಲ್ಲ ಈ ಕಂಟ್ರೋಲೆಂಬುದನ್ನು ಇಟ್ಟುಕೊಂಡಿದ್ದಾರೋ, ಆ ಮೂರು ಪಟ್ಟಣಗಳವರ ದೃಷ್ಟಿಯಿಂದಲಾದರೂ ಸರ್ಕಾರದವರು ಧಾನ್ಯಶೇಖರಣೆಯನ್ನಂತೂ ಮಾಡಿಯೇ ತೀರಬೇಕಾಗಿದೆ. ಇದು ಅತ್ಯಗತ್ಯವಾದ ವಿಷಯ. ಒಂದು ಹೊಸ ಮಾದರಿಯ ರೀತಿಯಿಲ್ಲ, ಹಳೆಯನೀತಿಯನ್ನೆಲ್ಲಾ ತೊಲಗಿಸಿ ದೇಶದಲ್ಲರತಕ್ಕ ಸಮಸ್ತ ಜನರಿಗೂ, ಎಂದರೆ ಧಾನ್ಯವನ್ನು ಬೆಳೆದುಕೊಡತಕ್ಕವರಿಗೂ ಮತ್ತು ಅದನ್ನು ಕೊಂಡು ತಿನ್ನತಕ್ಕವರಿಗೂ, ಅನುಕೂಲವಾಗಿರುವಂಥ ಪಾಲಸಿಯನ್ನು ಈ ಧಾನ್ಯ ವಸೂಲಯ ಬಗ್ಗೆ ಅನುಸರಿಸತಕ್ಕ ಬಗ್ಗೆ ನಾವು ನಮ್ಮ ಸಲಹೆಗಳನ್ನು ಎಲ್ಲರೂ ಏಕಕಂಠದಿಂದ ಸ್ವಾಗತಮಾಡುವಂಥ ರೀತಿಯನ್ನು ಸರ್ಕಾರಕ್ಕೆ ಕೊಡಬೇಕಾಗಿದೆ. ಈಗ ಕಂಟ್ರೋಲ್ ಜಾರಿಯಲ್ಲರತಕ್ಕ ಪ್ರದೇಶದಲ್ಲರತಕ್ಕ ಜನಗಳಿಗೆ ಆಹಾರ ನರಬರಾಯಿ ಮಾಡತಕ್ಕ ಬಗ್ಗೆ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುತ್ತಿರುವಂಥ ಸರ್ಪ್ಲಸ್ ಹೋಲ್ಡರುಗಳು ಎಂದರೆ ಅನ್ನದಾತರು ಎಲ್ಲೆಲ್ಲರುತ್ತಾರೋ ಅವರೆಲ್ಲರಿಂದಲೂ ಕೇವಲ 2, 3, 4, 5 ಎಕರೆ ಜಮೀನನ್ನಿಟ್ಟುಕೊಂಡು ಕೇವಲ ತಮ್ಮ ಹೊಟ್ಟೆಪಾಡಿಗಾಗಿ ಜೀವನ

ನಡೆಸಿಕೊಂಡು ಹೋಗಲು ವ್ಯವಸಾಯ ನಡೆಸುತ್ತಿರುವಂಥ ಜನರುಗಳನ್ನೆಲ್ಲಾ ಕೈಬಿಟ್ಟುಕೊಂಡು, ಅವರಿಂದ ಯಾವ ವಿಧವಾಗಿಯೂ ದವಸವನ್ನು ವಸೂಲುಮಾಡದೆ, ಧಾನ್ಯ ವಸೂಲುಮಾಡಲು ಒಂದು ಹೊಸ ಸಂಗ್ರಹಣ ಮಾರ್ಗವನ್ನು ನಾವೀಗ ಕಂಡುಹಿಡಿಯಬೇಕಾಗಿದೆ. ಈ ದಿವಸ ನಮ್ಮ ಮುಂದಿರತಕ್ಕ ವಿಚಾರವೂ ಸಹ ಅದೇ ಆಗಿದೆ. ಈ ವರ್ಷ ಆಗಿರತಕ್ಕ ಬೆಳೆಯಾದರೋ ಅದು ತೀರ ಕಡಮೆ ಬೆಳೆ. ನಮ್ಮ ದೇಶದ ಬೆಳೆಯನ್ನು ಪರ ಪ್ರಾಂತಗಳ ಬೆಳೆಯೊಂದಿಗೆ ಹೋಲಿಸಿ ನೋಡಿದರೆ ಇಲ್ಲಿ ಆಗಿರತಕ್ಕ ಬೆಳೆ ಬಹಳ ಕಡಮೆ. ಇದನ್ನು ನಿಜವೆಂದು ಸಮರ್ಥಿಸಬೇಕಾದ ಅಗತ್ಯವೇನೂ ಇಲ್ಲ. ಇಂದು ದೇಶದಲ್ಲಿ ಉಂಟಾಗಿರತಕ್ಕ ಆಹಾರದ ಕೊರತೆಯನ್ನು ನಿರೀಕ್ಷಿಸಿಕೊಳ್ಳಬೇಕಾಗಿದ್ದರೆ ನಾವು ಈ ದಿವಸ ಏನಾ ಒಂದು ಬೆಳೆಯನ್ನು ಧಾನ್ಯಗಳಿಗೆ ನಿಗದಿಮಾಡಿದ್ದೇವೋ ಅದನ್ನು ಕನಿಷ್ಠಪಕ್ಷ 5 ರೂಪಾಯಿಗಳಿಗಾದರೂ ಹೆಚ್ಚಿಸದೆಹೋದರೆ ಗತ್ಯಂತರವಿಲ್ಲ. ಹೀಗೆ ಮಾಡಿದ್ದೇ ಆದರೆ ನಮಗೆ ಬಹುಬೇಗ ಈ ತೊಂದರೆ ನಿವಾರಣೆಯಾಗುತ್ತದೆಂದು ಹೇಳಿದರೆ ಯಾರೂ ಇದನ್ನು ವಿರೋಧಿಸಲಾರರು. ಇದರಿಂದ ಸರ್ಕಾರಕ್ಕೆ ಬೇಕಾಗಿರುವ ಧಾನ್ಯ ಸಂಗ್ರಹಣೆಯು ಸುಲಭವಾಗಿ ಆಗುತ್ತದೆ. ಆದರೆ ತಾವು ಕೊಳ್ಳುವ ಬೆಲೆಯನ್ನು ಹೆಚ್ಚಿಸಿದಂತೆಲ್ಲಾ ಮಾರುವ ಬೆಲೆಯನ್ನೂ ಹೆಚ್ಚಿಸಿದ್ದೇ ಆದರೆ ಕಾರ್ಮಿಕ ವರ್ಗದವರಲ್ಲಿ ಮತ್ತು ಕೊಂಡು ತಿನ್ನತಕ್ಕಂಥ ಇತರ ವರ್ಗದವರಲ್ಲಿ ಇದು ಬಹಳ ಅಸಮಾಧಾನಕ್ಕೆ ಕಾರಣವನ್ನುಂಟು ಮಾಡುತ್ತದೆ. ಈ ಅಂಶವನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ನಾನು ಕಾರ್ಮಿಕರ ಕ್ಷೇತ್ರದಿಂದ ಚುನಾಯಿಸಲ್ಪಟ್ಟು ಬಂದಿರತಕ್ಕ ಅವರ ಪ್ರತಿನಿಧಿಯಾಗಿದ್ದೇನೆ. ಹಾಗೇನಾದರೂ ತಾವು ಮಾರುವ ಬೆಲೆಯನ್ನು ಏರಿಸಿದ್ದೇ ಆದರೆ ಮುಂದೆ ಅದರಿಂದ ದೊಡ್ಡ ಗಂಡಾಂತರಗಳು ಉದ್ಭವವಾಗಿಯೇ ಆಗುತ್ತವೆ. ತಾವು ಕೊಳ್ಳುವ ಬೆಲೆಯನ್ನು ಅಗತ್ಯವಾಗಿ ಹೆಚ್ಚಿಸಲೇಬೇಕಾಗಿದೆ. ಆದಾಗ್ಯೂ ಮಾರುವ ಬೆಲೆಯನ್ನು ಮಾತ್ರ ಕಡ್ಡಾಯವಾಗಿ ತಾವು ಏರಿಸಬಾರದು. ಆದರೆ ದೇಶದಲ್ಲಿ ಇಂದು ಪ್ರತಿಯೊಂದು ವಸ್ತುವಿನ ಬೆಲೆಯೂ ದಿನೇ ದಿನೇ ಏರುತ್ತಿದೆ. ಕೂಲಿಗಾರರ ಜೀವನದ ಮಟ್ಟ ಬಹಳ ಚಿಂತಾಜನಕಸ್ಥಿತಿಗೆ ಬಂದಿದೆ. ಹೀಗೆ ಇತರ ಸಾಮಾನುಗಳ ಬೆಲೆಯು ಹದ್ದುಮೀರಿ ಹೋಗುತ್ತಿರುವುದನ್ನು ತಡೆಗಟ್ಟತಕ್ಕ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳವರು ಕೇಂದ್ರ ಸರ್ಕಾರದೊಡನೆ ತೀವ್ರವಾಗಿ ಆಲೋಚನೆ ನಡೆಸುತ್ತಿದ್ದಾರೆ. ದೇವರು ಆ ಕಾರ್ಯದಲ್ಲಿ ಅವರಿಗೆ ಸಂಪೂರ್ಣ ಯಶಸ್ಸನ್ನು ಕೊಡಲೆಂದು ಹಾರೈಸುತ್ತೇನೆ.

ನಾರಾ ಪ್ರದೇಶದಲ್ಲಿ ಹೆಚ್ಚು ಬೆಳೆ ತೆಗೆಯಲು ಅವಕಾಶವಿದ್ದಂತೆ ಬೇರೆಕಡೆ ಅನುಕೂಲವಿರುವುದಿಲ್ಲ. ಭಧ್ರಾವತಿ ತಾಲ್ಲೂಕಿನ ನಾರಾ ಪ್ರದೇಶದಲ್ಲಿ 5 ಸಾವಿರ ಎಕರೆಗಳನ್ನು ಸಾಗುವಳಿಗೆ ತರುವಂಥ ಅವಕಾಶವಿದೆ. ಅದಕ್ಕೆ ಸಾಕಷ್ಟು ನೀರಿನ ಸೌಕರ್ಯವೂ ಇದೆ. ಆದರೆ ರೈತರಿಗೆ ಈ ವಿಚಾರವಾಗಿ ಸಾಕಷ್ಟು ಪ್ರಚಾರ ನಡೆಸಿಲ್ಲ. ತಾನೊಬ್ಬ ಬೆಳೆದುಕೊಂಡು ತನಗೆ ಎಷ್ಟು ಬೇಕೋ ಅಷ್ಟಕ್ಕೆ ಸರಿಯಾಗಿ ಕಷ್ಟಪಟ್ಟು, ತಾನು ಸುಖವಾಗಿದ್ದರಾಯಿತು, ಇತರರ ಪಾಡು ಹೇಗಾದರೂ ಇರಲಿ ಎನ್ನುವ ಮನೋಭಾವ ಜನರಿಗೆ ಉಂಟಾಗಿ ಈ ದಿವಸ ತಾವು ಸರಿಯಾಗಿ ಕಷ್ಟಪಟ್ಟು ಹೆಚ್ಚಿಗೆ ಬೆಳೆಯಬೇಕೆಂಬ ಭಾವನೆ ಅವರಿಗೆ ಇನ್ನೂ ಬಂದಿಲ್ಲ. ಇಂಥಾ ಭಾವನೆಯನ್ನು ದೂರಮಾಡಲು ಸ್ಥಳೀಯ ಅಧಿಕಾರಿಗಳು ಸಾಕಷ್ಟು ಪ್ರಚಾರಕಾರ್ಯ ಮಾಡಬೇಕಾಗಿದೆ. ನಾರಾ ಪ್ರದೇಶದಲ್ಲಿರತಕ್ಕ ಜನರಿಗೆ—ಗೊಬ್ಬರ, ಬೀಜ ಇತ್ಯಾದಿ ಸಹಾಯಗಳನ್ನು ನೀಡುವುದರ ಮೂಲಕವೂ ಮತ್ತು ದ್ರವ್ಯ ಸಹಾಯ ನೀಡುವುದರ ಮೂಲಕವೂ ರೈತನಿಗೆ ತಾವು ಪ್ರೋತ್ಸಾಹ ನೀಡಿದರೆ ಆತನು ಕಷ್ಟಪಟ್ಟು ಆಹಾರಧಾನ್ಯವನ್ನು ಖಂಡಿತ ಬೆಳೆಯುತ್ತಾನೆ. ಇದರಿಂದ ಆತನಿಗೂ ಅನುಕೂಲ, ಈ ತೊಂದರೆಯನ್ನೂ ನೀಗುವುದಕ್ಕೆ ಒಂದು ಮಾರ್ಗ. ಹೀಗೆ ಇದು ಉಭಯತ್ರರಿಗೂ ಸಹಕಾರಿಯಾದ ಮಾರ್ಗವಾಗಿರುತ್ತದೆ. ಇದರ ಜೊತೆಗೆ ನಾರೆ ಪ್ರದೇಶಗಳಲ್ಲ ವ್ಯವಸಾಯವನ್ನು ಕಡ್ಡಾಯದಿಂದಲಾದರೂ ತಾವು ಮಾಡಿಸಲೇಬೇಕು. ಇದಕ್ಕಾಗಿಯೇ ಒಂದು ಕಾನೂನನ್ನಾದರೂ ತಾವು ಮಾಡಿದರೆ ಬಹಳ ಚೆನ್ನಾಗಿರುತ್ತದೆ. ಹೀಗೆ ಕಾನೂನು ಮೂಲಕ ಎಲ್ಲರಿಗೂ ತಾವು ನಿರ್ಬಂಧಾಕದೆಹೋದಲ್ಲಿ ಖಂಡಿತ ನಮಗೆ ಹೆಚ್ಚು ಆಹಾರ ಧಾನ್ಯಗಳ ಉತ್ಪತ್ತಿ ಆಗುವುದಿಲ್ಲ. ರೈತನಲ್ಲಿ ಹೆಚ್ಚು ಹೆಚ್ಚು ಆಸಕ್ತಿ ಹುಟ್ಟಬೇಕು. ಹೀಗೆ ಮಾಡಿ ನಾರಾ ಬೈಲುಗಳಲ್ಲಿ ವರ್ಷಕ್ಕೆ ಕಡ್ಡಾಯವಾಗಿ ಎರಡು ಬೆಳೆಗಳನ್ನು ತೆಗೆಯುವಂತೆ ಮಾಡಲೇಬೇಕು. ಈ ಕೆಲಸವನ್ನು ತಾವು ಶಾಸನದ ಒತ್ತಾಯದ ಮೂಲಕ ಮಾಡಿದರೆ ಇದು ಫಲಕಾರಿಯಾಗುವುದು. ಹೀಗೆ ಮಾಡತಕ್ಕದ್ದು ಬಹಳ ಶ್ಲಾಘನೀಯವಾದುದ್ದಾಗಿರುತ್ತೆಂಬ ಅಭಿಪ್ರಾಯ ಅಲ್ಲಿನ ಜನರಿಗೆ ಇರುತ್ತದೆ. ನಾನು ನಾರಾ ಬೈಲನಲ್ಲರತಕ್ಕ ಜನರ ಅಭಿಪ್ರಾಯವನ್ನು ತಿಳಿದುಕೊಂಡಿರತಕ್ಕವನಾಗಿದ್ದೇನೆ. ಈಗ ಧಾನ್ಯ ಸಂಗ್ರಹಣೆಮಾಡತಕ್ಕ ವಿಧಾನವೆಂತಿರಬೇಕೆಂಬ ಬಗ್ಗೆ ಸರ್ಕಾರದವರು ಸೂಚಿಸಿರುವ 'ಲೆವಿ' ಸಿಸ್ಟಂ ಇದೇ ಬಹಳ ಉತ್ತಮವಾದುದ್ದಾಗಿದೆಯೆಂದು ಅನೇಕರು ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈ ವಿಧಾನದಲ್ಲಿ ಅವರೆಲ್ಲ ಶೇಕಡ 75ರಷ್ಟನ್ನು ವಸೂಲುಮಾಡಬೇಕೆಂದು ಹೇಳಿದ್ದಾರೆ. ಆದರೆ ಆ ಮಟ್ಟದವರೆಗೂ ತಮಗೆ ಧಾನ್ಯ ವಸೂಲಿಯಾಗಲಾರದು. ಏತಕ್ಕೆಂದರೆ ನಾರಾ ಪ್ರದೇಶವನ್ನು ಬಿಟ್ಟು ಎಷ್ಟೋಕಡೆ 5 ಆಣೆ ಬೆಳೆ ಕೂಡ ಆಗಿರುವುದಿಲ್ಲ. ಅತ್ಯಂತ ಚೆನ್ನಾಗಿರತಕ್ಕ ಬೆಳೆಯೆಂದರೆ 8 ಆಣೆ ಬೆಳೆಯೇ ಏನಾ ಆದಕ್ಕಿಂತ ಹೆಚ್ಚಿನ ಬೆಳೆ ಎಲ್ಲಯೂ ಆಗಿರುವುದಿಲ್ಲ. ಆದ್ದರಿಂದ ಈ ಒಂದು ವಿಧಾನವನ್ನೇ ನಂಬಿಕೊಂಡಿರದೆ ತಾವು ಬೇರೆ ಏರ್ಪಾಡುಗಳನ್ನು ಮಾಡಿಕ್ಕೊಳ್ಳಲೇಬೇಕು. ಇಲ್ಲದಿದ್ದರೆ ನಮಗೆ ಖಂಡಿತ ತೊಂದರೆಯಾಗಬಹುದು. ತಾವು ಈ ವಸೂಲು ಕ್ರಮ ಹೇಗೆ ನಡೆಸಿದರೂ ಕೇವಲ ಅದು ನಾರಾ ಪ್ರದೇಶದಲ್ಲಿ ತಮಗೆ ಕೊಂಚ ಸರಾಗವಾಗಿ ಧಾನ್ಯ ಶೇಖರಣೆ ಆದೀತೇ ಏನಾ ಇತರ ಕಡೆ ತಮ್ಮ ನಿರೀಕ್ಷಣೆ ಸಫಲವಾಗಲಾರದು. ಈ ಆಹಾರ ಧಾನ್ಯವನ್ನು ಹೆಚ್ಚು ಬೆಳೆಯಬೇಕೆಂಬ ಯೋಜನೆಗಾಗಿ ತಮಗೆ ಕೇಂದ್ರ ಸರ್ಕಾರದವರಿಂದ 50 ಸಾವಿರ ರೂಪಾಯಿಗಳು ಈ ಸಾಲಿಗೆ ಬಂದಿರುತ್ತದೆಂಬುದಾಗಿ ಕೇಳಿದ್ದೇವೆ. ಈ ಹಣವೆಲ್ಲವನ್ನೂ ತಾವು ಯಾವ ಪ್ರದೇಶಕ್ಕೂ ಖರ್ಚು ಮಾಡದೆ ಇದನ್ನು ಕೇವಲ ನದೀ ಪ್ರದೇಶಗಳಿಗೆ ಮಾತ್ರವೇ ಎಂದರೆ ತುಂಗ ಮತ್ತು ಭದ್ರ, ಇತ್ಯಾದಿ ಸ್ಥಳಗಳಿಗೆ ಸೌಕರ್ಯಗಳನ್ನು ಒದಗಿಸುವುದಾದರೆ ತಾವು ನಾಳೆಯ ವರ್ಷವೇ ಸಾವಿರಾರು ಪಲ್ಲದವಸವನ್ನು ಸುರಾಯಾಸವಾಗಿ ಪಡೆಯಲು ಯಾವ ಸಂದೇಹವೂ ಇಲ್ಲದಂತೆ ಬೆಳೆಯನ್ನು ತೆಗೆಯಬಹುದು. ಸದಾ ನೀರಿರತಕ್ಕ ಈ ನದೀ ದಡಗಳಲ್ಲೆಲ್ಲಾ ಇರಿಗೇಷನ್ ಪಂಪುಗಳನ್ನು ಹಾಕಿಸಿ ನೀರನ್ನು ಸಮೃದ್ಧಿಯಾಗಿ ಸರಬರಾಯಿ ಮಾಡಿದರೆ ಈ ವರ್ಷವೇ ನಾವು ಈ ಘೋರ ಸಮಸ್ಯೆಯನ್ನು ಎದುರಿಸಲು ಸಾಧ್ಯವಾಗುತ್ತದೆ. ಮುಂದಿನ ವರ್ಷ ಸಂಪೂರ್ಣವಾಗಿ ಮಳೆ ಬೆಳೆಗಳಾದರೆ ಡಿ-ಕಂಟ್ರೋಲ್ ಮಾಡಬಹುದು. ಈ ವರ್ಷದ ಯೋಜನೆಯು ಮುಂದಿನ ವರ್ಷಕ್ಕೆ ಪೂರಾ ಫಲಕಾರಿಯಾಗು

(ಶ್ರೀ ಬಿ. ಮಾಧವಾಚಾರ್.)

ತ್ತದೆಂಬ ಗೊಹೆಯಮೇಲೆ ನಾನು ಇದನ್ನೆಲ್ಲಾ ತಿಳಿಸುತ್ತಿದ್ದೇನೆ. ಹೀಗೆ ನದಿ ದಡದಲ್ಲಿರುವ ಗ್ರಾಮಗಳವರಿಗೆ ಆ ಹಣವನ್ನೆಲ್ಲಾ ಸಂಪೂರ್ಣವಾಗಿ ವಿನಿಯೋಗಮಾಡಿದರೆ ಈ ಧಾನ್ಯದ ಹತೋಟಿ ತನ್ನಷ್ಟಕ್ಕೆ ತಾನೇ ದೂರ ಸರಿಯಲು ಪ್ರಾರಂಭವಾಗುತ್ತದೆ. ಇಷ್ಟು ಮಾತ್ರ ಗಳನ್ನು ಹೇಳಿ ಶ್ರೀ ಮಾದಯ್ಯನವರು ತಂದಿರುವ ತಿದ್ದುಪಡಿಗೂ ನನ್ನ ಸಂಪೂರ್ಣ ಬೆಂಬಲವನ್ನು ನೀಡಿ, ನಾನು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

*ಶ್ರೀ ಬಿ. ಪುಟ್ಟೇಗೌಡ (ತುರುವೇಕೆರೆ).—ಸ್ವಾಮಿ, ಈ ಆಹಾರ ಸಮಸ್ಯೆಗೆ ಸಂಬಂಧಪಟ್ಟ ಅನೇಕ ವಿಷಯಗಳು ಒಂದಲ್ಲ ಒಂದು ರೀತಿಯಲ್ಲಿ ಈ ಸಭೆಯ ಮುಂದೆ ಆಗಿಂದಾಗ್ಗೆ ಬರುತ್ತಲೇ ಇರುತ್ತವೆ. ಈ ವರ್ಷದ ಏಪ್ರಿಲ್ ತಿಂಗಳಿನಲ್ಲಿ ನಡೆದ ಅಧಿವೇಶನದಲ್ಲಿ ಮುಖ್ಯ ಮಂತ್ರಿಗಳು ದೇಶದಲ್ಲಿ ಆಹಾರ ಧಾನ್ಯಗಳ ಸಾಗಾಣಿಕೆಯ ಸಂಬಂಧದಲ್ಲಿ ಹಾಕಲಾಗಿದ್ದ ಆಜ್ಞೆಗಳನ್ನು ಸಡಿಲವಾಡುತ್ತೇವೆಂದು ಹೇಳಿ ಅದರಂತೆ ಸಡಿಲವಾಡಿದ್ದನ್ನು ಕಂಡು ನಾನು ಈ ಕಂಟ್ರೋಲುಗಳೆಲ್ಲವೂ ಈ ವರ್ಷಾಖ್ಯೆರಿಗೆ ಹೋಗಬಹುದೆಂದು ನಂಬಿಕೊಂಡಿದ್ದೆನು. ಈ ಪದ್ಧತಿ ಜಾರಿಗೆ ಬಂದು ಸುಮಾರು 10 ವರ್ಷಗಳಾಯಿತು. ಅಂದಿನಿಂದಲೂ ಇದು ಒಂದೇ ಸಮನಾಗಿ ಜಾರಿಯಲ್ಲಿರುತ್ತದೆ ಹೀಗೆ ಇದನ್ನು ಮುಂದುವರಿಸಿಕೊಂಡು ಬರುತ್ತಿರುವ ಕಾರಣದಿಂದಲೇ ದೇಶದಲ್ಲಿ ಈ ದಿವಸ ಇಷ್ಟೊಂದು ಆಹಾರ ಅಭಾವ ಉಂಟಾಗಲು ಅವಕಾಶವಾಯಿತು. ಇದು ಯುದ್ಧಕಾಲದಲ್ಲಿ ಸಂಭವಿಸಿದ್ದಾದರೂ ಇಲ್ಲಿಗೆ ಯುದ್ಧ ಮುಗಿದು 6-7 ವರ್ಷಗಳ ಮೇಲಾದರೂ ಈ ದುರ್ಭಿಕ್ಷ ಪರಿಸ್ಥಿತಿ ಹೊರಟುಹೋಗದೆ ಇದು ಒಂದೇ ಸಮನಾಗಿ ನಡೆದುಕೊಂಡು ಬರುತ್ತಿದೆ. ಆದರೆ ಇದನ್ನು ಇನ್ನೂ ಎಷ್ಟು ಕಾಲದವರೆಗೆ ಮುಂದುವರಿಸಬೇಕೆಂಬುದನ್ನು ನಾವು ಬಹು ಸೂಕ್ಷ್ಮವಾಗಿ ಪರಿಶೀಲನೆಮಾಡಬೇಕಾಗಿದೆ. ಆದರೆ ಈ ಬಗ್ಗೆ ಅನೇಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ನಮ್ಮ ಮುಂದಿರುವ ಆಹಾರ ನಿಯಂತ್ರಣದ ನೀತಿಯ ಬಗ್ಗೆ ಏನು ಹೇಳಿದ್ದಾರೆಂದರೆ .....

"That the Levy System be taken into consideration and the system of procuring from Surplus Holders with the ultimate aim of complete decontrol be adopted"

ಪದೇ ಪದೇ ನಮ್ಮ ಅಭಿಪ್ರಾಯಗಳನ್ನು ನಾವು ಹೇಳುತ್ತಲೇ ಬಂದಿದ್ದೇವೆ. ಆದರೆ ಅವರು ನಮ್ಮ ಅಭಿಪ್ರಾಯಗಳಿಗೆ ಯಾವ ಮಾನ್ಯತೆಯನ್ನೂ ಕೊಡದೆ ಕೇವಲ ಅವರು ಅವರ ಇಚ್ಛಾನುಸಾರವಾಗಿ ಅಡಳಿತವನ್ನು ನಡೆಸುತ್ತ ಬರುತ್ತಿರುವುದು ಮಾಮೂಲಾಗಿ ಹೋಗಿದೆ. ಹೀಗಿರುವಾಗ ನಾವು ಈ ಸಂದರ್ಭದಲ್ಲಿ ನಮ್ಮ ಅಭಿಪ್ರಾಯಗಳನ್ನು ನೀಡತಕ್ಕ ಪ್ರಯತ್ನವಾದರೂ ಏನಿರುತ್ತದೋ ಅದೇ ನನಗೊಂದು ಅನುಮಾನವಾಗಿರುತ್ತದೆ ಈ ನಿಯಂತ್ರಣದ ಸಂಬಂಧದಲ್ಲಿ ಶ್ರೀ ಮಾದಯ್ಯನವರು ಒಂದು ತಿದ್ದುಪಡಿಯನ್ನು ಬೇರೆ ತಂದಿದ್ದಾರೆ. ಆದರೆ ಅದು ಈ ಮೂಲ ತತ್ವಕ್ಕೆ ಎಷ್ಟು ವಿರುದ್ಧವಾಗಿರುತ್ತದೆಂಬುದನ್ನೂ ಮತ್ತು ಅದು ಎಷ್ಟು ಅಸಬದ್ಧವಾಗಿರುತ್ತದೆಂಬುದನ್ನೂ ಹೇಳತೀರದಾಗಿದೆ. ಹೀಗೆ ಯುದ್ಧಕಾಲದಲ್ಲಿ ಅನಿವಾರ್ಯ ಪ್ರಸಂಗ ಬಂದಿದಾಗ ಈ ಕಂಟ್ರೋಲನ್ನು ಜಾರಿಗೆ ತಂದಿದ್ದಾಯಿತು. ಈಗ ಯುದ್ಧ ಮುಗಿದುಹೋದಮೇಲೆ ಇದಂತೂ ಸಾರೋದ್ಧಾರವಾಗಿ ಎಲ್ಲಾ ಪ್ರದೇಶಗಳಿಗೂ ಹರಡಿಕೊಳ್ಳುತ್ತಾ ಬಂದಿದೆ. ಹೀಗೆ ಇದನ್ನು ಮುಂದುವರಿಸಿಕೊಂಡು ಬರುತ್ತಿರುವುದರಿಂದ ದೇಶದಲ್ಲಿ ಜನರಿಗೆ ಯಾವ ಯಾವ ರೀತಿಯಲ್ಲಿ ಎಷ್ಟೆಷ್ಟು ತೊಂದರೆಯಾಗುತ್ತಿದೆಯೆಂಬುದನ್ನು ಹೇಳತೀರದಾಗಿದೆ. ಹೀಗೆ ಇದನ್ನು ಮುಂದುವರಿಸಿಕೊಂಡುಹೋಗಬೇಕೆಂಬ ಪಾಲಿಸಿಯನ್ನು ನಾವು ಖಂಡಿತ ಒಪ್ಪಲು ಸಾಧ್ಯವಿಲ್ಲ. ಈ ದಿನ ಅಧಿಕಾರದಲ್ಲಿದ್ದು ಆಡಳಿತ ನಡೆಸುತ್ತಿರುವ ಶ್ರೀ ಕೆ. ಹನುಮಂತಯ್ಯನವರು ಆಡಳಿತಕ್ಕೆ ಬರುವ ಮುನ್ನ ಇದನ್ನು ಕೂಡಲೇ ರದ್ದುಪಡಿಸತಕ್ಕ ಬಗ್ಗೆ ಬೇಕಾದಷ್ಟು ವಿವರಣೆಗಳನ್ನು ಕೊಟ್ಟಿದ್ದರು. ಅಧಿಕಾರಕ್ಕೆ ಬಂದನಂತರ ಹಾಗೆ ಏನನ್ನೂ ಮಾಡದೆ ಕೇವಲ ಮೂವ್‌ಮೆಂಟ್ ರಿಸ್ಟ್ರಿಕ್ಷನ್‌ಗಳನ್ನು ಸಡಿಲಮಾಡಿದರು. ಅಲ್ಲಗೂ ಸಹ ಜನರಿಗೆ ಇವರು ನ್ಯಾಯದಲ್ಲೇ ಇದನ್ನು ಡಿಕಂಟ್ರೋಲ್ ಮಾಡಬಹುದೆಂಬ ಭರವಸೆಯೂ ಬಂದಿತ್ತು. ಹಿಂದಿನಿಂದಲೂ ನಾವು ಈ ಕಂಟ್ರೋಲಿನ ಬಗ್ಗೆ ಏನೇನು ತಿಳಿಸುತ್ತಿದ್ದೇವೋ ಅವುಗಳೆಲ್ಲಾ ಈಗ ನಡೆಯುತ್ತಿವೆ. ಜನರಿಗೆ ಆಗುತ್ತಿರುವ ಅನ್ಯಾಯ, ಅಧಿಕಾರಿಗಳಲ್ಲಿ ಲಂಚರುಷುವತ್ತುಗಳ ಹಾವಳಿ, ಇತ್ಯಾದಿ ನಾನಾ ತೊಂದರೆಗಳಿಂದ ಜನರು ಬೇಸತ್ತುಹೋಗಿ, ವ್ಯವಸಾಯದ ಮೇಲಿದ್ದ ಭ್ರಮೆಯನ್ನೆಲ್ಲಾ ಸಂಪೂರ್ಣವಾಗಿ ತೊರೆದು, ಅವರ ಮನೆ ಮಠಗಳೆಲ್ಲಾ ಬಿಟ್ಟು ದೇಶಾಂತರ ಹೋಗುವಂಥ ಪರಿಸ್ಥಿತಿಗೆ ಅವರೆಲ್ಲ ಬಂದಿರುತ್ತಾರೆ. ಅಲ್ಲದೆ, ಆಹಾರ ಪದಾರ್ಥಗಳನ್ನು ಬೆಳೆದ ಒಂದು ಅಪರಾಧಕ್ಕೆ ಆತನು ಜೈಲಿಗೆ ಹೋಗಬೇಕಾಗಿ ಬಂದಿದೆ. ಇಂಥಾದನ್ನು ಪ್ರಪಂಚದಲ್ಲಿ ಎಲ್ಲಿಯೂ ಕೇಳಿಲ್ಲ. ಅನೇಕ ಸಾರಿ ನಾವು ಈ ಅಂಶವನ್ನೇ ಒತ್ತಿ ಒತ್ತಿ ಹೇಳುತ್ತಾ ಬಂದಿದ್ದೇವೆ. ಆದರೂ ಇವೊತ್ತಿನವರೆಗೂ ತಾವು ಅತ್ತ ಕಡೆ ನೋಡಿಲ್ಲ. ಇದನ್ನು ನೋಡಿದರೆ, ಬಹುಶಃ ಆಡಳಿತವರ್ಗದವರಿಗೆ ಇದರಲ್ಲಿ ಜನರನ್ನು ಹೆದರಿಸಿ ಹತೋಟಿಯಲ್ಲಟ್ಟುಕೊಳ್ಳಬಹುದಾದ ಅನುಕೂಲವಿದೆಯೆಂದು ಇಟ್ಟುಕೊಂಡಿದ್ದಾರೆಂದು ತೋರುತ್ತದೆ. ಇವೊತ್ತಿಗೂ ಇಂಥ ಅನ್ಯಾಯ ನಡೆಯುತ್ತಿದೆ. ಒಂದು ಉದಾಹರಣೆ ಹೇಳುವುದಾದರೆ, ಒಬ್ಬಾನೊಬ್ಬ ಒಂದು ಗಾಡಿಯ ಮೇಲೆ ಎರಡು ಪಲ್ಲ ದವಸವನ್ನು ತೆಗೆದುಕೊಂಡು ಹೋಗುತ್ತಿದ್ದ. ಇನ್ನೊಬ್ಬ ಬಸ್ಸಿನ ಮೇಲೆ 15 ಪಲ್ಲ ತೆಗೆದುಕೊಂಡು ಹೋಗುತ್ತಿದ್ದ. ಎರಡು ಕೇಸುಗಳನ್ನೂ ಫೋಲೀಸಿನವನು ಹಿಡಿದು ಅವು ಡೆಪ್ಯುಟಿ ಕಮೀಷನರ ಮುಂದೆ ದಾಖಲಾದವು. ಕೊನೆಗೆ ಫಲಿತಾಂಶ ನೋಡಿದ್ದರಲ್ಲಿ, ಎರಡು ಪಲ್ಲ ತರುತ್ತಿದ್ದವನಿಗೆ ಶಿಕ್ಷೆಯಾಯಿತು, 15 ಪಲ್ಲ ತರುತ್ತಿದ್ದವನಿಗೆ ವಜಾಆಯಿತು, ಇಂಥ ಅನೇಕ ಕೇಸುಗಳನ್ನು ನಾನೇ ಬೆಂಗಳೂರು ಡಿಸ್ಟ್ರಿಕ್ಟಿನ ಫುಡ್ ಅಸಿಸ್ಟೆಂಟರ ಗಮನಕ್ಕೆ ತಂದಿದ್ದೇನೆ. ಯಾರದೋ ಶಿಫಾರಸ್ಸು ಬಂತೆಂದು ಬಸ್ಸಿನವನಿಗೆ ವಜಾ ಆಯಿತು!

ಶ್ರೀ ಕೆ. ಹನುಮಂತಯ್ಯ.—ನನಗೆ ಮಾತನಾಡುವುದಕ್ಕೆ ಗಂಟಲು ಚೆನ್ನಾಗಿಲ್ಲ. ಆದರೂ ಹೇಳುತ್ತೇನೆ. ಆ ರೀತಿಯಾಗಿ ಪಕ್ಷಪಾತ ಮನೋವೃತ್ತಿಯಿರುವುದನ್ನು ತೋರಿಸಿಕೊಟ್ಟರೆ ನಾನದನ್ನು ಖಂಡಿತ ಸರಿಪಡಿಸುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಬಿ. ಪುಟ್ಟೇಗೌಡ.—ಒಂದೊಂದು ಪಲ್ಲ ತೆಗೆದುಕೊಂಡುಹೋಗುತ್ತಿದ್ದ ಕೇಸುಗಳನ್ನು ಹಿಡಿದಿರುವುದನ್ನು ನಾನೇ ಎಷ್ಟೋಸಾರಿ ಸ್ಪೈರೆಕ್ಟರವರಿಗೆ ಹೇಳಿದ್ದೇನೆ. ಅವರು ಆ ಕೂಡಲೆ ಫುಡ್ ಅಸಿಸ್ಟೆಂಟ್‌ರಿಗೆ ಕರೆದು ಹೇಳಿ ವಾಪಸು ತೆಗೆದುಕೊಂಡಿದ್ದಾರೆ. ಇಂಥ ನಿದರ್ಶನಗಳನ್ನು ಕೇಳಿ ತಿಳಿದುಕೊಳ್ಳಬಹುದು. ಈ ರೀತಿಯಾಗಿ

ಜನರಿಗೆ ಎಷ್ಟೋಸಾರಿ ಕಿರುಕುಳಗಳಾಗುತ್ತಿರುವ ಉದಾಹರಣೆಗಳನ್ನು ಕೊಟ್ಟಿದ್ದೇನೆ. ನಮ್ಮ ಕಡೆಯಲ್ಲಿಯೂ ನಿಮ್ಮ ಕಡೆಯಲ್ಲಿಯೂ ಅನೇಕರು ಇದನ್ನೇ ಹೇಳಿದ್ದಾರೆ. ಶ್ರೀವಾರ್ ಪಟ್ಟಾಭಿರಾಮನ್‌ರವರೂ ಈ ಅಂಶವನ್ನು ಸಮರ್ಥಿಸಿದ್ದಾರೆ. ಇದಕ್ಕೇ ಗೋಪಾಲ ಗೌಡರು ಹೇಳಿದರು, ದೇಶದಲ್ಲಿ ಕಂಟ್ರೋಲ್ ಎಕಾನಮಿ ಇರಬೇಕು ಎಂದು. ಬೆಳದದ್ದೆಲ್ಲವನ್ನೂ ತೆಗೆದು ಕೊಂಡುಬಿಟ್ಟು ಎಲ್ಲರಿಗೂ ಸಮನಾಗಿ ಹಂಚಿಬಿಡಿ. ಇಲ್ಲದಿದ್ದರೆ, ಇಷ್ಟೆಲ್ಲಾ ಕಷ್ಟ ವಿದೆಯೆಂಬುದನ್ನು ಈ ಹತ್ತು ವರ್ಷಗಳ ಅನುಭವ ಪಡೆದ ಮೇಲೆ ತಿಳಿದು, ಧೈರ್ಯವಾಗಿ ಮುಂದೆ ಹೆಜ್ಜೆಯಿಟ್ಟು, ತಾವು ಡೀ-ಕಂಟ್ರೋಲ್ ನೀತಿ ಶುರುಮಾಡಿರುವುದನ್ನು ಪೂರ್ತಿಮಾಡಬೇಕು. ನೀವು ಕೊಟ್ಟಿರುವ ಅಂಕಿಅಂಶಗಳನ್ನೇ ನೋಡಿ. ನೀವು 12 ಲಕ್ಷ ಪಲ್ಲ ಬೇಕೆಂದು ಹೇಳಿದ್ದೀರಿ. ಈಗ ವರ್ಷೇವರ್ಷೇ ಪ್ರೊಕ್ಯೂರ್ ಆಗುತ್ತಿರುವುದು 11 ಲಕ್ಷ ಪಲ್ಲ. ಇದಕ್ಕಾಗಿ ಹಿಂದಿನಿಂದ ಎಷ್ಟೋ ಕಷ್ಟಗಳನ್ನನುಭವಿಸಿದ್ದಾಯಿತು. ಈಗ ನೀವು ಯಾವುದೇ ಹೊಸ ಸಿನ್ಸಂ ತಂದು experiment ಮಾಡುತ್ತೇವೆಂದರೂ ಇನ್ನೇನು ತೊಂದರೆಗಳು ಬರುತ್ತವೋ ಎಂದು ಹೆದರಿಕೆಯಾಗುತ್ತದೆ. ಒರೆಯ ಮೇಲಿನ ಬಾಂಡಲೆಯಿಂದ ತಪ್ಪಿಸಿಕೊಂಡು ಎಲ್ಲಿ ಬೆಂಕಿಗೆ ಬೀಳುತ್ತೇವೆಯೋ ಎಂದು ಭಯವಾಗುತ್ತದೆ. ಏಕೆಂದರೆ ಇದುವರೆಗೂ ಪ್ರೊಕ್ಯೂರ್‌ಮೆಂಟ್ ಸರಾಸರಿಮಾಡುತ್ತಿರುವುದು 11 ಲಕ್ಷ ಪಲ್ಲಗಳು ಮಾತ್ರ.

Sri H. SIDDAVEERAPPA.—It is not correct. ಹನ್ನೊಂದು ಲಕ್ಷ ಪಲ್ಲಗಳಲ್ಲ.

Mr. SPEAKER.—It varies from 11 lakhs to 18 lakhs.

Sri H. SIDDAVEERAPPA.—I thank you. It is 18 lakhs.

ಶ್ರೀ ಬಿ. ಹುಚ್ಚೇಗೌಡ.—ಸರಾಸರಿ ತೆಗೆದುಕೊಂಡರೆ 11 ಲಕ್ಷದ 90 ಸಾವಿರ ಎಂದು ನೀವೇ ಹೇಳಿದ್ದೀರಿ. ನಮಗೀಗಬೇಕಾಗಿರುವುದು ಸರಾಸರಿ ಮಾತ್ರ. ಇದರ ಮೇರೆ ಅಮದುಮಾಡಿಕೊಂಡಿರುವುದು ಬೇರೆ 10 ಲಕ್ಷ ದಷ್ಟಿದೆ. ಅಂಥದರಲ್ಲಿ ನೀವು 12 ಲಕ್ಷ ಪಲ್ಲ ಮಾತ್ರ ಬೇಕೆಂದು ಹೇಳುತ್ತೀರಿ. ಇದಕ್ಕೆತಾನೆ ಏಕೆ ಈ 2 ಲಕ್ಷದ 50 ಸಾವಿರ ಜನರಿಗೆ ತೊಂದರೆಕೊಟ್ಟು, ಇಂಥ ಮುಗ್ಧಟ್ಟನ ಕಾಲದಲ್ಲಿ ತಾವೂ ಹಣವನ್ನು ಖರ್ಚುಮಾಡಿ ಕೊಂಡು ಇಷ್ಟೊಂದು ಜವಾಬ್ದಾರಿ ಹೊತ್ತುಕೊಳ್ಳಬೇಕು?

ಇನ್ನೊಂದೇನೆಂದರೆ, ಈಗ ಏಪ್ರಿಲ್‌ನಿಂದ ಇಲ್ಲಿಯವರೆಗೆ 6 ತಿಂಗಳಕಾಲ ಡೀ-ಕಂಟ್ರೋಲ್‌ಮಾಡಿದ್ದೀರಿ, (ಸ್ಪಲ್ಪವು ಟ್ಟಿಗೆ ಸಡಿಲಿಸಿದ್ದೀರಿ); ಇದರಿಂದ ನಿಮಗೆಷ್ಟು ತೊಂದರೆ ಕಡಿಮೆಯಾಗಿದೆಯೆಂಬುದನ್ನು ನೋಡಿ. ಏಪ್ರಿಲ್ ತಿಂಗಳಿನಲ್ಲಿ ತಾವು ರೂರಲ್ ರೇಷನಿಂಗ್‌ಗಾಗಿ 2,86,000 ಪಲ್ಲಗಳನ್ನು ಒದಗಿಸಿದ್ದಿರಿ. ಇದರ ಪೈಕಿ ನೀವು ಈಗ ಹಂಚಿರುವುದು ಕೇವಲ 86,000 ಪಲ್ಲ. ಇನ್ನುಳಿದ 2 ಲಕ್ಷ ಪಲ್ಲಗಳನ್ನು handle ಮಾಡುವ ಕಷ್ಟ ತಮಗೆ ತಪ್ಪಿದಂತಾಗಲಿಲ್ಲವೇ! ಆದ್ದರಿಂದ ನೀವೇಕೆ ಈ ಜವಾಬ್ದಾರಿಯನ್ನು ಈಗ ಹೊತ್ತುಕೊಳ್ಳಬೇಕು? ಇಲ್ಲದಿದ್ದರೆ ಇದನ್ನೇ ಒಂದು permanent feature ಆಗಿ ಇಟ್ಟುಕೊಳ್ಳಿ. ಸರ್ಪ್ಲಸ್ ಹೇಗೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರೋ ಹಾಗೆಯೇ ದವಸವನ್ನು ಬೆಳೆಯದ ಜನರಿಗೂ ಒದಗಿಸುವ ಏರ್ಪಾಡು ಮಾಡಿ. ಸರಿಯಾದ ದರವನ್ನು ಕೊಟ್ಟು ಕೊಂಡುಕೊಂಡು ಸುಲಭವಾದ ದರದಲ್ಲಿ ಕೊಡಿ. ಆ ರೀತಿ planned economy ತಾವು ಮಾಡುವುದಿಲ್ಲ, ದವಸವನ್ನು ಕೊಂಡುಕೊಳ್ಳುವುದರಲ್ಲೂ ಅವರು ಮಾಡುವ ಖರ್ಚನ್ನು ನೋಡಿಕೊಂಡು ಸರಿಯಾಗಿ ಕೊಡುವುದಿಲ್ಲ. ಇನ್ನೊಂದು ಕಡೆ ಕೊಳ್ಳುವವನಿಗೆ ಅವನ ಶಕ್ತಿಯನ್ನು ನೋಡಿ ಕೊಡಿ ಎಂದೂ ಕೊಡುವುದಿಲ್ಲ. ತಿರುಗಿ, ಒಂದು ಕೋಟಿ 70 ಲಕ್ಷ ರೂಪಾಯಿಗಳ ನಷ್ಟವಾಯಿತೆಂದು ಹೇಳುವುದು ಬೇರೆ! ಇದರಿಂದ ಯಾರಿಗೆತಾನೆ ತೃಪ್ತಿಯಾಯಿತು? ಒಮ್ಮೆ ಹಿಂದಿನ ಪದ್ಧತಿಯನ್ನು ಬಿಟ್ಟುಬಿಡುತ್ತೇವೆಂದು ಹೇಳುತ್ತೀರಿ. ಅದೇನೋ ಹೋಯಿತೆಂದು ನಂಕೋಪದಿಂದ ರೋಷವೆಂದರೆ, ಮುಂದಿನ ಪದ್ಧತಿಯೇನೋ ಗೊತ್ತಿಲ್ಲ! ಈ ವರ್ಷ ಮಳೆಬೆಳೆಗಳು ಬೇರೆ ಚೆನ್ನಾಗಿಲ್ಲ. ಉದಾಹರಣೆಗೆ ಮರೆನಾಡಿನ ಡಿಸ್ಟ್ರಿಕ್ಟ್‌ಗಳಲ್ಲಿ ಬತ್ತದ ಬೆಳೆಯೊಂದೇ ಬರುವುದು. ಅದು ತಪ್ಪಿತೆಂದರೆ ಬೇರೆ ಏನೂ ಬರುವುದಿಲ್ಲ. ಮೈದಾನದ ಡಿಸ್ಟ್ರಿಕ್ಟ್‌ಗಳಲ್ಲಿ ಹಾಗಲ್ಲ. ಮಳೆಗಾಲದ ಬೆಳೆ ಹೋದರೆ ಬೇನಗೆ ಬೆಳೆಯನ್ನಾದರೂ ಬೆಳೆದುಕೊಳ್ಳಬಹುದು. ಆದ್ದರಿಂದ ಆ ಪ್ರದೇಶಗಳಲ್ಲಿ ಧಾನ್ಯದ ವಸೂಲು ಹೇಗೆ ಸಾಧ್ಯವೋ ಗೊತ್ತಿಲ್ಲ. ಹಿಂದೆಯೇ assess ಮಾಡುವುದರಲ್ಲಿ ಶ್ಯಾನುಭೋಗರು ಪಟೇಲರುಗಳು ಸೇರಿಕೊಂಡು ಎಷ್ಟು ತೊಂದರೆಮಾಡುತ್ತಿದ್ದರೆಂಬುದು ತಮಗೇ ಗೊತ್ತಿದೆ. ಈಗ assess ಕೂಡ ಮಾಡದೆ ಲೆವಿ ಮಾಡುತ್ತೇವೆಂದರೆ ಹೇಗೆ! ಆಕ ಸ್ಮಾತ್ ಒಂದು ಗ್ರಾಮಕ್ಕೆ 800 ಪಲ್ಲ ಕೊಡಬೇಕೆಂದು ಹಾಕಿಬಿಟ್ಟರೆ ಅವನ್ನೆಲ್ಲಿಂದ ಈ ಸಾರಿ ತಂದುಕೊಡುವುದು? ಹಿಂದೆ ಮೂರು ವರ್ಷಗಳು ಅಷ್ಟಾಗಿರಬಹುದು. ಹಿಂದೆ assess ಮಾಡುವುದರಲ್ಲೂ ಎಷ್ಟೋ ಜನ ಸೇಡು ತೀರಿಸಿಕೊಳ್ಳುವುದಕ್ಕೂ ಜಾಸ್ತಿ assess ಮಾಡಿರುವುದುಂಟು. ಅದನ್ನೇ ಇಂದು ಆಧಾರವಾಗಿಟ್ಟುಕೊಂಡು ಲೆವಿ ಮಾಡಿದರೆ ಹೇಗೆ ಕೊಡುವುದು! ಪ್ರೊಕ್ಯೂರ್‌ಮಾಡಬೇಕಾದರೆ ಇಂಥ ಮನೆಗೆ ಇಷ್ಟು ಬೇಕು, ಇಷ್ಟು ಹೆಚ್ಚಿಗೆ ಉಳಿಯುತ್ತದೆ, ಆದ್ದರಿಂದ ಇಷ್ಟು ಕೊಡಬೇಕೆಂದರೆ ಪರವಾಗಿಲ್ಲ. ಇಲ್ಲದಿದ್ದರೆ ಯಾವ ರೀತಿ ಕೊಡುವುದು?

ಅಲ್ಲದೆ ಇನ್ನೊಂದು ಅಂಶ. ಯಾವ ವರ್ಷ ನೋಡಲಿ, ಈ ಆಹಾರ ಸಮಸ್ಯೆಯ ನಿವಾರಣೆಯ ಸಂಬಂಧದಲ್ಲಿ ಯಾವ ರೀತಿ ಧಾನ್ಯವನ್ನು ಹಂಚೋಣ ಎಂಬುದರ ಕಡೆಗೆ ತಾವು ಗಮನಕೊಡುತ್ತಿದ್ದೀರೆಂದು ಕಂಡುಬರುತ್ತದೆಯೇ ಏನಾ, ಯಾವ ರೀತಿ ಉತ್ಪನ್ನ ಹೆಚ್ಚಿಗಮಾಡಬೇಕು, ರೈತರಿಗೆ ಯಾವ ರೀತಿ ಉತ್ಪೇಜನ ಕೊಡಬೇಕು ಎಂಬುದರ ಕಡೆಗೆ ನೀವು ಗಮನಕೊಡುತ್ತಿಲ್ಲವಲ್ಲಾ ಎಂದು ವಿಷಾದವಾಗುತ್ತದೆ. ರೈತರಿಗೆ ಬೀಜವನ್ನಾಗಲಿ, ಸಬ್ಸಿಡಿಯನ್ನಾಗಲಿ, ಗೊಬ್ಬರವನ್ನಾಗಲಿ, ತಕಾವಿ ಸಾಲಗಳನ್ನಾಗಲಿ ಏನನ್ನಾದರೂ ನಲೀಸಾಗಿ ಕೊಡುತ್ತಿದ್ದೀರಾ? ಹೀಗಿರುವಾಗ ಆತ ಯಾವ ರೀತಿ ಬೇಸಾಯಮಾಡಿ ಹೆಚ್ಚಿಗೆ ಬೆಳೆದುಕೊಡಬೇಕು? ಅವನ ಎತ್ತು ಹೋದರೆ, ಎತ್ತು ಕೊಂಡುಕೊಳ್ಳುವುದಕ್ಕೆ ದುಡ್ಡಿಲ್ಲ. ಎತ್ತು ಇಲ್ಲದಿದ್ದರೆ ಅವನು ಬೇಸಾಯಮಾಡುವುದು ಹೇಗೆ! ಹಿಂದಿನ ವರ್ಷದಂತೆ ಕೊಡಿಯೆಂದು ಹೇಳಿದರೆ ಅವನು ಹೇಗೆತಾನೆ ಕೊಡುತ್ತಾನೆ? ಏನೂ ಬೆಳೆಯದೆಹೋದರೂ ಅವನು ಕೊಚ್ಚೇಕೊಡಬೇಕೆಂದು ನೀವು ನಿರ್ಬಂಧಕಾಕುತ್ತೀರಿ! ಯಾವಾಗ ನಿಮಗೆ ರೈತರಿಗೆ ಸಾಕಾದಷ್ಟು ಉತ್ಪೇಜನ ಕೊಟ್ಟು, ಹೆಚ್ಚುಹೆಚ್ಚು ಬೆಳೆಸುವಂತೆಮಾಡಿ, ಆತನ ಉತ್ಪತ್ತಿಯ ಖರ್ಚನ್ನು ಕೊಟ್ಟು ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲವೋ, ಆಗ್ಗೆ ಅವರಿಂದ ದವಸ ತೆಗೆದುಕೊಳ್ಳುವುದನ್ನೂ ಬಿಟ್ಟುಬಿಡಬೇಕು. ಅಲ್ಲದೆ ಈಗ ನಮ್ಮ 6 ತಿಂಗಳ ಅನುಭವ ನೋಡಿದರೆ—ಈ ವರ್ಷವೇನೋ ದುರದೃಷ್ಟದಿಂದ ಮಳೆ

(ಶ್ರೀ ಬಿ. ಹುಚ್ಚೇಗೌಡ)

ಹೋಯಿತು, ಆವರೂ ಅಲ್ಪಸ್ವಲ್ಪ ಬೆಳೆದಿದ್ದಾರೆ. ಆದ್ದರಿಂದ, ಮಾನ್ಯ ಪಟ್ಟಾಭಿರಾಮರೆಡ್ಡರವರು ಹೇಳಿದಹಾಗೆ, ದೇಶದಲ್ಲಿ ಈಗಿರುವ ಒಂದೇ ಒಂದು ದಾರಿಯಿರುವುದೆಂದರೆ ತಕ್ಷಣ ಕಂಟ್ರೋಲನ್ನು ತೆಗೆಯುವುದು. ಹಾಗೆ ಮಾಡಿದ ಹೊರತು ಹೆಚ್ಚು ಬೆಳೆ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಓಪನ್ ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುವುದರಲ್ಲಾ ರೈತನಿಗೆ ನರಿಯಾದ ಒಂದು ದರವನ್ನು ಗೊತ್ತುಮಾಡಿ ಕೊಟ್ಟು ಕೊಂಡುಕೊಳ್ಳುವ ಏರ್ಪಾಡುಮಾಡಿ. ದರ ಯಾವ ರೀತಿ ಗೊತ್ತುಮಾಡಬಹುದೆಂದು ಕೇಳಬಹುದು. ಎಷ್ಟೆಲ್ಲೇ ವ್ಯವಸಾಯದ ಇಲಾಖೆಯಿದೆ. ಒಂದು ಎಕರೆ ಜಮೀನನ್ನು ವ್ಯವಸಾಯಮಾಡಬೇಕಾದರೆ ಎಷ್ಟು ಖರ್ಚಾಗುತ್ತಿದೆಯೆಂಬುದನ್ನು ಲೆಕ್ಕಹಾಕಿಸಿ, ಅದರಂತೆ ಕೊಡಿ. ಹೈದರಾಬಾದಿನಲ್ಲಿ ರೈತರ ಸಂಸ್ಥಾನದ ಲೆಕ್ಕಗಳನ್ನು ತೆಗೆದಿದ್ದಾರೆ; ಒಂದು ಸಂಸಾರಕ್ಕೆ ಸಾಮಿತ ರೂಪಾಯಿಗಳು ಖರ್ಚಾದರೆ 600 ರೂಪಾಯಿಗಳ ಸಂಪಾದನೆಯಾಗುತ್ತಿದೆಯೆಂದು ಕಂಡುಹಿಡಿದಿದ್ದಾರೆ.

ಅಧ್ಯಕ್ಷರು.—ಒಟ್ಟಿನಲ್ಲಿ ಬೆಲೆ ಹೆಚ್ಚಾಗಿ ಕೊಡಬೇಕೆಂದುತಾನೆ ತಾವು ಹೇಳುವುದು?

ಶ್ರೀ ಬಿ. ಹುಚ್ಚೇಗೌಡ.—ರೈತರ ಕಷ್ಟಕ್ಕೆ ತಕ್ಕ ಪ್ರತಿಫಲ ದೊರೆಯುವಂತೆ ಮಾಡಬೇಕು ಎಂದು. ಈಗ ನೀವು ಬಟ್ಟೆ ಖರೀದಿ ಗೊತ್ತುಮಾಡಿಲ್ಲವೇ! ಹತ್ತಿಯ ಬೆಲೆ, ಅದನ್ನು ಸಾಗಿಸುವ ಖರ್ಚು, ನೂಲಿನ ಖರ್ಚು, ಬಟ್ಟೆ ನೇಯುವ ಕೂಲಿ, ಅವೆಲ್ಲವನ್ನೂ ಕಳೆದು ಮೇಲೆ 22½% ಲಾಭ ಸೇರಿಸಿ ಕೊಡುತ್ತಾರೆ. ಧಾನ್ಯಗಳನ್ನು ಕೊಂಡುಕೊಳ್ಳುವುದರಲ್ಲಿ ಮಾತ್ರ arbitrary ಯಾಗಿ ಗೊತ್ತುಮಾಡುವುದು ಯಾವ ನ್ಯಾಯ?

ಶ್ರೀ ಕೆ. ಹನುಮಂತಯ್ಯ.—ಇವಾಂ ಸಾಹೇಬರ ವರೇ ಗೊತ್ತುಮಾಡಿದ್ದು!

ಶ್ರೀ ಬಿ. ಹುಚ್ಚೇಗೌಡರು.—ಇವಾಂ ಸಾಹೇಬರು ಮಾಡಿದ್ದೆಲ್ಲಾ ನೀವು ಒಪ್ಪಿಕೊಂಡರೆ ಒಪ್ಪಿಕೊಳ್ಳಿ. ಅವರು ಬೀಳುವ ಬಾವಿಯಲ್ಲೇ ನೀವೂ ಬೀಳುತ್ತೇವೆಂದರೆ ಪರವಾಗಿಲ್ಲ.

ಆಮೇಲೆ ಪ್ರೊಕ್ಯೂರ್‌ಮೆಂಟ್ ಮಾಡುವುದರಲ್ಲೂ ನಗದು ದುಡ್ಡು ಕೊಡುವ ರೀತಿ ಎಲ್ಲೂ ಇಲ್ಲ. ತಾಲ್ಲೂಕಾಫೀಸಿನಲ್ಲಿ ತಿಂಗಳಿಗೆ ಯಾವುದೋ ಒಂದು ದಿವಸ ಕೊಡುತ್ತೇವೆಂದು ಹೇಳಿ ಹೋಗುತ್ತಾರೆ. ಆ ಹೊತ್ತು ಹೋದರೆ ಅಮಲ್ದಾರರೇ ಊರಲ್ಲಿರುವುದಿಲ್ಲ; ಹಾಗಿಲ್ಲದ ಇವರು ಗೊತ್ತುಮಾಡಿದ ಮಿಲ್ಲಿಗೆ ಹೋದರೆ, ಅಲ್ಲಿ ಮಿಲ್ಲಿನವರು ಹೇಳಿದಹಾಗೆ ಅಳೆದು ಕೊಡಬೇಕು. ಹಸಿ ಬತ್ತ ಎಂದು 5 ಸೇರು 10 ಸೇರು ಹೆಚ್ಚಿಗೆ ಕೊಡಿ ಎಂದು ಹೇಳುತ್ತಾರೆ. ನಾಲ್ಕಾರು ಮಿಲ್ಲುಗಳಿಗೆ ಕೊಡುವಂತೆ ಮಾಡಿ. ರೈತರು ತಮಗೆ ಇಷ್ಟಬಂದ ಮಿಲ್ಲಿಗೆ ಕೊಡುವುದಕ್ಕೆ option ಇರಬೇಕು. ಹೀಗೆ ನೀವು ಪ್ರೊಕ್ಯೂರ್‌ಮೆಂಟಿನ ವಿಷಯ ಪರೀಕ್ಷೆಮಾಡುತ್ತಾ ಹೋದರೆ ಎಷ್ಟು ತೊಂದರೆಯಾಗುತ್ತದೆ. ಆದ್ದರಿಂದ ಈಗಿರತಕ್ಕ ಪದ್ಧತಿಯನ್ನು ಖಂಡಿತ ಮನ್ನಾಮಾಡಬೇಕು. ಖದ್ದಾಯಿರವರೇಹೇಳಿದ್ದಾರೆ, ಉತ್ತರ ಇಂಡಿಯಾ ಪ್ರದೇಶಗಳಲ್ಲಿ, ಪಂಜಾಬು, ಪಶ್ಚಿಮ ಬಂಗಾಳ ಮುಂತಾದ ಕಡೆಗಳಲ್ಲೆಲ್ಲಾ ಚೆನ್ನಾಗಿ ಬೆಳೆಯಾಗಿದೆಯೆಂದು ಧೈರ್ಯವನ್ನು ಬೇರೆ ಹೇಳಿದ್ದಾರೆ.

4 P.M.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ತಮ್ಮ ಆಹಾರ ನೀತಿ ಏನೆಂಬ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದಾರೆ, ಮತ್ತು ಈ ಸಂಬಂಧವಾಗಿ ಒಂದು ನಿರ್ಣಯವನ್ನು ಇಟ್ಟಿದ್ದಾರೆ. ದೇಶದಲ್ಲಿ ಆಹಾರದ ಸಮಸ್ಯೆಯನ್ನು ನೋಡಿದರೆ, ಆದು ದಿನ ದಿನಕ್ಕೂ ಬಹಳ ಕಷ್ಟಪರಿಸ್ಥಿತಿಗೆ ಬರುತ್ತಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕಾಲು ಭಾಗ ಜನ ವ್ಯವಸಾಯ ಮಾಡಿ ಉಳಿದ ಮುಕ್ಕಾಲು ಭಾಗ ಜನರಿಗೆ ಆಹಾರವನ್ನೊದಗಿಸುತ್ತಿದ್ದಾರೆ; ಆದರೆ ಭಾರತವನ್ನು ತೆಗೆದುಕೊಂಡರೆ, ಇದರಲ್ಲಿಯೂ ಮೈಸೂರು ಸಂಸ್ಥಾನದಲ್ಲಿ, ಮುಕ್ಕಾಲು ಭಾಗ ವ್ಯವಸಾಯಗಾರರಿದ್ದು ಇನ್ನು ಕಾಲು ಭಾಗ ಜನರಿಗೆ ಆಹಾರವನ್ನೊದಗಿಸಲಾರದೆ ಬಹಳ ಕಷ್ಟ ಪರಿಸ್ಥಿತಿ ಒಂದರೆ, ದೇಶದ ಎಲ್ಲ ಕೆಲಸ ಕಾರ್ಯಗಳಿಗಿಂತಲೂ ಆಹಾರವನ್ನು ಮುಖ್ಯ ವಿಷಯವಾಗಿಟ್ಟುಕೊಂಡು ಕೆಲಸಮಾಡುತ್ತಿದ್ದರೂ ಈ ಸಮಸ್ಯೆ ತೃಪ್ತಿಕರವಾಗಿ ಬಗೆಹರಿದಿಲ್ಲವೆಂದು ಹೇಳಬೇಕಾಗಿದೆ. ಮುಖ್ಯವಾಗಿ ನಮ್ಮ ದೇಶದಲ್ಲಿ ಮುಕ್ಕಾಲು ಭಾಗದಷ್ಟು ಜನ ವ್ಯವಸಾಯಮಾಡುವವರಾಗಿದ್ದು ಉಳಿದ ಕಾಲು ಭಾಗ ಜನರಿಗೆ ಆಹಾರವನ್ನೊದಗಿಸದೇಯಿರುವುದು ನಮ್ಮ ದೇಶಕ್ಕೇ ಅವಮಾನವೆಂದು ಹೇಳಬೇಕಾಗಿದೆ. ಇದನ್ನು ನೋಡಿದರೆ ಮುಖ್ಯವಾಗಿ ನಮ್ಮ ದೇಶದಲ್ಲಿ ಆಹಾರ ಮತ್ತು ವ್ಯವಸಾಯಕ್ಕೇ ಪ್ರತ್ಯೇಕವಾಗಿ ಒಬ್ಬ ಮಂತ್ರಿಗಳಿರಬೇಕೆಂದು ಸರ್ಕಾರದಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ. ಏಕೆಂದರೆ, ದೇಶದಲ್ಲಿ ಎಲ್ಲಕ್ಕಿಂತ ಅನ್ನದ ಸಮಸ್ಯೆ ಬಹು ಮುಖ್ಯವಾದುದು. ಇದನ್ನು ಬಗೆಹರಿಸಬೇಕಾದರೆ, ಆಹಾರ ಮತ್ತು ವ್ಯವಸಾಯಕ್ಕೆ ಪ್ರತ್ಯೇಕ ಮಂತ್ರಿಗಳಿದ್ದು ಅವರು ಹಗಲಿರುಳೂ ರೈತರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾ ರೈತರ ಆಗು ಹೋಗುಗಳಿಗಾಗಿ ಕೆಲಸ ಮಾಡುತ್ತಿರಬೇಕು. ಈ ರೀತಿ ಮಾಡುವುದು ಸರ್ಕಾರದ, ಸಾರ್ವಜನಿಕರ ಮತ್ತು ಮಾನ್ಯ ಸದಸ್ಯರ ಮುಖ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಬಹುಕಾಲದಿಂದ ನಮ್ಮ ಮೈಸೂರು ದೇಶದಲ್ಲಿ ವ್ಯವಸಾಯ ಇಲಾಖೆ ಇದೆ. ಆದರೆ ವ್ಯವಸಾಯ ಮತ್ತು ಆಹಾರ ಸಂಶೋಧಕರು ಏನು ಮಾಡುತ್ತಿದ್ದಾರೆಂದು ನೋಡಿದರೆ, ವ್ಯವಸಾಯದಿಂದ ಆಹಾರದ ಬೆಳೆಯನ್ನು ಹೆಚ್ಚಿಸುವ ಕಡೆ ಗಮನ ಕೊಡುವುದಕ್ಕಿಂತ ಗೆಣಸು ಗೆಡ್ಡೆಗಳಿಂದ artificial rice, ಎಂದರೆ ಕೃತಕ ಅಕ್ಕಿಯನ್ನು ತಯಾರು ಮಾಡುವುದು, ಕೃತಕ ಮಳೆ ತರಿಸುವುದು ಇವುಗಳ ಕಡೆ ಗಮನ ಕೊಟ್ಟು ಇದರಿಂದ ಹೆಚ್ಚು ಆಹಾರ ಬೆಳೆಯುತ್ತೇವೆಂದು ಹೇಳುತ್ತಿದ್ದಾರೆ. ನಮ್ಮ ಇಡೀ ದೇಶದಲ್ಲಿ ಇಷ್ಟು ಫಲವತ್ತಾದ ಜಮೀನಿರುವಾಗ ನಿಜವಾಗಿ ಇಲ್ಲಾ ಆಹಾರದ ಬೆಳೆ ಏಕೆ ಬೆಳೆಯಾಗುತ್ತಿಲ್ಲ ಎಂಬುದರ ಕಡೆ ಎಲ್ಲರೂ ಯೋಚನೆ ಮಾಡುವುದೂ ಗಮನ ಕೊಡುವುದೂ ಮುಖ್ಯ ಕರ್ತವ್ಯವಾಗಿದೆ. ಹಿಂದೆ ನನಗೆ ತಿಳಿದ ಮಟ್ಟಿಗೆ ಈ ವ್ಯವಸಾಯದ ಇಲಾಖೆಯವರು ಗೊಬ್ಬರ ಮಾಡುವುದು ಗುಳ ಮುಂತಾದುವನ್ನು ಮಾರುವುದು ಇದೇ ಕೆಲಸ ಮಾಡುತಿದ್ದರು. ರೈತ ಹಿಂದೆ ಏನು ಬೆಳೆಯುತ್ತಿದ್ದ ಈಗ ಏನು ಬೆಳೆಯುತ್ತಿದ್ದಾನೆ ಎಂಬ ಬಗ್ಗೆ ಹಳ್ಳಿಗಳಿಗೆ ಹೋಗಿ, ರೈತರಲ್ಲಿ ವಿಚಾರಿಸು, ವ್ಯವಸಾಯ ಕ್ರಮದಲ್ಲಿರುವ ದೋಷ ದೋಷಗಳೇನು, ಅವುಗಳನ್ನು ಹೇಗೆ ನಿವಾರಿಸುವುದು, ಎಂಬ ಬಗ್ಗೆ ತಿಳಿವಳಿಕೆ ಕೊಡುವುದು ಮುಂತಾದ ಕೆಲಸಗಳನ್ನು ಖಂಡಿತವಾಗಿಯೂ ವ್ಯವಸಾಯ ಇಲಾಖೆಯವರು ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ಮುಖ್ಯವಾಗಿ ಈ ಆಹಾರ ಸಮಸ್ಯೆ ಬಗೆಹರಿಯಬೇಕಾದರೆ, ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಫೋರ್ಡ್ ಫೌಂಡೇಷನ್ನಿನವರು ಮಾಡಿರುವ ಏರ್ಪಾಡಿ

ನಲ್ಲಿ ಪಾಶ್ಚಿಮಾತ್ಯ ದೇಶಗಳಿಂದ ಬಂದಿರುವವರು ಪ್ರತಿ ಯೊಬ್ಬ ರೈತರಲ್ಲೂ ಹೋಗಿ ಈ ದೇಶದ ಜನ ಯಾವ ರೀತಿ ವ್ಯವಸಾಯ ಮಾಡುತ್ತಾರೆಂಬುದನ್ನು ತಿಳಿಯಲು ಅವರ ಜೊತೆಯಲ್ಲೇ ಕೆಲಸ ಮಾಡಿ, ಮುಂದೆ ವ್ಯವ ಸಾಯವನ್ನು ಯಾವ ರೀತಿ ಅಭಿವೃದ್ಧಿಗೆ ತರಬೇಕೆಂಬು ದನ್ನು ಕಂಡು ಹಿಡಿಯಲು ಪ್ರಚಾರ ಮಾಡಲು ಯಾವ ರೀತಿ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೋ ಅದೇ ರೀತಿ ನಮ್ಮ ವ್ಯವಸಾಯ ಇಲಾಖೆಯವರೂ ಕೂಡ ಹಳ್ಳಿಯ ರೈತರೊಡನೆ ಬೆರೆತು ಕೆಲಸಮಾಡಿ ಹೆಚ್ಚು ಬೆಳೆಯುವುದಕ್ಕೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪ್ರಯತ್ನ ಪಡಬೇಕು. ಎಕರೆಗೆ ಐದು ಪಲ್ಲ ಬೆಳೆಯುವ ಕಡೆ ಹತ್ತು ಪಲ್ಲ ಬೆಳೆಯಲು ಪ್ರಯತ್ನ ಪಡಬೇಕು. ಇದು ಬಿಟ್ಟು ಬರಿಸಿ ಗೊಬ್ಬರ ಮತ್ತು ಗುಳ ಮಾರಾಟಮಾ ಡುವ ಇಂಥ ವ್ಯವಸಾಯ ಇಲಾಖೆಯನ್ನಿಟ್ಟುಕೊಂಡು ಖಂಡಿತ ಹೆಚ್ಚು ಆಹಾರ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಸರ್ಕಾರದವರು ಈ ವಿಷಯದ ಕಡೆ ಹೆಚ್ಚು ಗಮನ ಕೊಟ್ಟು ಸೂಕ್ತ ಕಾರ್ಯಕ್ರಮ ಕೈಕೊಳ್ಳ ಬೇಕು. ಹಿಂದಿನ ಸರ್ಕಾರಗಳು ಮಾಡುತ್ತಿದ್ದುದನ್ನೇ ಈಗಲೂ ಅಧ್ಯಯನಮಾಡಿಕೊಂಡು ಅದೇ ರೀತಿ ಕೆಲಸ ಮಾಡಬಾರದು. ಅದನ್ನು ಬದಲಾವಣೆ ಮಾಡಬೇಕು. ಈಗಿನ ಕಾಲದಲ್ಲಿ ನಿಜವಾಗಿಯೂ ಸರ್ಕಾರ ಜನರಿಗೆ ಜವಾಬ್ದಾರಿಯಾಗಿರಬೇಕು. ಜನರಿಗೆ ಆಹಾರ ಮತ್ತು ಬಟ್ಟೆಯನ್ನೊದಗಿಸುವ ಜವಾಬ್ದಾರಿ ಸರ್ಕಾರದ್ದು ಎಂಬುದನ್ನು ಕಾರ್ಯರೂಪಕ್ಕೆ ತರಬೇಕೆಂಬ ಮನಸ್ಸು ಮಾಡಿ ಕೆಲಸಮಾಡಿದರೆ ನಿಜವಾಗಿ ಆಹಾರವನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ.

ಸ್ವಾಮಿ, ದಾವಣಗೆರೆ, ಬೆಂಗಳೂರು ಮತ್ತು ಕೋ ಲಾರ ಚಿನ್ನದ ಗಣಿ, ಈ ಮೂರು ಕಡೆ ಮಾತ್ರ ಸರ್ಕಾರ ಆಹಾರವನ್ನೊದಗಿಸಬೇಕೆಂದು ಹೇಳುತ್ತಿದ್ದೀರಿ. ಈ ಮೂರು ಪ್ರದೇಶಗಳಲ್ಲಿ ಕೈಗಾರಿಕೆ ಕಾರ್ಖಾನೆಗಳಿವೆ, ಅಲ್ಲಿ ಕೆಲಸ ಮಾಡುವ ಜನರು ಅಂದರೆ ಕೂಲಿಗಾರ ರಿದ್ದಾರೆ. ಆದ್ದರಿಂದ ಅಲ್ಲಿಗೆ ಒದಗಿಸಬೇಕೆಂಬುದು ಸರ್ಕಾರದ ಮತ್ತು ನಮ್ಮ ವಾದ. ಆದರೆ, ನಮ್ಮೆಲ್ಲ ರಿಗೂ ತಿಳಿದಿರುವಂತೆ ಗ್ರಾಮಾಂತರಗಳಲ್ಲಿ ಹೆಚ್ಚು ಜನರು ವ್ಯವಸಾಯ ಕೂಲಿಗಾರರಿದ್ದಾರೆ. ಅವರಿಗೆ ಆಹಾರ ವನ್ನೊದಗಿಸಲು ಏನು ಸಹಾಯ ಮಾಡುತ್ತಿದ್ದೇವೆ, ಏನು ಜವಾಬ್ದಾರಿ ಹೊತ್ತಿದ್ದೇವೆ ಎಂಬುದನ್ನು ಯೋ ಚಿಸಬೇಕು. ಕೈಗಾರಿಕೆ ಕ್ಷೇತ್ರಗಳಲ್ಲಿರುವ ಕೂಲಿಗಾರ ರಿಗೆ ಆಹಾರವನ್ನೊದಗಿಸುವುದು ಮುಖ್ಯವಾದ ಕರ್ತವ್ಯ. ಏಕೆಂದರೆ, ಹಳ್ಳಿಗಳಲ್ಲಿ ಬೆಳೆಯುವುದರಿಂದ, ಅಲ್ಲಿ ಹೇಗಾ ದರೂ ಅವರು ಧಾನ್ಯವನ್ನು ಪಡೆಯಬಹುದು. ಕೈಗಾ ರಿಕೆ ಕ್ಷೇತ್ರಗಳಿರುವ ಈ ಸ್ಥಳಗಳಿಗೆ ಯಾವ ರೀತಿ ಆಹಾರ ವನ್ನೊದಗಿಸಬೇಕೆಂಬ ವಿಚಾರದಲ್ಲಿ ನನ್ನದೊಂದು ಸಲಹೆಯಿದೆ. ಸರ್ಕಾರದವರು ಒಂದು ದರವನ್ನು ಗೊತ್ತುಮಾಡಿ ಕೊಂಡುಕೊಳ್ಳಿ. ಕೈಗಾರಿಕೆ ಕಾರ್ಖಾನೆ ಗಳಿಗೆ ಬೇಕಾದಷ್ಟು ಲಾಭ ಬರುತ್ತದೆ, ಮಿಲ್ಲುಗಳವರು ಕೂಲಿಗಾರರ ಮೂಲಕ ಕೋಟ್ಯಾಂತರ ರೂಪಾಯಿ ಲಾಭ ಪಡೆಯುತ್ತಾರೆ. ಆದಕಾರಣ ಅವರಿಂದ ಸಬ್ ಸಿಡಿ ತೆಗೆದುಕೊಂಡು ಸರ್ಕಾರದವರು ಅವರಿಗೆ ಆಹಾರ ವನ್ನೊದಗಿಸಲಿ. ಅದು ಬಿಟ್ಟು ಈ ಮೂರು ಪ್ರದೇಶ ಗಳಿಗೆ ಆಹಾರವನ್ನೊದಗಿಸಲು ಒಂದು ಕೋಟಿ ರೂಪಾ ಯನ್ನು ಖರ್ಚು ಮಾಡಿ ಒದಗಿಸುವುದು ಬಹಳ ಅನ್ಯಾಯ ವೆಂದು ನನ್ನ ಭಾವನೆ. ವ್ಯವಸಾಯ ಎನ್ನುವುದೂ ಒಂದು ಕೈಗಾರಿಕೆ. ವ್ಯವಸಾಯ ಕ್ಷೇತ್ರವೂ ಒಂದು ರೀತಿಯ ಕೈಗಾರಿಕೆ ಕ್ಷೇತ್ರ. ವ್ಯವಸಾಯಗಾರ ವರ್ಷದ ಹನ್ನೆರಡು ತಿಂಗಳೂ ಅವನ ಹೆಂಡತಿ ಮಕ್ಕಳು ಮರಿ ಗಳೊಡನೆ ಕಷ್ಟಪಟ್ಟು ಕೆಲಸಮಾಡಿ ಮಳೆ, ಗಾಳಿ, ಬಿಸಿಲೆನ್ನದೆ ದುಡಿದು ಬೆಳೆಯುತ್ತಾನೆ. ಈ ದೃಷ್ಟಿ ಯಿಂದ, ಸರ್ಕಾರದವರು ಈಗ ಯೋಚಿಸುತ್ತಿರುವ ದಾರಿ ಅಷ್ಟು ಸರಿಯಲ್ಲ.

ಬೊಂಬಾಯಿ, ಅಹಮದಾಬಾದು ಮುಂತಾದಪಟ್ಟಣ ಗಳಲ್ಲಿ ದೊಡ್ಡ ದೊಡ್ಡ ಮಿಲ್ಲುಗಳವರು ತಯಾರು ಮಾ ಡುವ ಬಟ್ಟೆಗೆ ಗಜಕ್ಕೆ ಇಷ್ಟು ಬೆಲೆ ಎಂದು ಗೊತ್ತುಮಾಡ ಬೇಕಾದರೆ, ಅದನ್ನು ಉತ್ಪತ್ತಿಮಾಡಬೇಕಾದ ಕೂಲಿ, ಬಂಡವಾಳದ ಮೇಲೆ ಲಾಭ ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡು ಸೇರಿಸಿ ದರವನ್ನು ನಿಗದಿ ಮಾಡಿ, ಬಟ್ಟೆ ಯನ್ನು ಮಾರಾಟ ಮಾಡುತ್ತಾರೆ. ಆ ಕೂಲಿಗಾರರಿಗೆ ಕೊಡುವ ಕೂಲಿ ಎಂಟಾಣೆ, ಒಂದು ರೂಪಾಯಿ. ರೈತ ಬೆಳೆಯತಕ್ಕ ದವಸಕ್ಕೆ ಈ ರೀತಿ ಬೆಲೆ ಗೊತ್ತುಮಾಡುವು ದಿಲ್ಲ. ಆದುದರಿಂದ ನಾನು ಈ ದಿವಸ ಮಾನ್ಯ ಸದಸ್ಯ ರಲ್ಲಿಯೂ ಸರ್ಕಾರದವರಲ್ಲಿಯೂ ಬಿನ್ನಹ ಮಾಡುವು ದಿಷ್ಟು: ವ್ಯವಸಾಯ ಮಾಡತಕ್ಕವನು ಒಂದು ಎಕರೆಗೆ ಏನು ಫಸಲು ಬೆಳೆಯುತ್ತಾನೆ, ಏನು ಕೂಲಿ ಕೊಡು ತ್ತಾನೆ, ತಾನು ಎಷ್ಟು ಕೆಲಸ ಮಾಡುತ್ತಾನೆ, ಎಷ್ಟು ದುಡಿಯುತ್ತಾನೆ ಎನ್ನುವುದೆಲ್ಲವನ್ನೂ ನೋಡಿ ದವಸದ ದರವನ್ನು ಗೊತ್ತುಮಾಡಿ. ಹಾಗಿಲ್ಲದೆ, 15 ರೂಪಾ ಯಿಗೆ ಕೊಡಿ, 20 ರೂಪಾಯಿಗೆ ಕೊಡಿ ಎಂದು ಅವರನ್ನು ಕೇಳುವುದು ನ್ಯಾಯವಲ್ಲ. ವ್ಯವಸಾಯ ಕ್ಷೇತ್ರದಲ್ಲಿ ಕೂಲಿಗಾರರು ಸರಿಯಾಗಿ organise ಆಗಿಲ್ಲ. ಆದಕಾ ರಣ ನೀವು ಹೇಳಿದ ದರಕ್ಕೆ ಅವರು ಕೊಡಬೇಕೆಂದು ಕೇಳುವುದು ಸರಿಯಲ್ಲ. ಆಹಾರ ಉತ್ಪತ್ತಿ ಹೆಚ್ಚಬೇಕಾ ದರೆ, ನಿಜವಾಗಿ ವ್ಯವಸಾಯಗಾರರಿಗೆ ಹೆಚ್ಚು ಪ್ರೋ ತ್ಸಾಹ ಕೊಡಬೇಕು. ವ್ಯವಸಾಯ ಕೂಲಿಗಾರರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು.

ಇನ್ನೊಂದು ವಿಷಯ. ಒಬ್ಬ ವ್ಯಾಪಾರಿಗಾರನಲ್ಲಿ ಒಂದು ಸಾವಿರ ರೂಪಾಯಿ ಬಂಡವಾಳವಿದ್ದರೆ, ಅವನು ಒಂದು ಲಕ್ಷ ರೂಪಾಯಿ ವ್ಯಾಪಾರ ಮಾಡುತ್ತಾನೆ. ಏಕೆಂದರೆ, ಅವನಿಗೆ ಬ್ಯಾಂಕುಗಳಲ್ಲಿ ಸುಲಭವಾಗಿ ಸಾಲ ಸಿಕ್ಕುತ್ತದೆ. ಅದೇ ವ್ಯವಸಾಯಗಾರನಿಗೆ ಒಂದು ಸಾವಿರ ರೂಪಾಯಿ ಬೇಕೆಂದರೆ, ಅವನು ದಳ್ಳಾಳಿ ಮಂಡಿಯವರ ಹತ್ತಿರ ಹೋಗಿ ಬೇಕಾದಷ್ಟು ಕಪ್ಪ ಪಡಬೇಕು, ಅಷ್ಟು ಹಣ ಸಾಲ ಪಡೆಯಬೇಕಾದರೆ. ಮೈಸೂರು ಬ್ಯಾಂಕು ಮುಂತಾದ ಬ್ಯಾಂಕುಗಳು ವ್ಯಾಪಾರಸ್ಥರಿಗೆ ಅನುಕೂಲ ಮಾಡಿರುವ ಹಾಗೆ ವ್ಯವ ಸಾಯಗಾರರಿಗೆ ಅನುಕೂಲವನ್ನೊದಗಿಸಲು ವ್ಯವಸಾ ಯದ ಬ್ಯಾಂಕುಗಳನ್ನೇರ್ಪಾಡು ಮಾಡಿ, ಅವರಿಗೆ ಸಾಲಭ್ಯ ಸಿಕ್ಕುವಂತೆ ಮಾಡಿದರೆ ಹೆಚ್ಚು ಬೆಳೆ ಬೆಳೆಯು ವುದಕ್ಕೆ ಅವಕಾಶವಾಗುತ್ತದೆ. ಇಂಥ ಯಾವ ಅನು ಕೂಲಗಳನ್ನೂ ವ್ಯವಸಾಯಗಾರರಿಗೆ ಮಾಡದೆ ದವಸ ವನ್ನು ಹಳ್ಳಿಗಳಿಂದ ವಸೂಲು ಮಾಡಬೇಕು, ಅದನ್ನು ಮಿಕ್ಕವರಿಗೆ ಹಂಚಬೇಕು ಎಂದರೆ, ಅದು ಅನ್ಯಾಯ ವೆಂದು ನಾನು ಬಿನ್ನೈಸುತ್ತೇನೆ.

ಎರಡನೆಯದಾಗಿ, ಭೂಕಂದಾಯದಿಂದ ಸರ್ಕಾರಕ್ಕೆ ಒಂದು ಕೋಟಿ ನಲವತ್ತು ಲಕ್ಷ ರೂಪಾಯಿ ವಸೂರಾ ಗುತ್ತಿದೆ. ಈ ಕಂದಾಯವನ್ನು ಹಣದ ರೂಪದಲ್ಲಿ ವಸೂಲು ಮಾಡುವುದಕ್ಕೆ ಬದಲು ಕಾಳನ್ನು ವಸೂಲು ಮಾಡಿದರೆ ಖಂಡಿತವಾಗಿಯೂ ಹೆಚ್ಚು ಪ್ರಯೋಜನವಾ ಗುತ್ತದೆ. ಇದರಿಂದ ಈ ಮೂರು ಪ್ರದೇಶಗಳಿಗೆ ಆಹಾರವನ್ನೊದಗಿಸಲು ಸಹಾಯವಾಗುತ್ತದೆ. ಅಲ್ಲದೆ ಕೇಂದ್ರ ಸರ್ಕಾರ ಇಂಥ ದೊಡ್ಡ ಪಟ್ಟಣಗಳಿಗೆ ಧಾನ್ಯ ವನ್ನೊದಗಿಸುವುದರಿಂದಲೂ ಅನುಕೂಲವಾಗುತ್ತದೆ. ಈ ಮಾರ್ಗಗಳಿಂದ ಈ ಆಹಾರ ಸಮಸ್ಯೆಯನ್ನು ಜಾಗ್ರತೆ

(ಶ್ರೀ ಟಿ. ಹನುಮಯ್ಯ.)

ಬಗೆಹರಿಸಲು ಸಾಧ್ಯವಾಗುತ್ತದೆಂದು ಹೇಳಿ ನನ್ನ ಭಾಷಣವನ್ನು ಪೂರೈಸುತ್ತೇನೆ.

Mr. SPEAKER.—May I know what time the Hon'ble Minister would require to reply ?

Sri H. SIDDAVEERAPPA.—I require about half an hour.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಧ್ಯಕ್ಷರಲ್ಲಿ ನನ್ನ ದೊಂದು ವಿನಂತಿ. ಈ ಸಂದರ್ಭದಲ್ಲಿ ಮಾಡುವ ಭಾಷಣಗಳು ಬಡ್ಜೆಟ್ ಭಾಷಣಗಳಾಗುವುದಕ್ಕಿಂತ, ಸಭೆಯ ಮುಂದಿರುವ ವಿಷಯದ ಮೇಲೆ ಮಾತ್ರ ಮಾತನಾಡುವುದರಿಂದ ಕಾಲ ಉಳಿಯುತ್ತದೆ.

Mr. SPEAKER.—It is left to the Hon'ble Members. I cannot object to every sentence of their's.

*ಶ್ರೀ ಎಂ. ಸಿ. ಆಂಜನೇಯರೆಡ್ಡಿ (ಚಿಂತಾಮಣಿ).—ಸ್ವಾಮಿ, ಈ ದಿವಸ ನಮ್ಮೆದುರಿನಲ್ಲಿರುವ ಆಹಾರ ನೀತಿಯ ವಿಷಯದಲ್ಲಿ ಒಂದೆರಡು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಕಂಟ್ರೋಲನ್ನು ತೆಗೆಯಬೇಕೆ ಫ್ರೊಕ್ಯೂರ್‌ಮೆಂಟ್ ಮಾಡಬೇಕೆ ಅಥವಾ ಬೇಡವೆ ಎಂಬ ವಿಚಾರದಲ್ಲಿ ನನ್ನ ಆಶಯವನ್ನು ಸ್ವಲ್ಪ ಮಟ್ಟಿಗೆ ಸಭೆಯ ಗಮನಕ್ಕೆ ತರಬೇಕೆಂಬುದು ನನ್ನ ಉದ್ದೇಶ. ಕಂಟ್ರೋಲ್ ಹೋಗುವವರೆಗೆ ದೇಶದಲ್ಲಿ ನೀತಿ ಬೆಳೆಯುವುದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಈ ಅನೀತಿ ದೇಶದಲ್ಲಿ ಬೆಳೆಯದೇ ಇರುವಂತೆ ಮಾಡುವುದು ಸರ್ಕಾರದ ಮೇಲೆ ಬಿದ್ದಿರುವ ಜವಾಬ್ದಾರಿ. ಆಹಾರದ ವಿಚಾರದಲ್ಲಿ ಯಾವ ಮನುಷ್ಯನಾಗಲಿ, ದೊಡ್ಡ ಮನುಷ್ಯನಿಂದ ಹಿಡಿದು ಸಣ್ಣ ವ್ಯಕ್ತಿಯವರೆಗೂ ಆಹಾರ ನೀತಿಗನುಸಾರವಾಗಿ ನಡೆಯುತ್ತಿಲ್ಲವೆಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಈಗ ನಮ್ಮ ಸರ್ಕಾರದವರು ಈ ಆಹಾರ ನೀತಿಯನ್ನು ಸಭೆಯ ಮುಂದಿಟ್ಟು, ಸಭೆಯ ಅಭಿಪ್ರಾಯದಂತೆ ತೀರ್ಮಾನಕ್ಕೆ ಬರುತ್ತೇವೆಂದು ಹೇಳಿ ಅವರಿಗಿರುವ ಜವಾಬ್ದಾರಿಯನ್ನು ನಮ್ಮ ಮೇಲೆ ಹಾಕಿದ್ದಾರೆ. ಆದಕಾರಣ ಸಭೆಯವರು ಈ ವಿಚಾರದಲ್ಲಿ ದೀರ್ಘವಾಗಿ ಯೋಚನೆಮಾಡಿ ನಿರ್ಧರಮಾಡಬೇಕೆಂದು ನನ್ನ ಅಭಿಪ್ರಾಯ.

ನಿಜವಾಗಿಯೂ ಈ ಕಂಟ್ರೋಲಿನಿಂದ ಕೇವಲ ಮೂರು ಪಟ್ಟಣಗಳಿಗೆ ಅನುಕೂಲವಾಗುತ್ತಿದೆಯೇ ಹೊರತು, ಖಂಡಿತವಾಗಿ ರೈತರಿಗೂ ಮತ್ತು ಇತರ ಜನರಿಗೂ ಅನುಕೂಲವಿಲ್ಲ. ಅನೇಕ ತೊಂದರೆಗಳುಂಟಾಗಿವೆ. ಈ ಮೂರು ಪಟ್ಟಣಗಳಿಗಾಗಿ ಈ ಕಂಟ್ರೋಲ್ ಇಟ್ಟುಕೊಂಡು ಇದುವರೆಗೆ ಡಿಪೋಗಳ ಮೂಲಕ ಆಹಾರವನ್ನು ಹಂಚುತ್ತಿದ್ದಾರೆ. ಇದರಿಂದ ಹಳ್ಳಿಗಾಡಿನ ಕೂಲಿಯವರಿಗೂ ರೈತರಿಗೂ ಏನೂ ಸಹಾಯವಾಗುತ್ತಿಲ್ಲ. ಹಳ್ಳಿಗಾಡಿನಲ್ಲಿ ಡಿಪೋಗಳನ್ನೇರ್ಪಡುಮಾಡಿದ್ದರೂ ಕೂಡ ಐದಾರು ಮೈಲಿ ದೂರದಿಂದ ಬರಬೇಕೆಂದರೆ ಎಷ್ಟೋ ಕಷ್ಟ. ಹಾಗೆ ಬಂದರೂ ಅವರಿಗಿರುವ ಅವಕಾಶ ಎಷ್ಟೆಂದರೆ, ಹಳ್ಳಿಗಳಲ್ಲಿ 16 ಔನ್ಸ್ ಕೊಡಬೇಕೆಂದಿದ್ದರೆ, ಅವರಿಗೆ ಸಿಕ್ಕುವುದು 3 ಔನ್ಸ್ ಅಥವಾ 6 ಔನ್ಸು. ಆದರೂ ಒಂದು ಕುಟುಂಬಕ್ಕೆ ಒಂದು ರೂಪಾಯಿನ ದವಸವನ್ನು ತರುವುದಕ್ಕಾಗಿ ಐದಾರು ಮೈಲಿ ದೂರ ಹೋಗಿ, ಒಂದು ದಿವಸವೆಲ್ಲಾ ಕಾದು ಕುಳಿತಿರಬೇಕು. ಎಷ್ಟೋ ಸಾರಿ ಹೀಗೆ ಕಾದು ಸಿಕ್ಕದೆ ಪಾಪಸು ಬಂದರೆ ಅವೊತ್ತಿನ ಕೂಲಿ ಒಂದು ಅಥವಾ ಒಂದೂವರೆ ರೂಪಾಯಿ ಹೋಗುತ್ತದೆ. ಹೀಗಿದ್ದರೂ ಕೂಡ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ, ನಮ್ಮ ದೇಶದ ರೈತರು ಕಷ್ಟಪಟ್ಟು ಸಂಪಾದಿಸಿಕೊಟ್ಟ ಹಣವನ್ನು ಕೊಟ್ಟು ಪರದೇಶಗಳಿಂದ ಆಹಾರಧಾನ್ಯಗಳನ್ನು ತಂದು ಕೆಲವು ಪಟ್ಟಣಿಗರ ಅನುಕೂಲಕ್ಕಾಗಿ ಹಂಚುತ್ತಿರುವುದು ಹಣವನ್ನು ದುರ್ವಿನಿಯೋಗ ಮಾಡಿದಂತಾಗುತ್ತದೆ. ಅನೇಕ ಸಲ ಸರ್ಕಾರದಲ್ಲಿಯೂ ಮುಖ್ಯ ನಾಯಕರಲ್ಲಿಯೂ ಈ ಕಂಟ್ರೋಲ್ ತೆಗೆಯಬೇಕೆಂಬ ವಿಷಯದಲ್ಲಿ ಒತ್ತಾಯ ಬರುತ್ತಿದ್ದರೂ ಅವರು ಏನೋ ಒಂದು ಗಾಬರಿಯನ್ನಿಟ್ಟುಕೊಂಡಿದ್ದಾರೆ. ದೇಶಕ್ಕೆ ಆಹಾರ ಸಾಕಾಗುವುದಿಲ್ಲ, ಪರದೇಶಗಳಿಂದ ತರಬೇಕಾಗಿದೆ, ಬಹಳ ಕಷ್ಟ, ಎಂದು ಹೇಳುತ್ತಿದ್ದಾರೆ. ಎಲ್ಲಿಯವರೆಗೆ ಕಂಟ್ರೋಲನ್ನು ಮುಂದುವರಿಸಿಕೊಂಡು ಹೋಗುತ್ತಿರುತ್ತಾರೋ ಅಲ್ಲಿಯವರೆಗೆ ದವಸ ಹೆಚ್ಚುವುದಕ್ಕೆ ಅವಕಾಶವಿಲ್ಲ ನಮ್ಮ ದೇಶದಲ್ಲಿ. ಇದಕ್ಕೆ ಕಾರಣವಿಷ್ಟೆ. ಸಾಮಾನ್ಯವಾಗಿ, ಈ ಕಂಟ್ರೋಲಿನಿಂದ ಹಿಂದೆಲ್ಲ ಕಷ್ಟಪಟ್ಟು ಪಟ್ಟು ಸಾಕಾಗಿ ತಮಗೆಷ್ಟು ಬೇಕೋ ಅಷ್ಟು ಮಾತ್ರ ಬೆಳೆಯೋಣ,ಹೆಚ್ಚು ಬೆಳೆದರೆ ಸರ್ಕಾರದಿಂದ ಹಿಂಸೆ ಪಡಬೇಕು, ರಾಛಭವೂ ಇಲ್ಲ ಎಂಬ ಮನೋಧರ್ಮ ರೈತರಿಗೆ ಬಂದಿದೆ. ಹೀಗಾಗಿ ಮೂವತ್ತೈದರೆಯಲ್ಲಿ ಆಹಾರ ಬೆಳೆಯುತ್ತಿದ್ದವನು ಕೇವಲ ಎಂಟು ಹತ್ತು ಎಕರೆಯಲ್ಲಿ ರಾಗಿ ಹಾಕಿ ಮಿಕ್ಕ ಜಮೀನಿನಲ್ಲಿ ಕಡಲೇಕಾಯಿ ಹಾಕುತ್ತಿದ್ದಾನೆ. ಒಂದೆಕರೆಗೆ ನೂರು ಮಣ ಕಡಲೆಕಾಯಿ ಆದರೆ ಐನೂರು ರೂಪಾಯಿ ವರೆಗೆ ಆದಾಯ ಬರುತ್ತದೆ. ಅದೇ ರಾಗಿ ಹಾಕಿದರೆ, ಸರ್ಕಾರದ ಲೆಕ್ಕವನ್ನೇ ತೆಗೆದುಕೊಂಡರೂ, ಒಂದು ರೂಪಾಯಿ ಬೆಳೆಯಾದರೆ, ಎಕರೆಗೆ ಐದು ಪಲ್ಲ ಬೆಳೆಯಬಹುದೆಂದು ಲೆಕ್ಕಹಾಕಿದ್ದಾರೆ. ಈ ರಾಗಿಗೆ ಕೊಡುವ ಬೆಲೆಯಾದರೂ ಎಷ್ಟು ? ಪಲ್ಲಕ್ಕೆ 30 ರೂಪಾಯಿ ಮಾಡಿದರೆ ಅದೇ ಜಾಸ್ತಿ. ಹಣದ ದೃಷ್ಟಿಯಿಂದ ಹೇಳುವುದಾದರೆ, ಪಲ್ಲಕ್ಕೆ 30 ರೂಪಾಯಿಗಳಂತೆ ಇಟ್ಟುಕೊಂಡರೂ 5 ಪಲ್ಲಕ್ಕೆ ಎಷ್ಟು ಹಣ ಬರುತ್ತದೆಯೋ ಅದರ ಎರಡರಷ್ಟಕ್ಕಿಂತ ಹೆಚ್ಚಾಗಿ ಕಡಲೇಕಾಯಿಯಿಂದ ಆದಾಯ ಬಂದರೆ, ಯಾರು ತಾನೆ ರಾಗಿ ಬೆಳೆಯುವುದಕ್ಕೆ ಪ್ರಯತ್ನಮಾಡುತ್ತಾರೆ ! ನಾನೂ ಒಬ್ಬ ರೈತ. ಐದು ಪಲ್ಲ ರಾಗಿ ಬೆಳೆಯಬೇಕಾದರೆ 60—70 ರೂಪಾಯಿ ಖರ್ಚು ಬೀಳುತ್ತದೆಂದು ನನ್ನ ಅನುಭವದಿಂದ ಹೇಳುತ್ತೇನೆ. ಇಷ್ಟು ಕಡಮೆಯಾದ ಆದಾಯದಿಂದ ರೈತ ಅವನ ಸಂಸಾರವನ್ನು ನಡೆಸುವುದು ಬಹಳ ಕಷ್ಟ.

ಅನೇಕ ಸಂದರ್ಭಗಳಲ್ಲಿ ಸರ್ಕಾರದಿಂದ ರೈತನಿಗೆ ಸಹಾಯ ನೇರವಾಗಿ ದೊರೆಯುವುದಿಲ್ಲ. ರೈತರು ಅನೇಕ ವಿಧವಾದ ಕಷ್ಟಗಳಿಗೆ ಸಿಕ್ಕಿ ನರಳುತ್ತಿದ್ದಾರೆ. ಅನೇಕರು ಸಾಲಕಾಗಿ ತಿರುಗುತ್ತಾರೆ. ಸರ್ಕಾರದವರು ವ್ಯವಸಾಯಗಾರರಿಗಾಗಿ ಕಲ್ಪಿಸಿರುವ ಸೌಲಭ್ಯ ಅವರಿಗೆ ಸುಲಭವಾಗಿ ದೊರೆಯುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಡಿಸ್ಟ್ರಿಕ್ಟುಗಳಲ್ಲಿ ರೈತರ ಜಮೀನು ಆಧಾರ ಮಾಡಿಕೊಂಡು ಕೇವಲ ಇನ್ನೂರು ಮುನ್ನೂರು ರೂಪಾಯಿ ಸಾಲಕೊಡುವುದಕ್ಕೂ ಸರ್ಕಾರದವರು ಹಿಂತೆಗೆದಿದ್ದಾರೆ. ಚಿಂತಾಮಣಿ ತಾಲ್ಲೂಕಿನಲ್ಲಿ ಎರಡು ಲಕ್ಷ ರೂಪಾಯಿ ಖರ್ಚಾಗಿದೆಯೆಂದು ಹೇಳಿದರು ; ಅದರಿಂದ ರೈತರಿಗೆ ಎಷ್ಟುಮಟ್ಟಿಗೆ ಅನುಕೂಲವಾಗಿರಬಹುದೆಂಬುದನ್ನು ಊಹಿಸಬಹುದು. ಈ ಕಾರಣದಿಂದ ಅನೇಕ ರೈತರು ಸಾಹುಕಾರರುಗಳಲ್ಲಿ ಹೆಚ್ಚು ಬಡ್ಡಿ ಕೊಟ್ಟು ಸಾಲಗಳನ್ನು ತೆಗೆದುಕೊಂಡಿದ್ದಾರೆ.

Mr. SPEAKER.—The Hon'ble Member has one minute more.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಒಟ್ಟಿನಲ್ಲಿ ರೈತರುಗಾಗುತ್ತಿರುವ ತೊಂದರೆಗಳನ್ನು ಖಂಡಿತವಾಗಿಯೂ ನಿವಾರಣೆಮಾಡಕ್ಕಮ್ಮ ಸರ್ಕಾರದ ಜವಾಬ್ದಾರಿ. ರೈತರೊಂದು ನಿಟ್ಟುಸಿರು ಬಿಟ್ಟರೆ ಸರ್ಕಾರಕ್ಕೂ ಸರ್ಕಾರದ ಸೂತ್ರಗಳನ್ನು ವಹಿಸಿಕೊಂಡಿರುವ ಸೂತ್ರಧಾರಿಗಳಿಗೂ ಒಳ್ಳೆಯದಾಗುವುದಿಲ್ಲವೆಂಬ ಮಾತನ್ನು ಮರೆಯಬಾರದು. ಪಲ್ಲಕ್ಕೆ 30 ರೂಪಾಯಿನಂತೆ ಧಾರಣೆ ಕೊಟ್ಟು ರೈತರಲ್ಲಿಗೇ ಬಂದುಕೊಂಡು ಕೊಳ್ಳುವುದಕ್ಕೆ ಏರ್ಪಾಡುಮಾಡಬೇಕು. ಫೇರ್ ಪ್ರೈಸ್ ಡಿಪೋಗಳ ಮೂಲಕ ವಾರಬೇಕು, ಗಡಿಯ ಪ್ರದೇಶದಲ್ಲಿ ಆಹಾರ ಹೊರಗೆ ಸಾಗದಂತೆ ಹತೋಟಿಯುಂಟುಮಾಡಿ ಕೊಳ್ಳಬೇಕು.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸಭಾಧ್ಯಕ್ಷರೆ, ಇದುವರೆಗಾಗಲೇ ಬಹಳ ಜನ ಸದಸ್ಯರು ಈ ಆಹಾರದ ವಿಷಯದಲ್ಲಿ ಚರ್ಚೆ ಮಾಡಿದ್ದಾರೆ. ಡೀ ಕಂಟ್ರೋಲ್‌ಮಾಡಬೇಕೆಂದು ಹೆಚ್ಚು ಜನರು ವಾದಿಸಿದರು. ನಾನು ಅವರ ಪೈಕಿ ಮೊದಲನೆಯವಳು. ಆದರೆ ಒಂದು ವಿಚಾರವನ್ನು ಮಹನೀಯರು ಗಮನದಲ್ಲಿಟ್ಟುಕೊಳ್ಳಬೇಕು. ನಾವು ಸ್ವಲ್ಪ ಹಿಂದಿರುಗಬೇಕಾಗುತ್ತದೆ. ನಮ್ಮ ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಪ್ರವಾಸ ಬಂದಾಗ ಅಲ್ಲಿ ಎಷ್ಟು ಬರ ಇತ್ತು, ಜನ ಎಷ್ಟು ಕಷ್ಟಪಡುತ್ತಿದ್ದರೆಂದರೆ, ಈ ಸಭೆಯನ್ನು ಇಷ್ಟು ಸುಗಮವಾಗಿ ನಡೆಸುತ್ತೀವೋ ಇಲ್ಲವೋ ಎಂಬುದನ್ನು ಯಾರೂ ಹೇಳುವುದಕ್ಕಾಗುತ್ತಿರಲಿಲ್ಲ, ಅಂಥ ಸ್ಥಿತಿ ಇತ್ತು. ಏಳೂ ಈ ಹೊತ್ತು ದೇವರ ದಯೆಯಿಂದ ಆ ಭಾಗದಲ್ಲಿ ಕುಡಿಯುವುದಕ್ಕೆ ನೀರು ಸಿಕ್ಕುವಂತಾಗಿದೆ. ಆದರೂ ನೀರಿನ ಒಂದು ಬರ ಮಾತ್ರ ತಪ್ಪಿದೆ. ಹಿಂದೆ ಅನಾವೃಷ್ಟಿಯಿತ್ತು, ಈಗ ಅತಿವೃಷ್ಟಿಯಾಗಿದೆ. ನಾನು ನನ್ನ ಜಿಲ್ಲೆಯ ವಿಷಯವನ್ನಲ್ಲ ನಿಜಾಂಶವನ್ನು ಈ ಸಭೆಯು ಮುಂದಿಡದೇಯಿದ್ದರೆ ಕರ್ತವ್ಯರೋಪವಾಗುತ್ತದೆ. ಆದುದರಿಂದ ನಮ್ಮ ಜಿಲ್ಲೆಯ ಪರಿಸ್ಥಿತಿಯನ್ನು ನಾನಾರ್ಯಾರು ಮಾತುಗಳಿಂದ ವಿವರಿಸುತ್ತೇನೆ. ನನ್ನ ಮಾತನ್ನು ಹೆಚ್ಚು ಬೆಳೆಸುವುದಕ್ಕೆ ಇಷ್ಟಪಡುವುದಿಲ್ಲ. ಹಿಂದೆ ಅವರು ಅಲ್ಲಿಗೆ ಬಂದ ಕಾಲದಲ್ಲಿ ರೈತರ ಸ್ಥಿತಿ ಹೇಗಿತ್ತೆಂದರೆ, ಅವರ ಮನೆಯೆರ್ನಾಹುಡುಕಿದರೂ ಎರಡು ಸೇರು ದವಸವಿರಲಲ್ಲ, ಅವರ ಕೈಯಲ್ಲಿ ಏನೂ ಹಣವಿರಲಿಲ್ಲ. ಸರ್ಕಾರದವರು ಈ ಕಷ್ಟ ನಿವಾರಣೆಗಾಗಿ ಅಲ್ಲಿ ಕಾಮಗಾರಿಗಳನ್ನು ತೆಗೆದುಕೊಂಡು ಹಣ ಸಹಾಯ ಮಾಡಿ, ಇತರ ಸಹಾಯಗಳನ್ನೊದಗಿಸದೇ ಯಿದ್ದಿದ್ದರೆ, ಅಲ್ಲಿನ ಜನರಿಗೆ ಎಂಥಾ ಕಷ್ಟಪರಿಸ್ಥಿತಿ ಬರುತ್ತಿತ್ತೋ ಅದನ್ನು ವರ್ಣಿಸುವುದಕ್ಕೆ ಸಾಧ್ಯವಿಲ್ಲ. ನಾವು ಈ ಸಭೆಯ ಸದಸ್ಯರಾಗಿ ಹೊರಗೆ ತರೆ ಎತ್ತಿ ತಿರುಗುವ ಧೈರ್ಯವಂತರೂ ಖಂಡಿತವಾಗಿ ಇರುತ್ತಿರಲಲ್ಲ ಹೀಗಿರುವಾಗ ಒಂದೇ ಸಲಕ್ಕೆ ಬದಲಾವಣೆ ಮಾಡಬೇಕಾದರೆ ಕಷ್ಟ. ನಾಲ್ಕೈದು ವರ್ಷಗಳಿಂದ ಈ ಕಷ್ಟವನ್ನು ಸುಧಾರಿಸಿಕೊಂಡು ಬಂದಿದ್ದೇವೆ. ಒಂದೂವರೆ ಕೋಟಿ ರೂಪಾಯಿ ನಷ್ಟವಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ನಿಜ. ಆದರೆ ಇಷ್ಟು ದಿವಸವೂ ಹೇಗೂ ಅನುಭವಿಸಿಕೊಂಡು ಬಂದಿದ್ದೇವೆ ಇನ್ನೂ ಕೆಲವುದಿವಸ ಸುಧರಿಸಬಾರದೆ? ಮುಂದೆ ದವಸ ನಮ್ಮ ಕೈಗೆ ಬರುವವರೆಗೆ ಸುಧಾರಿಸಬಾರದೆ? ಇಷ್ಟು ದಿವಸ ಕೈ ಸುಟ್ಟುಕೊಂಡಿದ್ದೇವೆ, ಈಗ ಅವಸರಪಟ್ಟು ಮತ್ತೆ ಕೈ ಸುಟ್ಟುಕೊಳ್ಳಬೇಕೆ? ಇನ್ನು ಸ್ವಲ್ಪ ಕಾಲ ಈ ಕಷ್ಟವನ್ನು ಸುಧಾರಿಕೊಂಡು ನಾವು ದಮ್ಮು ಹಿಡಿದು ಕಷ್ಟಬರಲಿ ಸುಖಬರಲಿ ಅನುಭವಿಸೋಣ ಇನ್ನು ಸ್ವಲ್ಪ ಕಾಲ ತಾಳ್ಮೆಯಿಂದ ಸಹನೆಯಿಂದ ನಡೆಮಾಡಿಕೊಂಡು ಬಂದರೆ ಉಳಿಗಾಲವಿದೆ, ಇಲ್ಲದಿದ್ದರೆ ಬಹಳ ಕಷ್ಟಬರುತ್ತದೆ. ದೇಶದಲ್ಲಿ ನಾನು ಕೂಡ ಮಂತ್ರಿಗಳ ಜೊತೆಗೆ ಅನೇಕ ಪ್ರದೇಶಗಳಿಗೆ ಹೋಗಿದ್ದೆ. ಅನೇಕ ಕಡೆ ನಾನಾರ್ಯಾಣೆ ಹೈರು ಕೂಡ ಬಂದಿಲ್ಲ. ಮುಂದೆ ಬೇಸಿಗೆಯಲ್ಲಿ ಗೆದ್ದರೂ ಕೂಡ ಈಗ ಆಗಿರುವ ಏಟನ್ನು ಸುಧಾರಿಸಿಕೊಳ್ಳಬೇಕಾದರೆ ಕನಿಷ್ಟಪಕ್ಷ ಇನ್ನು ಎರಡು ವರ್ಷ ಬೇಕು. ರೈತರಲ್ಲಿ ಜನರಿಗೆ ತಿನ್ನಲು ದವಸವಿಲ್ಲ, ವ್ಯವಸಾಯಕ್ಕೆ ದನಗಳೂ ಇಲ್ಲ. ಏನೋ ಈಚೆಗೆ ಮಳೆಯಾದುದರಿಂದ ಸ್ವಲ್ಪ ಹುಲ್ಲು ನೀರು ಸಿಕ್ಕುತ್ತದೆ. ಇಲ್ಲಿಗೆ ದನಗಳ ಪ್ರಶ್ನೆಯೇನೋ ಮುಗಿಯಿತು. ಆದರೆ ಜನರ ಪ್ರಶ್ನೆ ಇನ್ನೂ ಹಾಗೆಯೇ ಉಳಿದಿದೆ. ಆದುದರಿಂದ ಮುಂದೆ ಫಸಲು ಕೈಗೆ ಬರುವವರೆಗೆ ಬದಲಾವಣೆಮಾಡಬಾರದು. ಅಲ್ಲಿಯವರೆಗೆ ತಡೆಯಬೇಕು. ನಾನು ಒಟ್ಟು ಸಂಸ್ಥಾನದ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಾವೇನೂ ವ್ಯಾಪಾರಸ್ಥರಲ್ಲ, ಲಾಭ ಅಥವಾ ನಷ್ಟದ ದೃಷ್ಟಿಯಿಂದ ಹೇಳುತ್ತಿಲ್ಲ.

ಇನ್ನೊಂದು ಮಾತು ಹೆಳಿದರು, ಲೈಸೆನ್ಸ್ ಪದ್ಧತಿ ಜಾರಿಗೆ ತನ್ನಿ ಎಂದು ಹೇಳಿದರು. ಇದು ಬೇಡ. ಏಕೆಂದರೆ, ದಾವಣಗರೆ ದೊಡ್ಡ ನಗರ. ಲೈಸೆನ್ಸ್ ಏರ್ಪಾಡು ಮಾಡಿದರೆ ಅಲ್ಲಿ ಲೈಸೆನ್ಸ್ ತೆಗೆದುಕೊಂಡವರು ಏನು ಮಾಡುತ್ತಾರೆಂಬುದು ಅನೇಕರಿಗೆ ಗೊತ್ತಿದೆ. ಹಿಂದೆ ಲೈಸೆನ್ಸ್ ತೆಗೆದುಕೊಂಡವರು ಬಂಗಲೆಗಳ ಮೇಲೆ ಬಂಗಲೆಗಳನ್ನು ಕಟ್ಟಿಕೊಂಡರು. ಜನರಿಗೆ ಕಷ್ಟ ತಪ್ಪಲಿಲ್ಲ. ಆದುದರಿಂದ ಈ ವಿಷಯವನ್ನು ಯಾರೂ ಯೋಚನೆ ಕೂಡ ಮಾಡಬೇಡಿ. ಮುಂದಿನ ವರ್ಷ ದವಸ ರೈತನ ಕೈ ಸೇರುವವರೆಗೆ ಈಗಿರುವ ರೀತಿಯಲ್ಲೇ ನಡೆಮಾಡಿಕೊಂಡು ಹೋಗಬೇಕು. ಸರ್ಕಾರದವರೂ ನಾವೆಲ್ಲರೂ ಜನರಿಗೆ ಜವಾಬ್ದಾರರಾಗಿದ್ದೇವೆ. ನಾಳೆ ನಮ್ಮ ಒಂದು ತಪ್ಪು ಹೆಜ್ಜೆಯಿಂದ ಜನಕ್ಕೆ ಕಷ್ಟ ಬಂದು ಅವರು ಕೇಳಿದರೆ ನಾವು ಉತ್ತರ ಹೇಳಬೇಕಾಗುತ್ತದೆ. ಇದನ್ನು ಯೋಚಿಸಬೇಕು. ನಾಳೆ ಜನರು ನಮ್ಮ ಕೈಹಿಡಿದು ನಿಲ್ಲಿಸಿ ಕೇಳುತ್ತಾರೆ. ಪರಿಸ್ಥಿತಿ ಬಹಳ ಕಷ್ಟವಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಎಲ್ಲ ಡೀ ಕಂಟ್ರೋಲ್ ಬೇಡವೆಂದು ನಿಮ್ಮ ಅಭಿಪ್ರಾಯ?

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈ ಮೂರು ನಗರಗಳಲ್ಲಾದರೂ ಕಂಟ್ರೋಲ್ ಇರಬೇಕು. ಜನರಿಗೆ ಇದುವರೆಗೆ ನೆಮ್ಮದಿ ಧೈರ್ಯ ಸಿಕ್ಕಿದೆ. ಅದು ಏಕೆ ಹೋಗಬೇಕು?

ಗೋಧಿಯನ್ನು ರೂಪಾಯಿಗೆ ಮೂರು ಸೇರುಮಾಡಿದರು. ಅವರಿಂದ ಹೆಚ್ಚಾಗಿ ಖರ್ಚಾಯಿತೆಂದು ಹೇಳಿದರು. ನಾನು ಹೇಳುವುದಾದರೆ ಹೆಚ್ಚಿಗೆ ದಾಸ್ತಾನಿತ್ತು, ಮೂರು ಸೇರು ಮಾಡಿದರೂ ಅನೇಕರು ಅದನ್ನು ಕೇಳಲಲ್ಲ. ದವಸ ಹೆಚ್ಚಾಗಿ ಬಂದರೆ, ಡಿಪೋಗಳಲ್ಲಿ ಯಾರೂ ಕೇಳುವುದಿಲ್ಲ. ಆಗ ತನ್ನಷ್ಟಕ್ಕೆ ತಾನೇ ಕಂಟ್ರೋಲ್ ಹೋಗುತ್ತದೆ. ಒಟ್ಟಿನಲ್ಲಿ, ಈಗ ಈ ಮೂರು ಪಟ್ಟಣಗಳಲ್ಲಿ ಇದೇ ರೀತಿ ನಡೆಸಿಕೊಂಡು ಹೋಗಬೇಕು, ಮುಂದೆ ಫಸಲು ಬರುವವರೆಗೆ ಸ್ವಲ್ಪ ತಾಳಬೇಕು ಎಂದು ಹೇಳಿ ನನ್ನ ಭಾಷಣವನ್ನು ಪೂರೈಸುತ್ತೇನೆ.

Mr. SPEAKER.—I will give a chance to Sri T. N. Mudalagiri Gowda provided he stops at 4-30 P.M.

*ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಮಾನ್ಯ ಸಭಾಧ್ಯಕ್ಷರೆ, ಆಹಾರದ ವಿಚಾರದಲ್ಲಿ ಯಾವ ನೀತಿಯನ್ನನುಸರಿಸಬೇಕೆಂಬ ಬಗ್ಗೆ ಈಗ ಈ ಸಭೆಯ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿದೆ. ಏಳೆಂಟು ವರ್ಷಗಳಿಂದ ಯಾವ ಒಂದು ನಿಯಂತ್ರಣವನ್ನು ನಡೆಸಿಕೊಂಡು ಬಂದಿದ್ದೇವೋ ಅದರಿಂದ ಜನರಿಗೆ ಏನೇನು ಕಷ್ಟನಷ್ಟಗಳಾಗಿವೆ, ಇಂದಿನ ದಿವಸ ಯಾವ ಮಾರ್ಗವನ್ನನುಸರಿಸಬೇಕು ಎಂಬ ವಿಚಾರದಲ್ಲಿ ನಾವು ಒಂದು ತೀರ್ಮಾನ ಮಾಡಬೇಕಾಗಿದೆ. ಈ ತೀರ್ಮಾನವನ್ನು ಮಾಡುವಾಗ ಭಾರತ ಸರ್ಕಾರ ಯಾವ ನೀತಿಯನ್ನನುಸರಿಸಬೇಕೆಂದಿದ್ದಾರೆ, ನಮ್ಮ ದೇಶದ ಜನರ ಕಷ್ಟನಷ್ಟಗಳು ಎಷ್ಟುಪಟ್ಟಿಗಿವೆ ಎಂಬುದನ್ನೆಲ್ಲಾ ನಮ್ಮ ದೃಷ್ಟಿಕೋಣದಲ್ಲಿಟ್ಟುಕೊಂಡು ನಾವು ನಿರ್ಧಾರ ಮಾಡಬೇಕಾಗಿದೆ. ಮೊನ್ನೆ ಜೂಕ್ತಿಂಗಳಲ್ಲಿ ನಾವು ಈ ನಿಯಂತ್ರಣವನ್ನು ಸ್ವಲ್ಪ ಸಡಿಲ ಮಾಡಿದ ಕಾಲದಲ್ಲಿ ಹೀಗೆ ಸಡಿಲ ಮಾಡಿದ್ದರಿಂದ ಮಹದುಪಕಾರವಾಯಿತು. ನಮ್ಮ ದೇಶದಲ್ಲಿ ಬೆಳೆಯುವವರೂ ಕೊಂಡುತಿನ್ನುವವರೂ ಸ್ವತಂತ್ರವಾಗಿದ್ದೇವೆ ಎನ್ನುತಕ್ಕ ಒಂದು ಭಾವನೆ ದೇಶದ ಎಲ್ಲ ಮೂಲೆ ಮೂಲೆಗಳಲ್ಲಿಯೂ ಮೂಡಿತು. ಆದರೆ ಪ್ರಕೃತಿ ನಿಯಮದಿಂದ ನಮಗೆ ಈ ಒಂದು ಕಷ್ಟ ಕಂಡುಬಂತು. ಇದು ಬಾರದೇಯಿದ್ದಿದ್ದರೆ ನಿಯಂತ್ರಣವನ್ನು ಸಡಿಲಮಾಡಿದ ನೀತಿಯನ್ನು ಮುಂದುವರಿಸಿಕೊಂಡು ಹೋಗಬಹುದಾಗಿತ್ತು. ದೇಶದಲ್ಲಿ ಸುಭಿಕ್ಷ ಪರಿಸ್ಥಿತಿಯುಂಟಾಗಿ, ಸರಿಯಾಗಿ ಮಳೆಯಾಗಿದ್ದರೆ, ಈ ದಿವಸ ಮಳೆಯಾಗಿ ಉತ್ಪಾಸದಿಂದ ಏನು ನಿರೀಕ್ಷಿಸಿದ್ದೇವೋ ಇದು ಒಂದು ತಿಂಗಳ ಹಿಂದೆ ಆಗಿದ್ದಿದ್ದರೆ, ಈ ಗಾಬರಿಯ ಪರಿಸ್ಥಿತಿಯಲ್ಲಿ ನಾವು ಈ ವಿಷಯವನ್ನು ಯೋಚನೆ ಮಾಡಬೇಕಾಗಿರಲಿಲ್ಲ. ಅಲ್ಲದೆ ಈ ದಿವಸ ಇಡೀ ಸಂಸ್ಥಾನದಲ್ಲಿ ಆಹಾರನಿಯಂತ್ರಣ ಸಡಿಲವಾಗಿದ್ದರೂ ಕೂಡ ಇಷ್ಟು ಯೋಚಿಸಬೇಕಾಗಿರಲಿಲ್ಲ. ಆದರೆ ಸರ್ಕಾರದವರು ಒಂದು ವಿಷಯವನ್ನು ಗಮನಿಸಬೇಕಾಗಿತ್ತು. ಅದೇನೆಂದರೆ, ನಮ್ಮ ದೇಶದಿಂದ ಹೊರಕ್ಕೆ ಎಷ್ಟುದವಸ ಮಾಯವಾಯಿತು, ಇದು ಯಾವ ಸಂದರ್ಭದಲ್ಲಿ ಹೋಯಿತು ಎಂಬುದನ್ನು ಪರೀಕ್ಷಿಸಿ, ಅದನ್ನು ತಡೆದು ಸರಿಯಾದ ಹತೋಟಿಯನ್ನಿಟ್ಟುಕೊಂಡಿದ್ದಿದ್ದರೆ ಇಷ್ಟು ಕಷ್ಟವೂ ಒದಗುತ್ತಿರಲಿಲ್ಲ. ನಮ್ಮ ದೇಶದಲ್ಲಿ free movement ನಿಂದ ಎಷ್ಟು ಹಂಚಿಕೆಯಾಯಿತೋ ಎಷ್ಟು ಅಥವಾ ಅದಕ್ಕಿಂತ ಹೆಚ್ಚಾಗಿ ಹೊರಗೆ ಹೋಯಿತು ಎಂಬ ಭಾವನೆ ದೇಶದಲ್ಲಿ ಮೂಡಿದೆ.....

Sri M. SHANKARALINGE GOWDA.—The Hon'ble Member admits that so much quantity is going out of the State. I do not know what the Hon'ble Minister says.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಆದುದರಿಂದ ಹೊರಗೆ ಹೋಗತಕ್ಕದ್ದನ್ನು ತಪ್ಪಿಸಬೇಕು.

ಶ್ರೀ ಎಸ್. ಗೋಪಾಲಗೌಡ.—ಯಾರು ಸಾಗಿಸುತ್ತಿದ್ದರು ಎಂಬುದನ್ನು ಸ್ವಲ್ಪ ಹೇಳಬೇಕು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈಗ ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಆಹಾರ ಸಂಗ್ರಹ ಮಾಡಬೇಕೆಂಬ ವಿಚಾರದಲ್ಲಿ ಯಾವ ರೀತಿ ಭಿನ್ನಾಭಿಪ್ರಾಯವಿದೆ ಎಂಬುದನ್ನು ಮಾತ್ರ ಹೇಳುತ್ತೇನೆ. ಸಾಮಾನ್ಯವಾಗಿ ಡಿ-ಕಂಟ್ರೋಲ್ ಮಾಡಬೇಕೆಂಬುದೇ ಎಲ್ಲರ ದೃಷ್ಟಿಯಲ್ಲಿರುವುದು. ಆದರೆ ಇದನ್ನು ಈ ಹೊತ್ತೇ ಮಾಡಬೇಕೇ ಅಥವಾ ಇನ್ನು ಮೂರು ದಿವಸಕ್ಕೆ ಮಾಡಬೇಕೆ ಎನ್ನುವುದು ಪ್ರಶ್ನೆ; ಇದನ್ನು ಯೋಚನೆಮಾಡಬೇಕಾಗಿದೆ. ಡಿ-ಕಂಟ್ರೋಲ್ ಮಾಡಬೇಕಾದರೆ ಎಷ್ಟು ದವಸವನ್ನು ಬರಮಾಡಿಕೊಂಡು ಮಾಡಬೇಕೋ ಅಷ್ಟು ಬಂದನಂತರ ಮಾಡಬೇಕೇ ಅಥವಾ ಮುಂಚಿತವಾಗಿಯೇ ಮಾಡಬೇಕೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ಆಹಾರ ಮಂತ್ರಿಗಳ ಸಮ್ಮೇಳನ ಸೇರಿ ಅಲ್ಲಿಗೆ ನಮ್ಮ ಆಹಾರ ಮಂತ್ರಿಗಳು ಹೋಗಿ ಬಂದನಂತರ, ಅಲ್ಲಿ ಯಾವ ತೀರ್ಮಾನಕ್ಕೆ ಬರುತ್ತಾರೋ, ಅಲ್ಲಿ ಯಾವ ನೀತಿನಿಯಮಗಳು ಪ್ರತಿಪಾದನೆಯಾಗುತ್ತವೆಯೋ ಅದರ ಮೇಲೆ ಬಹುಶಃ ಈ ಪ್ರಶ್ನೆ ಅವಲಂಬಿಸಿದೆ ಎಂದು ನಾನು ಭಾವಿಸುತ್ತೇನೆ.

ಒಟ್ಟನಲ್ಲಿ ಯೋಚನೆಮಾಡುವಾಗ, ಕಳೆದ ಏಳೆಂಟು ವರ್ಷಗಳಿಂದಲೂ ಪ್ರೊಕ್ಯೂರ್‌ಮೆಂಟ್ ಮಾಡಿದ ವಿಧಾನದಿಂದ ಹೆಚ್ಚು ತೊಂದರೆಯಾಗಿದೆ, ಜನರು ಹೆಚ್ಚು ಕಷ್ಟಕ್ಕೆ ಸಿಕ್ಕಿದ್ದಾರೆ ಎಂಬುದು ನಿರ್ವಿವಾದವಾದ ವಿಷಯ. ಆದರೆ ಯಾವ ರೀತಿ ದವಸ ನಮ್ಮ ಕೈಗೆ ಬರಬೇಕೆಂಬುದೇ ಈಗಿರತಕ್ಕ ಪ್ರಶ್ನೆ. ಜನರಿಗೆ ತೊಂದರೆಯಾಗದೇ ಇರತಕ್ಕ ರೀತಿಯಲ್ಲಿ ಆಹಾರ ಸಂಗ್ರಹವಾಗತಕ್ಕ ಒಂದು ಮಾರ್ಗವನ್ನು ಕಂಡುಹಿಡಿಯಬೇಕಾಗಿದೆ. ಇದುವರೆಗೆ ಯಾರೂ ಕೇವಲ ಒಂದು ವರ್ಷಕ್ಕೆ ಆಗುವಷ್ಟು ಮಾತ್ರ ಆಹಾರ ಬೆಳೆದುಕೊಂಡು, 20-30 ಸೇರು ಹೆಚ್ಚು ದವಸವನ್ನಿಟ್ಟುಕೊಂಡಿದ್ದರೋ ಅಂಥ ಬಡವರಿಂದ ಆಹಾರಧಾನ್ಯ ಹೆಚ್ಚು ಸಂಗ್ರಹವಾಗಿದೆಯೇ ಏನಾ ನಿಜವಾದ ಸರ್‌ಪ್ಲಸ್ ಹೋಲ್ಡರುಗಳಿಂದ ಅಷ್ಟಾಗಿ ವಸೂಲಾಗಿಲ್ಲ ಎಂದು ನನ್ನವಾದ. ಇನ್ನು ಮುಂದೆ ಹೀಗಾಗಬಾರದು. ಕಡಮೆ ಸರ್‌ಪ್ಲಸ್ ಹೋಲ್ಡರುಗಳಾರಿದ್ದಾರೋ ಅವರಿಂದ ಖಂಡಿತವಾಗಿ ವಸೂಲುಮಾಡಬಾರದು. ಆಹಾರಧಾನ್ಯ ಸಂಗ್ರಹ ಮಾಡುವುದಾದರೆ ಹೆಚ್ಚಿನ ಸರ್‌ಪ್ಲಸ್ ಹೋಲ್ಡರುಗಳಾರಿದ್ದಾರೋ ಅವರಿಂದ ವಸೂಲುಮಾಡಬೇಕು. ಸ್ವಲ್ಪ ಚಿಲ್ಲರೆ ಅಥವಾ ಒಂದು ಪಲ್ಲ ಹೆಚ್ಚಿರುವವರಿಗೆ ತೊಂದರೆ ಕೊಡಬಾರದು. ಕಳೆದ ಐದು ವರ್ಷಗಳ ಲೆಕ್ಕವನ್ನು ತೆಗೆದುಕೊಂಡರೆ, ತಪ್ಪು ಲೆಕ್ಕಗಳು ತಯಾರಾಗುತ್ತವೆ. ಏಕೆಂದರೆ ಯಾರು ಇಮ್ಮುವರೆಗೆ ಕೂಟ್ಟಿದ್ದಾರೋ ಅವರ ಲೆಕ್ಕವನ್ನೇ ತೆಗೆದುಕೊಳ್ಳುತ್ತೇವೆ. ಯಾರು ಹತ್ತಿಪ್ಪತ್ತು ಸೇರು ಇಟ್ಟಿದ್ದಾರೋ ಅವರಿಂದ ಬಲವಂತದಿಂದ ವಸೂಲು ಮಾಡಿದ್ದಾರೆ. ನಿಜವಾಗಿ ಹೆಚ್ಚು ಬೆಳೆದವರು, 50 ಪಲ್ಲ ನೂರಾರು ಪಲ್ಲ ಹೆಚ್ಚಾಗಿ ಬೆಳೆದಿದ್ದವರು, 25 ಪಲ್ಲ ಕೊಡುತ್ತಾರೆ. ಅಕಾರಣ ಸರಿಯಾದ ಅಂಕಿಅಂಶಗಳನ್ನಿಟ್ಟುಕೊಂಡು ಹೆಚ್ಚು ಬೆಳೆಯುವವರನ್ನು ಗಮನದಲ್ಲಿಟ್ಟುಕೊಂಡು ಅವರಿಂದ ಸಂಗ್ರಹ ಮಾಡಬೇಕು ಮಾತ್ರ, ಕಡಮೆ ಸರ್‌ಪ್ಲಸ್ ಹೋಲ್ಡರುಗಳನ್ನು ಬಿಟ್ಟುಬಿಡಬೇಕೆಂದು ನನ್ನ ಸಲಹೆ.

ಎರಡನೆಯದಾಗಿ, ನಿಯಂತ್ರಣವನ್ನು ತೆಗೆಯುವುದಾದರೆ, ಸಂಗ್ರಹಣವನ್ನು ಮಾಡುವುದಾದರೆ, ಮರುಕ್ಷಣದಲ್ಲಿ ದೇಶದಲ್ಲಿ ಜನರಿಂದ ಟೀಕೆ ಬರುತ್ತದೆ. ಏಕೆಂದರೆ ಒಂದಕ್ಕೊಂದು ವಿರುದ್ಧವಾಗಿ ಕಾಣುತ್ತದೆ. ಸಂಗ್ರಹ ಮಾಡಿದ ಮೇಲೆ ಡೀ ಕಂಟ್ರೋಲ್ ಮಾಡಿದರೆ ಒಂದು ರೀತಿಯ ಅಪಾರ್ಥವಾಗುತ್ತದೆ. ಸಂಗ್ರಹಮಾಡದೆ ಹೊರದೇಶಗಳಿಂದ ತರಿಸಿಕೊಂಡು ಆಮೇಲೆ ಸಂಗ್ರಹ ಮಾಡಿ ಡಿ-ಕಂಟ್ರೋಲ್ ಮಾಡುತ್ತೇವೆಂದರೆ, ಆಗ ದವಸವಿರುವುದಿಲ್ಲ. ಅಲ್ಪಸ್ವಲ್ಪ ಇರುವುದೂ ಒಂದು

ಕಡೆಯಿಂದ ಇನ್ನೊಂದು ಕಡೆಗೆ ಹೋಗಿ, ಇರತಕ್ಕ ದವನೂ ಇಲ್ಲದಂತಾಗಿ ಅನಾನುಕೂಲವಾಗುತ್ತದೆ. ಒಟ್ಟಿನಲ್ಲಿ ಹೆಚ್ಚು ಸರ್‌ಪ್ಲಸ್ ಹೋಲ್ಡರುಗಳಿಂದ ಸಂಗ್ರಹಮಾಡಿಕೊಂಡು ತಕ್ಷಣವೇ ಡಿ-ಕಂಟ್ರೋಲ್ ಮಾಡತಕ್ಕ ಯೋಚನೆಮಾಡಬೇಕು. ಈ ಕಂಟ್ರೋಲನ್ನು ಹೆಚ್ಚುದಿವಸ ಉಳಿಸಬಾರದು. ಕ್ಷಾಮದಾಮಾರಗಳನ್ನು ನಾವು ಮೊದಲನಿಂದಲೂ ಅನುಭವಿಸಿರುವವರು. ಒಂದು ವರ್ಷ ಹೀಗಾಯಿತು, ಇದನ್ನು ಮುಂದುವರಿಸೋಣ, ಸರ್‌ಪ್ಲಸ್ ಬಂದಮೇಲೆ ತೆಗೆಯೋಣ ಎಂದು ಹೇಳಬಾರದು. ಯಾವುದಾದರೂ ನೀತಿಯನ್ನು ಹಾಕಿಕೊಂಡು, ಪಟ್ಟಣಗಳಿಗೆ ಒದಗಿಸುವುದು ಹೇಗೆಂಬುದನ್ನು ಗೊತ್ತುಮಾಡಿಕೊಂಡು, ಡಿ-ಕಂಟ್ರೋಲ್ ಮಾಡುವುದೇ ಉತ್ತಮ ಮಾರ್ಗ. ಇದನ್ನು ಅದಷ್ಟು ಜಾಗ್ರತೆ ಮಾಡಬೇಕೆಂದು ನನ್ನ ಖಚಿತವಾದ ಅಭಿಪ್ರಾಯವನ್ನು ತಿಳಿಸುತ್ತೇನೆ.

Mr. SPEAKER.—If the Hon'ble Minister were to consent, I would like to give five minutes to Sri A. V. Narsimha Reddy

Sri H. SIDDAVEERAPPA.—I have no objection. The Chair may give him ten minutes.

Mr. SPEAKER.—In that case if the House is willing to sit till 5-15 P.M., I can give chances for two or three more members.

(After a pause)

The House is not willing. Sri Narasimha Reddy will have five minutes.

4-30 P.M.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಪ್ರಥಮತಃ ಮಾನ್ಯ ಸಭಾನಾಯಕರಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಮರ್ಪಿಸುತ್ತ, ನಾನು ಈಗ ನಭೆಯ ಮುಂದಿರುವ ವಿಷಯವನ್ನು ಪ್ರಸ್ತಾಪಿಸಲಿಚ್ಛಿಸುತ್ತೇನೆ. ಈಗಾಗಲೇ ನನ್ನ ಅನೇಕ ಮಾನ್ಯ ಮಿತ್ರರುಗಳು ಈ ಆಹಾರನಿಯಂತ್ರಣವು ಇರಬೇಕೇ ಅಥವಾ ಇರಕೂಡದೇ ಎಂಬ ವಿಚಾರವಾಗಿ ಮಾತನಾಡುತ್ತ ಅವರುಗಳೆಲ್ಲರೂ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ದಿವಸ ಇಲ್ಲಿಯತನಕ ನಡೆದಿರುವ ಭಾಷಣಗಳನ್ನು ನೋಡಿದರೆ, ಈ ಆಹಾರ ನಿಯಂತ್ರಣವು ಇರಬೇಕೆಂಬುದಾಗಿ ಅಭಿಪ್ರಾಯ ಹೊಂದಿರುವಂತೆ ಕಾಣುತ್ತಿದೆ. ಆದರೆ ಹಾಗೆ ಇದು ಇರಬೇಕಾಗಿದ್ದರೆ ಅದು ಯಾವ ರೀತಿಯಾಗಿರಬೇಕು ಎಂಬುದರ ಬಗ್ಗೆ ನಾವು ಸರ್ಕಾರಕ್ಕೆ ನಮ್ಮ ಸೂಕ್ತ ಸಲಹೆಗಳನ್ನು ಕೊಡುವಂಥ ಸನ್ನಿವೇಶ ಈಗ ಉಂಟಾಗಿದೆ. ಕೆಲವರು ಸೂಕ್ತಸಲಹೆಗಳನ್ನು ನೀಡಿದ್ದಾರೆ. ಆದರೆ ಮತ್ತೆ ಕೆಲವರು ಮಿತ್ರರು ಈ ನಿಯಂತ್ರಣದ ಬಗ್ಗೆ ಸರ್ಕಾರದವರಿಗೆ ಒಂದು ಪ್ಲಾನ್ಡ್ ಎಕಾನಮಿ ಇರುವುದಿಲ್ಲ, ನಿಯಂತ್ರಣವು ನಿರ್ದಿಷ್ಟವಾದ ಯೋಜನೆಯ ಮೇಲೆ ನಡೆಯುತ್ತಿಲ್ಲವಾದ್ದರಿಂದ ಸರ್ಕಾರ ದಿಕ್ಕುಕಾಣದೆ ಕುಳಿತುಬಿಟ್ಟಿದೆಯೆಂಬುದಾಗಿ ಅಪಾದನೆಗಳನ್ನು ಎತ್ತಿ ತೋರಿಸಿದ್ದಾರೆ. ಆದರೆ ಅವರು ಹೀಗೆ ಕೇವಲ ಒಂದು ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸಲೇಬೇಕೆಂಬ ದೃಷ್ಟಿಯನ್ನಿಟ್ಟುಕೊಂಡು ಇದನ್ನು ಏಮರ್ಶೆಮಾಡದೆ, ಆ ದೃಷ್ಟಿಯನ್ನು ಬಿಟ್ಟುನೋಡುವುದಾದರೆ, ಸರ್ಕಾರ ತನ್ನ ಕೆಲಸಕಾರ್ಯಗಳನ್ನು ಎಷ್ಟರಮಟ್ಟಿಗೆ ಯೋಜನಾಬದ್ಧವಾಗಿ ನಡೆಸಿಕೊಂಡು ಬರುತ್ತಿದೆಯೆಂಬ ವಿಷಯ ಅವರಿಗೇ ಅರಿವಾಗುತ್ತದೆ. ಅಲ್ಲದೆ ನಿಜವಾಗಿಯೂ ದೇಶದ ಜನತೆಯು ಕೊರತೆಯಿಂದ ಕ್ರಮಕ್ರಮವೇ ಣ ತಪ್ಪಿಸಿಕೊಳ್ಳುತ್ತ ಉತ್ತಮ ಸ್ಥಿತಿಗೆ ಬರುತ್ತಿದ್ದಾರೆಂಬುದು ಅವರಿಗೂ ಗೊತ್ತಾಗುತ್ತದೆ. ನಾವು ಈ ಆಹಾರ ನಿಯಂತ್ರಣವನ್ನು ದೇಶದಲ್ಲಿ ಆದಷ್ಟುಬೇಗ ತೆಗೆದು ಹಾಕುತ್ತೇವೆಂದು ದೇಶದ ಜನತೆಗೆ ಅನೇಕ ವೇಳೆ ಭರವಸೆಯನ್ನು ನೀಡಿದ್ದೇವೆಂಬುದು ನಿಜ. ಆ ಹಾದಿ ಈಗಲೂ, ಈಕ್ಷಣಕ್ಕೂ ನಮ್ಮ ಮುಂದೆ ಇದ್ದೇ ಇದೆ. ಆದರೆ ನಾವು ಈ ದಿವಸ ಆ ಹಾದಿಯಲ್ಲಿ ಪ್ರವೇಶಮಾಡತಕ್ಕದ್ದು ಸರಿಯಾದದ್ದೇ ಎಂಬ ಅಂಶವನ್ನು ನಾವು ಈಗ ಬಹಳ ಗಾಂಭೀರ್ಯದಿಂದಲೂ ಜವಾಬ್ದಾರಿಯಿಂದಲೂ ಆಲೋಚನೆ ಮಾಡಬೇಕಾಗಿದೆ. ದೇಶದಲ್ಲಿರುವ ಜನತೆಗೆಲ್ಲಾ ಗೊತ್ತಿರುವ ಹಾಗೆ, ಸರಿಯಾಗಿ ಸಕಾಲಕ್ಕೆ ಮಳೆಬಾರದೆ ಹೋಗಿ ಇಂದು ದೇಶಾದ್ಯಾಂತವೂ ಒಂದು ವಿಶೇಷ ಪರಿಸ್ಥಿತಿ ಉಂಟಾಗಲಾಗಿದೆ. ಸುಮಾರು 50ಲಕ್ಷ ಪ್ರಜಾಸಂಖ್ಯೆಗೆ ಆಹಾರದ ಕೊರತೆಯುಂಟಾಗಿರುವ ಸನ್ನಿವೇಶದಲ್ಲಿ ನಾವು ಈ ಹಿಂದೆ ಭರವಸೆ ಕೊಡಲಾಗಿದ್ದ ಪ್ರಕಾರ ಈ ಆಹಾರನಿಯಂತ್ರಣಗಳನ್ನು ಈಗ ತೆಗೆದುಹಾಕಬೇಕೆಂದು ಹೇಳುವುದು ಅಷ್ಟು ಸರಿಯಾದ ನೀತಿ ಹೌದೇ, ಅಲ್ಲವೇ ಎಂಬುದನ್ನು ನಾವು ದೀರ್ಘವಾಗಿ ಈಗ ಆಲೋಚನೆಮಾಡಬೇಕಾಗಿದೆ. ನನ್ನ ವೈಯ್ಯಕ್ತಿಕ ದೃಷ್ಟಿಯಲ್ಲಿ ಈ ನಿಯಂತ್ರಣವನ್ನು ತೆಗೆದುಹಾಕಬೇಕೆಂಬ ದಾರಿಗೆ ಈಗ ನಾವು ಪ್ರವೇಶಮಾಡದಿರುವುದೇ ಬಹಳ ಒಳ್ಳೆಯದೆಂದು ನನ್ನ ಅಭಿಪ್ರಾಯ. ಅಂತೂ ಸಂಪೂರ್ಣವಾಗಿ ಈ ಕಂಟ್ರೋಲುಗಳನ್ನು ಸಡಿಲಮಾಡಬೇಕೆಂದು ಹೇಳುವುದಕ್ಕೆ ಈಗ ಅದು ಸಮಯೋಚಿತವಾಗಿಲ್ಲವೆಂದು ಅನೇಕರು ಭಾವಿಸಿದ್ದಾರೆ. ಆದ್ದರಿಂದ ಈ ನಿಯಂತ್ರಣಗಳನ್ನು ಇನ್ನು ಕೆಲಕಾಲ ಮುಂದುವರಿಸಬೇಕೆಂದ ಹಾಗಾಯಿತು. ಅಂದ ಮೇಲೆ ಹಾಗೆ ನಾವು ಇನ್ನುಮುಂದಕ್ಕೆ ಇಟ್ಟುಕೊಳ್ಳಬಹುದಾದ ನಿಯಂತ್ರಣದಲ್ಲಿ ಯಾವ ರೀತಿಯಲ್ಲೂ ಜನರಲ್ಲಿ ಒಂದು ಕೆಟ್ಟ ಪರಿಣಾಮಕ್ಕೆ ಅವಕಾಶ ಕೊಡದಿರುವ ರೀತಿಯಲ್ಲಿ ನಾವು ಅದನ್ನು ಹೇಗೆ, ಯಾವ ವಿಧಾನದಲ್ಲಿ ಇಟ್ಟುಕೊಳ್ಳಬೇಕು, ಅದನ್ನು ಹೇಗೆ ಜಾರಿಗೆ ತರಬೇಕು, ಎಂಬ ವಿಚಾರದಲ್ಲಿ ಜನರ ಹಿತದೃಷ್ಟಿಯನ್ನೂ ಮತ್ತು ಅವರ ನೀತಿ ಕೆಡದಿರುವ ಹಾಗೆ ನಾವು ಒಂದು ಕ್ರಮವನ್ನೂ ಆಲೋಚನೆಮಾಡಬೇಕಾಗಿದೆ.

Sri J. MOHAMED IMAM.—I rise to a Point of Order. Can a Member read a novel or a book?

Mr. SPEAKER.—He is merely holding a book.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಹಿಂದೆ ಅನೇಕ ವರ್ಷಗಳಿಂದಲೂ ಈ ಧಾನ್ಯ ಸಂಗ್ರಹಣೆಗಾಗಿ ಅನುಸರಿಸಲಾಗುತ್ತಿದ್ದ ವಿಧಾನದಲ್ಲಿ ಮತ್ತು ಲೆಕ್ಕಾಚಾರದಲ್ಲಿ ಅನೇಕ ದೋಷದೋಷಗಳಿದ್ದುದನ್ನು ನಾವೆಲ್ಲರೂ ಅನುಭವಿಸಿ ನೋಡಿರತಕ್ಕವರಾಗಿದ್ದೇವೆ. ಆ ಕಾರಣದಿಂದ ನಾವೀದಿವಸ ಹುಡುಕಬೇಕಾಗಿರುವ ಮಾರ್ಗದಲ್ಲಿ ಆ ರೀತಿಯ ದೋಷದೋಷಗಳಿಗೆ ಅವಕಾಶವಿಲ್ಲದಂತೆ ಒಂದು ಸೂಕ್ತ ಮಾರ್ಗವನ್ನು ಕಂಡುಹಿಡಿಯಬೇಕು.

(ಶ್ರೀ ಎ. ಪಿ. ನರಸಿಂಹರೆಡ್ಡಿ).

ಈ ಧಾನ್ಯದ ವಸೂಲಿಯ ಕ್ರಮದಲ್ಲಿ ನಮ್ಮ ಸರ್ಕಾರಕ್ಕೆ ಇಲ್ಲಿಯ ತನಕ ಅಧಿಕ ಪ್ರಮಾಣದಲ್ಲಿ ಯಾವ ಯಾವ ಮಹನೀಯರು ಧಾನ್ಯವನ್ನೊದಗಿಸಿದ್ದಾರೆಂಬುದಕ್ಕೆ ಸಿದ್ಧಗೊಳಿಸಲಾಗಿರುವ ಪಟ್ಟಿಯು ಸಹ ಈಗ ನಮ್ಮಲ್ಲಿರುತ್ತದೆ. ಹಾಗೆ ಸರ್ಕಾರದವರು ಇಲ್ಲಿನವರೆಗೆ ಅನುಸರಿಸುತ್ತಿದ್ದಂಥ ಆ ಪಟ್ಟಿಯಲ್ಲಿ ಯಾರು ಯಾರು ಒಂದು ಪಲ್ಲ ಭತ್ತ ಮತ್ತು 50 ಸೇರು ರಾಗಿಯನ್ನು ಸರ್ಕಾರಕ್ಕೆ ಕೊಡುತ್ತಿದ್ದರೋ ಅಂಥವರುಗಳನ್ನೆಲ್ಲಾ ಇನ್ನುಮುಂದಕ್ಕೆ ಕೈಬಿಟ್ಟುಕೊಂಡು ಅವರಿಂದ ಯಾವ ರೂಪದಲ್ಲೂ ಧಾನ್ಯ ವಸೂಲಿಮಾಡದೆ, ಕೇವಲ ಅಧಿಕ ಪ್ರಮಾಣದಲ್ಲಿ ಧಾನ್ಯ ಶೇಖರಣೆಯನ್ನು ಯಾರು ಯಾರಿಂದ ಮಾಡುತ್ತಿದ್ದರೋ ಅವರಿಂದ ಮುಂದೆಯೂ ಧಾನ್ಯ ಸಂಗ್ರಹಣೆಮಾಡಬಹುದು. ಒಂದುವೇಳೆ ಈಗ ಮಾಡಿರತಕ್ಕ ಪಟ್ಟಿಯಲ್ಲಿ ಅಂಥ ನ್ಯೂನತೆಗಳೆ ನಾದರೂ ಇದ್ದು ಕಡಮೆ ಧಾನ್ಯ ಕೊಡುತ್ತಿದ್ದವರ ಹೆಸರೂ ಸಹ ಈ ಪಟ್ಟಿಯಲ್ಲಿ ಸೇರಿಹೋಗಿದ್ದರೆ, ತತ್ಸಂಬಂಧದಲ್ಲಿ ಬರಬಹುದಾದ ತಕರಾರುಗಳನ್ನು ಕೇಳಿ ಅವುಗಳನ್ನು ತೀರ್ಮಾನಮಾಡತಕ್ಕ ಬಗ್ಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸಮಿತಿಯನ್ನು ನೇಮಕಮಾಡಿದರೆ ಈ ತೊಂದರೆಗಳನ್ನು ತಪ್ಪಿಸಬಹುದು. ಹಾಗೆ ನೇಮಿಸತಕ್ಕ ಸಮಿತಿಗಳಿಗೆ ಅಂಥ ಅಪೀಲ್ ಕೇಸುಗಳಲ್ಲಿ ತಕ್ಕ ತೀರ್ಪನ್ನು ವಿಚಾರಣೆ ಮೂಲಕ ಕೊಡುವಂಥ ಅಧಿಕಾರವನ್ನು ಕೊಡಬೇಕು. ಹೀಗೆ ಯಾವ ಒಂದು ಲೋಪದೋಷಗಳಿಗೂ ಅವಕಾಶವಿಲ್ಲದಂತೆ ಒಂದು ಪಟ್ಟಿಯನ್ನು ಬೇಕಾದರೆ ತಯಾರಿಸಲು ಸಾಧ್ಯವಿದೆ.

ಆದರೆ ಈಗ ಸರ್ಕಾರದವರು ರಾಗಿ, ಭತ್ತ, ಇತ್ಯಾದಿ ಧಾನ್ಯಗಳಿಗೆ ಕೊಡುತ್ತಿರುವ ಧಾರಣೆಯು ತೀರ ಕಡಮೆಯಾಗಿರುತ್ತೆಂಬುದು ನಿರ್ವಿವಾದವಾದ ವಿಚಾರ. ಆದ್ದರಿಂದ ತಾವು ಕನಿಷ್ಠಪಕ್ಷ ಅವರಿಗೆ ಈಗ ಕೊಡುತ್ತಿರುವ ಬೆಲೆಯಿಂದ ಸಮಾಧಾನವಿಲ್ಲ. ಆದ್ದರಿಂದ ತಾವು ಈ ಬೆಲೆಗಳನ್ನು ಹೆಚ್ಚುಮಾಡದೆ ಏನಾ ಹೆಚ್ಚು ಬೆಳೆಯನ್ನು ಬೆಳೆಯಲು ಖಂಡಿತ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ನಾನು ಕೊಡಬೇಕೆಂದಿರುವ ಸಲಹೆಯೇನೆಂದರೆ: ತಾವು ಅವರಿಗೆ ಕೊಡುತ್ತಿರುವ ಧಾರಣೆಯನ್ನು ಹೆಚ್ಚುಮಾಡಬೇಕು ಮತ್ತು ಅವರಿಗೆ ಉಳಿಸಿಕೊಳ್ಳಲು ತಾವು ಅವಕಾಶ ಕೊಡುವಂಥ ಧಾನ್ಯಗಳನ್ನು ಅವರು ಎಲ್ಲಿಗೆ ಬೇಕಾದರೂ ಸಾಗಾನದೊಳಗೆ ತೆಗೆದು ಕೊಂಡು ಹೋಗಿ ನಿರಾತಂಕವಾಗಿ ಮಾರಾಟಮಾಡಲು ಅವಕಾಶ ಕೊಡಬೇಕು ಎಂದು. ಹಿಗೆಮಾಡಿದರೆ ಅವರಿಗೆ ಕೊಂಚ ದ್ರವ್ಯಾನುಕೂಲವಾಗುವುದರ ಜೊತೆಗೆ ಅವರ ಮನಸ್ಸಿಗೂ ಇದು ಹರ್ಷವನ್ನುಂಟುಮಾಡುವಂತಾದ್ದಾಗಿರುತ್ತದೆ. ಇದರಿಂದ ಆಹಾರ ಧಾನ್ಯಗಳನ್ನು ಸುಲಭವಾಗಿ ಕೊಂಡು ತಿನ್ನುವವರಿಗೂ ಸಹ ನಿರಾಯಾಸವಾಗಿ ಧಾನ್ಯ ಹೊರೆಯುವಂತಾಗಿ ದೇಶದಲ್ಲಿ ಇಂದು ನಡೆಯುತ್ತಿರುವ ಕಾಳಸಂತೆ ವ್ಯವಹಾರವೆಲ್ಲವೂ ತನ್ನಷ್ಟಾಗಿಗೆ ತಾನೇ ನಿಂತುಹೋಗಲು ಮಾರ್ಗವಾಗುತ್ತದೆ. ಆದ್ದರಿಂದ ಸರ್ಕಾರದವರು ಧಾನ್ಯಗಳನ್ನು ಡಿಪೋಗಳಲ್ಲಿ ಯಾವ ಬೆಲೆಗೆ ಮಾರಾಟ ಮಾಡುತ್ತಾರೋ ಅದೇ ಬೆಲೆಗೆ ರೈತರೂ ಮಾರಾಟ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡತಕ್ಕದ್ದು ಉಚಿತವಾಗಿರತ್ತೆಂದು ತಿಳಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಅಧ್ಯಕ್ಷರೇ, ನಾನು ತಮ್ಮಲ್ಲಿ ಒಂದು ವಿಷಯವನ್ನು ಅರಿಕೆಮಾಡಿಕೊಳ್ಳಬೇಕೆಂದಿದ್ದೇನೆ. ಈ ಸಭೆಯು 5½ ಘಂಟೆಗಳ ವರಗೂ ಕುಳಿತುಕೊಳ್ಳಲು ಯಾರ ಅಭ್ಯಂತರವೂ ಇಲ್ಲವೆಂದು ಒಪ್ಪುವುದಾದರೆ, ಸರ್ಕಾರದವರಿಗೆ ಇನ್ನೂ ಹೆಚ್ಚಿಗೆ ಮಾನ್ಯ ಸದಸ್ಯರುಗಳಿಂದ ಅವರ ಅಮೂಲ್ಯವಾದ ಸಲಹೆಗಳನ್ನು ಪಡೆಯಬೇಕೆಂಬ ಕುತೂಹಲವಿದೆ. ಹಾಗೆ ಸಾಧ್ಯವಾದಷ್ಟು ಹೆಚ್ಚಿಗೆ ಅಭಿಪ್ರಾಯಗಳನ್ನು ಶೇಖರಣೆಮಾಡಬೇಕೆಂಬುದೇ ಸರ್ಕಾರದವರ ಉದ್ದೇಶವಾಗಿರುತ್ತದೆ. ಇದಕ್ಕೆ ತಾವು ಒಪ್ಪುವುದಾದರೆ ಆಗ ಬಹುದು.

Mr. SPEAKER.—We can go on with the debate till 5 of the Clock and the Food Minister will take half an hour for replying to the debate.

(Some Members of the Opposition Party got up and requested the Speaker to give a chance to speak.)

Mr. SPEAKER.—I have given chance to a number of members and I do not make any discrimination. I have been very fair to all. I will give five minutes for each Member to speak.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈ ಕಂಟ್ರೋಲ್ ಪ್ರಶ್ನೆಯನ್ನು ನಾವು ಈ ದಿವಸ ಕೇವಲ ಒಂದು ತಾತ್ಪಿಕ ದೃಷ್ಟಿಯಿಂದಲೇ ಆಲೋಚನೆಮಾಡದೆ, ವಾಸ್ತವಾಂಶಗಳೇನಿರುತ್ತವೆಂಬುದನ್ನು ನಮ್ಮ ಗಮನಕ್ಕೆ ಮುಖ್ಯವಾಗಿ ತೆಗೆದು ಕೊಂಡು ಒಂದು ತೀರ್ಮಾನಕ್ಕೆ ಬರತಕ್ಕದ್ದು ನಮ್ಮ ಮುಖ್ಯ ಕರ್ತವ್ಯವಾಗಿದೆ. ಆದರೆ ಕೆಲವು ಮಾನ್ಯ ಸದಸ್ಯರುಗಳು ಕೆಲಕೆಲವು ಆಕ್ಷೇಪಣೆಗಳನ್ನೆತ್ತಿದ್ದಾರೆ. ಸರ್ಕಾರದವರು ಈ ವಿಷಯದಲ್ಲಿ ಒಂದು ದೃಢವಾದ ಪದ್ಧತಿಯನ್ನು ಅನುಸರಿಸುತ್ತಿಲ್ಲವೆಂದು ಆಕ್ಷೇಪಿಸುತ್ತಿದ್ದಾರೆ. ಪರಿಸ್ಥಿತಿಯಾದರೋ ಕ್ಷಣಕ್ಷಣಕ್ಕೂ ಬದಲಾಯಿಸುತ್ತಿದೆ. ಆದ್ದರಿಂದ ನಾವು ಈ ದಿವಸ ಕುಳಿತುಕೊಂಡು ಮಾಡುವಂಥ ಒಂದು ತೀರ್ಮಾನ ಎಲ್ಲ ಕಾಲಕ್ಕೂ ಅನ್ವಯಿಸುವಂಥದಾಗಿರುವುದಿಲ್ಲ. ಅದಕ್ಕಾಗಿ ನಾವು ಮತ್ತೆ ಮತ್ತೆ 6 ತಿಂಗಳಿಗೊಂದಾವರ್ತಿಯಾದರೂ ಪುನಃ ಸೇರಿ ಇದನ್ನು ವಿಮರ್ಶೆಮಾಡಬೇಕಾಗುತ್ತದೆ. ಈಗಿರತಕ್ಕ ಕಂಟ್ರೋಲುಗಳೆಲ್ಲಾ ಜಾರಿಗೆ ಬಂದದ್ದು 1943ನೆಯ ಇಸವಿಯಿಂದ. ಆ ರಾಗಾಯ್ತಿನಿಂದ ಇಲ್ಲಿಯವರೆಗೂ ನಾವು ಇದರ ಬಗ್ಗೆ ನಾನಾರೀತಿಯಲ್ಲಿ ಬದಲಾವಣೆಗಳನ್ನು ಮಾಡುತ್ತಲೇ ಬಂದಿದ್ದೇವೆ. ಅಷ್ಟೆಲ್ಲಮಾಡಿದ್ದರೂ ಧಾರಣೆವಾಪಿಗಳು ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಬಂದಿವೆ. ಮೂರು ಸೇರು ಮಾರಾಟಮಾಡುತ್ತಿದ್ದ ಧಾನ್ಯ ಇಂದು ಒಂದೂವರೆ ಸೇರಿಗೆ ಏಳಿದು ಬಂದಿದೆ. ಪರಿಸ್ಥಿತಿ ಹೀಗಿರುವಾಗ ನಾವು ಪೂರ್ಣ ಡಿ-ಕಂಟ್ರೋಲನ್ನು ಮಾಡಿದರೆ ಬೆಂಗಳೂರು, ದಾವಣಗೆರೆ ಮತ್ತು ಕೆ. ಜೆ. ಎಫ್. ಗಳಲ್ಲಿರತಕ್ಕ ಜನರ ಪಾಡೇನಾಗಬೇಕು? ಅವರ ಪರಿಸ್ಥಿತಿ ಎಲ್ಲಿಗೆ ಬರಬಹುದು ಎಂಬುದನ್ನು ನಾವು ಈ ದಿವಸ ಆಲೋಚನೆಮಾಡಬೇಕಾಗಿದೆ. ಡಿ-ಕಂಟ್ರೋಲನ್ನು ಮಾಡಿದರೆ ಧಾರಣೆವಾಸಿಗಳೆಲ್ಲರೂ ಏಕ್‌ದಂ ಜಾಸ್ತಿಯಾಗಿಬಿಡುತ್ತವೆ. ಫ್ರೀ ಮಾರ್ಕೆಟ್ಟಿನಲ್ಲಿ ಬಡವರಾಗಿರತಕ್ಕವರಿಗೆ ಧಾನ್ಯ ಕೊಂಡು ತಿನ್ನಲು ಸಾಧ್ಯವಾಗುವುದಿಲ್ಲ. 1947ನೇ ಇಸವಿಯಲ್ಲಿ ಈ ಕಂಟ್ರೋಲ್ ಆಜ್ಞೆಗಳನ್ನೆಲ್ಲಾ ತೆಗೆದುಹಾಕಬೇಕೆಂದು ಮಹಾತ್ಮಾ ಗಾಂಧಿಯವರು ಹೇಳಿದ್ದ ಪ್ರಕಾರ ನಮ್ಮ ಸರ್ಕಾರ

ದವರು ಹಾಗೆಮಾಡಿದ್ದ ಕಾಲದಲ್ಲಿ ಏನೇನು ಕಷ್ಟಪರಿಸ್ಥಿತಿಗಳು ಬಂದು ಒದಗಿದ್ದವೋ ಅವೆಲ್ಲವೂ ಈಗ ಕಂಟ್ರೋಲನ್ನು ಸಡಿಲಮಾಡಿದೊಡನೆಯೇ ಪುನಃ ಸಂಭವಿಸುತ್ತವೆ. ಈ ಕಂಟ್ರೋಲುಗಳೆಲ್ಲಾ ಹೋಗಬೇಕೆಂದು ಕೇಳುತ್ತಿರುವವರು ಯಾರು ಎಂದರೆ ರೈತಾಪಿ ವರ್ಗದವರು. ಹಾಗೆಯೇ ಈ ಕಂಟ್ರೋಲುಗಳೆಲ್ಲಾ ಇರಲೇಬೇಕೆಂದು ಕೇಳುತ್ತಿರುವವರು ಯಾರೆಂದರೆ, ಈ ದಿವಸ ಧಾನ್ಯವನ್ನು ಕೊಂಡು ತಿನ್ನತಕ್ಕವರು. ಆದ್ದರಿಂದ ಸರ್ಕಾರದವರು ಸರ್ವರ ಹಿತದೃಷ್ಟಿಯನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ತೀರ್ಮಾನಮಾಡಬೇಕಾಗಿದೆ. ನಗರ ಪ್ರದೇಶಗಳಲ್ಲಿರತಕ್ಕ ಪೋಲೀಸಿನವರಿಗೂ, ಪಿಪಾಯಿಗಳಿಗೂ, ಶಾಲಾ ಉಪಾಧ್ಯಾಯರುಗಳಿಗೂ ಮಿಲ್ಲುಗಳಲ್ಲಿ ಕೂಲಿಮಾಡುತ್ತಿರುವ ಕೆಲಸಗಾರರುಗಳಿಗೂ ಈ ಕಂಟ್ರೋಲ್ ಪದ್ಧತಿಯಿರುವುದರಿಂದ ಅಲ್ಪಸ್ವಲ್ಪ ಪ್ರಯೋಜನವಾಗುತ್ತದೆ. ಈ ಕಂಟ್ರೋಲನ್ನು ತೆಗೆದುಹಾಕಿದರೆ ಬೆಂಗಳೂರು, ದಾವಣಗೆರೆ ಮತ್ತು ಕೆ. ಜಿ. ಎಫ್. ನಲ್ಲಿರತಕ್ಕ ಜನರುಗಳಿಗೆ ತುಂಬಾ ತೊಂದರೆಯಾಗುತ್ತದೆ. ಒಂದುವೇಳೆ ಡಿ-ಕಂಟ್ರೋಲ್ ಮಾಡಿದನಂತರವೂ ಅಲ್ಲಲ್ಲೇ ತಾವು ಫೇರ್‌ಪ್ರೈಜ್ ಡಿಪೋಗಳನ್ನು ಇಡಲೇಬೇಕಾಗುತ್ತದೆ. ಧಾನ್ಯ ಬೆಳೆಯತಕ್ಕವರಿಗೂ ಕೂಡ ತಾವು ಸಬ ಯಾನುಸಂದರ್ಭಗಳಲ್ಲಿ ಆಹಾರ ಸಾಮಗ್ರಿಗಳನ್ನು ಒದಗಿಸುವಂಥ ಪ್ರಮೇಯಗಳು ಒದಗಬಹುದು. ಈ ಎಲ್ಲ ದೃಷ್ಟಿಯಿಂದಲೂ ತಾವು ಕಂಟ್ರೋಲನ್ನು ಇಟ್ಟುಕೊಳ್ಳಲಿ ಅಥವಾ ಅದನ್ನು ತೆಗೆದುಹಾಕಲಿ ಧಾನ್ಯ ಸಂಗ್ರಹಣೆಯನ್ನಂತೂ ಮಾಡಲೇಬೇಕಾಗಿದೆ. ಅದೇ ರೀತಿ ಫೇರ್ ಪ್ರೈಸ್ ಡಿಪೋಗಳನ್ನಿಟ್ಟುಕೊಂಡು ತಿನ್ನುವವರಿಗೆ ಧಾನ್ಯವನ್ನು ಕಡ್ಡಾಯವಾಗಿ ಒದಗಿಸತಕ್ಕ ಒಂದು ಜವಾಬ್ದಾರಿ ತಮ್ಮಮೇಲೆ ಎಂದೆಂದಿಗೂ ಇದ್ದೇ ಇರುತ್ತದೆ. ಪರಿಸ್ಥಿತಿ ಅಷ್ಟು ಸುಧಾರಣೆಗೆ ಬಂದಿಲ್ಲವಾದ ಕಾರಣ ಈಗ ತಾವು ಡಿ-ಕಂಟ್ರೋಲನ್ನು ಮಾಡಬಾರದು, ಮಾಡುವುದಕ್ಕೂ ಸಾಧ್ಯವಿಲ್ಲ. ಪರಿಸ್ಥಿತಿ ಒಂದು ಹದಕ್ಕೆ ಬಂದಮೇಲೆ ತಾವು ಮಾಡಬಹುದು.

ನಾನು ಈ ದಿವಸದ ಬೆಳಿಗಿನ ಒಂದು ವರ್ತಮಾನ ಪತ್ರಿಕೆಯನ್ನು ಓದಿ ನೋಡಿದ್ದರಲ್ಲಿ, ಕೇಂದ್ರ ಆಹಾರ ಸಚಿವರಾದ ಶ್ರೀ ಖಿದ್ವಾಯಿಯವರು ರಾಗಿ ಮತ್ತು ಜೋಳದಮೇಲೆ ಹಾಕಿರತಕ್ಕ ಕಂಟ್ರೋಲನ್ನು ಸಂಪೂರ್ಣವಾಗಿ ತೆಗೆದುಹಾಕಬಹುದೆಂದು ಒಂದು ಸೂಚನೆ ಮಾಡಿದ್ದಾರೆ. ತಾವು ಆ ಬಗ್ಗೆ ಬೇಕಾದರೆ ಆಲೋಚನೆಮಾಡಿ ಅವುಗಳಮೇಲಿನ ಕಂಟ್ರೋಲನ್ನು ಬೇಕಾದರೆ ತೆಗೆಯಬಹುದು.

ಆದರೆ ಅಕ್ಕಿ ಅಥವಾ ಬತ್ತದ ವಿಷಯದಲ್ಲಿ ಮಾತ್ರ ನಾವು ಪೂರ್ತಿಯಾಗಿ ಡಿ-ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅಂತ್ಯ ಉದ್ದೇಶವನ್ನು ನಮ್ಮ ಮುಂದಿಟ್ಟುಕೊಂಡು, ಬೆಂಗಳೂರು ನಗರ, ಕೋಲಾರದ ಚಿನ್ನದಗಣಿ ಮತ್ತು ದಾವಣಗೆರೆಗಳನ್ನು ಹಾಗೂ ಗ್ರಾಮಾಂತರ ಪ್ರದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಡಿ-ಕಂಟ್ರೋಲ್ ನೀತಿಯನ್ನು ಕ್ರಮಕ್ರಮವಾಗಿ ತರಬೇಕೇ ಹೊರತು ಈಗಲೇ ಆಟ್ಟೆರಾಗಿ ತೆಗೆಯಕೂಡದೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ಸಭೆಯಮುಂದೆ ಆಹಾರವ ನಿಯಂತ್ರಣದ ಪ್ರಶ್ನೆಯನ್ನಿಟ್ಟು, ನಿಯಂತ್ರಣವಿರಬೇಕೇ, ನಿಯಂತ್ರಣವನ್ನಿಟ್ಟುಕೊಳ್ಳಬೇಕಾದರೆ ಯಾವ ನೀತಿಯನ್ನನುಸರಿಸಬೇಕು, ಅಥವಾ ನಿಯಂತ್ರಣವನ್ನು ರದ್ದುಮಾಡಬೇಕೇ ಎಂದು ಕೇಳಿದ್ದಾರೆ. ಈ ವಿಚಾರದಲ್ಲಿ ಅನೇಕ ಮಾನ್ಯಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಷ್ಟುವರ್ಷವೂ ಮೈಸೂರು ಸಂಸ್ಥಾನದಲ್ಲಿ ಯಾವ ಪ್ರೊಕ್ಯೂರ್‌ಮೆಂಟ್ ಪದ್ಧತಿಯಿತ್ತೋ ಅದರಿಂದ ಉಂಟಾಗಿರತಕ್ಕ ಭಾಧಕಗಳು ನಮ್ಮ ಕಣ್ಣಿಗೆ ಕಟ್ಟಿದಂತಿವೆ. ಆ ರೀತಿ ರೈತರಿಗೆ ಉಂಟಾಗತಕ್ಕಂಥ ತೊಂದರೆಗಳನ್ನುತಪ್ಪಿಸುವುದಕ್ಕೆ ಮತ್ತು ದೇಶದಲ್ಲಿ ಬೆಳೆಯುವ ರೈತನ ಮನಸ್ಸಿನಲ್ಲಿ ಉತ್ಸಾಹ ಉಂಟಾಗಿ ಆತನು ಹೆಚ್ಚಿಗೆ ಬೆಳೆಯುವುದಕ್ಕೆ ಯಾವನೀತಿಯನ್ನನುಸರಿಸಬೇಕೆಂಬುದು ಈ ದಿವಸ ದೇಶದ ಮುಂದಿರತಕ್ಕ ಪ್ರಶ್ನೆಯಾಗಿದೆ. 'ಲೆವಿ' ಎಂಬುದು ಬೆಳೆಯುವ ರೈತನು ಉದಾರಮನೋಭಾವನೆಯಿಂದ ಈ ಕಷ್ಟಕಾಲದಲ್ಲಿ ಹೊಟ್ಟೆಗಿಲ್ಲದೆ ನರಳುತ್ತಿರುವವರಿಗಾಗಿ ಕೊಡತಕ್ಕ ಒಂದು ತುತ್ತು ಆಹಾರವೆಂದು ಕರೆಯಬಹುದು. ಇಂಥಾದ್ದನ್ನು ಯಾವೊಬ್ಬ ರೈತನೂ ಸುಗ್ಗಿಯ ಕಾಲದಲ್ಲಿ ಸರ್ಕಾರದವರು ಸರಿಯಾದ ರೀತಿಯಲ್ಲಿ ಆತನನ್ನು ಕೇಳಿದರೆ ಅವನು ಎಂದೂತನ್ನ ಭಾಗದ ಕೋಟಾವನ್ನು ಕೊಡುವುದಕ್ಕೆ ಹಿಂಜರಿಯುವುದಿಲ್ಲ. ಆದ್ದರಿಂದ ಸರ್ಕಾರದವರು ಆತನ ದೇವರ ಭಾಗ ಮತ್ತು ಹಳ್ಳಿಗಳಲ್ಲಿ ಅವನಿಗಾಗಿ ಬೇರೆಯವರು ಏನೇನು ಕೆಲಸ ಮಾಡುತ್ತಿರುತ್ತಾರೋ ಆ ಭಾಗವನ್ನು ಬಿಟ್ಟು ಉಳಿದುದನ್ನು ನಿಗದಿ ಮಾಡಿ ಕೇಳಿದರೆ, ಅಥವಾ ಆತನು ವ್ಯವಸಾಯ ಮಾಡುತ್ತಿರತಕ್ಕ ಜಮೀನಿನ ಮೇಲೆ ಎಕರೆಗಿಷ್ಟೆಂದು ಒಂದು ಬಾಗವನ್ನು ಇಕರ ಜನಗಳಿಗಾಗಿ ಕೊಡಬೇಕೆಂದು ಸರ್ಕಾರದವರು ಕೇಳಿದರೆ ಆತನು ಕೊಡುವುದಕ್ಕೆ ಹಿಂಜರಿಯುವುದಿಲ್ಲ. ಆದ್ದರಿಂದ ನಾವು ಮುಖ್ಯ ಸಪ್ಲೈಸ್ ಹೋಲ್ಡರುಗಳಿಗೆ ಕೊಡುತ್ತಿರತಕ್ಕ ಕಿರುಕುಳಗಳನ್ನು ತಪ್ಪಿಸಬೇಕು. ಆಗದವಸವನ್ನು ಶೇಖರಿಸುವುದಕ್ಕೆ ಯಾವ ಕಷ್ಟವೂ ಇರುವುದಿಲ್ಲ. ಏಕೆಂದರೆ ಬೆಳೆಯತಕ್ಕ ರೈತನು ತಾನೇ ಸಂತೋಷದಿಂದ ದೇಶದಲ್ಲಿ ನರಳುತ್ತಿರುವ ಜನರಿಗಾಗಿ ಕೊಡುತ್ತಿದ್ದೇನೆಂಬ ಭಾವನೆಯಿಂದ ಕೊಡುತ್ತಿರುತ್ತಾನೆ. ಬೆಳೆಯುವ ರೈತನಿಗೆ ತಾನು ದೇಶಕ್ಕಾಗಿ ಕೊಡುತ್ತಿದ್ದೇನೆಂಬ ಹುಮ್ಮಸ್ಸುಂಟಾಗಬೇಕು. ನಾವು ಸಪ್ಲೈಸ್ ಹೋಲ್ಡರುಗಳಿಂದ ಅವರಲ್ಲಿ ಹೆಚ್ಚಿಗೆ ಇರುವ ದವಸವನ್ನೆಲ್ಲಾ ಕೊಡಬೇಕೆಂದರೆ ಬಹಳಮಟ್ಟಿಗೆ ತೊಂದರೆಗೆ ಕಾರಣವಾಗುತ್ತದೆ. ಏಕೆಂದರೆ ಇದರಿಂದ ಸಪ್ಲೈಸ್ ಹೋಲ್ಡರುಗಳು ತಮ್ಮ ಕೈಕೆಳಗಿರುವ ವಾರ ಮತ್ತು ಗುತ್ತಿಗೆ ಮಾಡುತ್ತಿರುವವರಿಗೆ indirect ಆಗಿ ತೊಂದರೆ ಕೊಡಲು ಪ್ರಾರಂಭಮಾಡುತ್ತಾರೆ. ಆದ್ದರಿಂದ ಗೊತ್ತಾಗಿ ಎಕರೆಗಿಷ್ಟೆಂದು ಲೆವಿ ಪದ್ಧತಿ ಅನುಸರಿಸುವುದು ಒಳ್ಳೆಯದು. ಆಗ ಬೆಳೆಯತಕ್ಕರೈತನು ತಾನಾಗಿ ಮುಂದೆ ಬಂದು ದವಸವನ್ನು ಕೊಡುವುದಕ್ಕೆ ಅವಕಾಶ ಉಂಟು. ಇದರಿಂದ ಬೆಂಗಳೂರು, ಕೆ. ಜಿ. ಎಫ್, ದಾವಣಗೆರೆ ಈ ಮೂರು ಪ್ರದೇಶಗಳಿಗೆ ಸಾಕಾದಷ್ಟು ಆಹಾರ ಧಾನ್ಯಗಳನ್ನು ಒದಗಿಸಬಹುದು.

ಇನ್ನೊಂದು ವಾದವನ್ನು ಮಾನ್ಯ ಸ್ನೇಹಿತರು ಹೇಳಿದರು. ಹಳ್ಳಿಗಾಡಿನವರಿಂದ ಆಹಾರಪದಾರ್ಥಗಳನ್ನು ತೆಗೆದುಕೊಂಡುಬಂದು ಪಟ್ಟಣದಲ್ಲಿ ವಾಸಮಾಡುತ್ತಿರುವವರಿಗೆ ಕೊಡುವುದು ನ್ಯಾಯವಲ್ಲ, ಸರ್ಕಾರದವರೇ ಬೇರೆಕಡೆಯಿಂದ ತರಿಸಿ ಕೊಡಲಿ ಎಂದು ಹೇಳಿದರು. ಈ ವಾದ ಸಮಂಜಸವಾದುದಲ್ಲ, ಏಕೆಂದರೆ ಪಟ್ಟಣಗಳಲ್ಲಿರತಕ್ಕ ಕಾರ್ಮಿಕರು ಬಟ್ಟೆ ಮತ್ತು ಇತರ ವ್ಯವಸಾಯದ ಉಪಕರಣಗಳನ್ನು ತಯಾರು ಮಾಡಿಕೊಡದೆ ಇದ್ದರೆ ಹಳ್ಳಿಗಾಡಿನವರಿಗೆ ವ್ಯವಸಾಯ ಮಾಡಲು ಹೇಗೆತಾನೆ ಸಾಧ್ಯವಾದೀತು? ಆದ್ದರಿಂದ ಒಬ್ಬರಿಂದೊ

(ಶ್ರೀ ಬಿ. ಟಿ. ಕೆಂಪರಾಜ್).

ಬ್ಬರಿಗೆ ಸಹಾಯವಾಗಬೇಕೆಂಬುದು ಸಹಜವಾದದ್ದು. ಆದ್ದರಿಂದ ಪಟ್ಟಣಿಗರು ಹಳ್ಳಿಗಾಡಿನವರು ಎಂಬ ತಾರತಮ್ಯ ಬಿಟ್ಟುದೇಶದಲ್ಲಿ ಈಗ ಕಂಟ್ರೋಲ್ ತೆಗೆಯಬೇಕೆ ಏಕಾ ಏಕಿ ಆ ಮಾರ್ಗವನ್ನನುಸರಿಸುವುದು ಸರಿಯೇ ಎಂಬ ಪ್ರಶ್ನೆಗೆ ದೇಶದ ಪ್ರತಿಯೊಬ್ಬ ಪ್ರಜೆಯಿಂದಲೂ ಓಟನ್ನು ತೆಗೆದುಕೊಂಡು ಪ್ರತಿನಿಧಿಯಾಗಿ ಬಂದಿರುವ ಈ ಸಭಾ ಸದಸ್ಯರು ತಮ್ಮ ಜವಾಬ್ದಾರಿಯನ್ನರಿತು ಎಲ್ಲರ ಹಿತದೃಷ್ಟಿಯಿಂದ ಯಾವುದಾದರೂ ಸೂಕ್ತವಾದ ನೀತಿಯನ್ನು ಸರ್ಕಾರಕ್ಕೆ ಹಾಕಿಕೊಡುವುದು ಈಗ ಅವಶ್ಯಕವೂ ಸಮಯೋಚಿತವೂ ಆಗಿದೆ. ನನ್ನ ಅಭಿಪ್ರಾಯದಲ್ಲಿ ರೆವಿ ಪದ್ಧತಿಗೆ ಎಲ್ಲರೂ ಸಹಕಾರ ನೀಡಬೇಕಾದದ್ದು ಉತ್ತಮವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ ಮತ್ತು ಸಭಿಕರೇ ಈ ದಿವಸ ನಮ್ಮಮುಂದಿಟ್ಟಿರತಕ್ಕ ಸಮಸ್ಯೆಯ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ನಾನಾ ರೂಪವಾಗಿ ವಿವರಣೆ ಕೊಟ್ಟಿದ್ದಾರೆ. ಆದರೆ ಈಗ ಮುಖ್ಯವಾಗಿ ನಮ್ಮ ಮುಂದಿರುವುದು ಸರ್ಕಾರದವರು ಮುಂದೆ ತರಬೇಕೆಂದಿರುವ ರೆವಿ ಪದ್ಧತಿಯ ವಿಚಾರ. ಅದರ ವಿಷಯವಾಗಿ ಮಾತ್ರ ನಾವು ಮಾತನಾಡಬೇಕಾಗಿದೆ. ಇಡಿಯಲ್ಲಿ ಕಂಟ್ರೋಲ್ ವಿಷಯವಾಗಲಿ, ಡಿ—ಕಂಟ್ರೋಲ್ ವಿಷಯವಾಗಲಿ,—ಆ ಪ್ರಶ್ನೆಯೇ ಬರುವುದಿಲ್ಲವೆಂದು ನನಗೆ ತೋರುತ್ತದೆ.

ಈಗ ದೇಶದಲ್ಲಿ ಹಾಲಿ ಇರುವುದೇನೆಂದರೆ: ಸ್ವಲ್ಪ ಮಟ್ಟಿಗೆ ಹತೋಟಿಯನ್ನು ನಡಿಸಿ ಆಹಾರದ ಸಾಗಾಣಿಕೆಗೆ ಅವಕಾಶವಿದೆ. ಬೆರೆಯುಮಾತ್ರ ನಿಗದಿಯಾಗಿದೆ ಮತ್ತು ಮೂರು ಪಟ್ಟಣಗಳಲ್ಲಿ ಮಾತ್ರ ಸ್ವಾಚ್ಛುಚೀರಿ ಹತೋಟಿ ಮತ್ತು ರೇಷ್ಮೆ ವ್ಯವಸ್ಥೆಯಿದೆ. ಈರೀತಿಯಾಗಿ ಈಗಾಗಲೇ ಸ್ವಲ್ಪಮಟ್ಟಿಗೆ ರಿಯಾಯಿತಿ ಕೊಟ್ಟಿರುವುದರಿಂದ ನಾವು ಕಂಟ್ರೋಲ್ ಅಥವಾ ಡಿ-ಕಂಟ್ರೋಲ್ ಪ್ರಶ್ನೆಯನ್ನು ಹೆಚ್ಚಿಗೆ ಒತ್ತಾಯ ಮಾಡುವುದು ಸೂಕ್ತವಲ್ಲವೆಂದು ಕಾಣುತ್ತದೆ. ಆದ್ದರಿಂದ ನಾನೀಗ ರೆವಿ ವಿಷಯಲ್ಲಿ ಮಾತ್ರ ಒಂದೆರಡು ಮಾತುಗಳನ್ನು ಹೇಳಿ ಆಮೇಲೆ ನಾವು ಯಾವರೀತಿ ವಿಸ್ತಾರಮಾಡಬೇಕೆಂದು ತಿಳಿಸ ಬಯಸುತ್ತೇನೆ. ರೆವಿ ಪದ್ಧತಿಯನ್ನು ಜಾರಿಗೆ ತರೋಣವೆಂದರೆ, ನಾವು ಮೊದಲನೆಯದಾಗಿ ಶ್ರೀ ಮಾ॥ ಪಟ್ಟಾಭಿರಾಮರವರು ಹೇಳಿದ 'wet lands under tanks and wells' ಕಡೆ ಗಮನ ಕೊಡಬೇಕಾಗಿದೆ. ಅವರು ತಿಳಿಸಿದಂತೆ, ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ತದವಾಗಿ ಮಳೆಯಾಗಿರುವುದರಿಂದ ನಾವು ನಿರೀಕ್ಷಣೆ ಮಾಡಿದಷ್ಟು ಬೆಳೆ ಬರುವುದಿಲ್ಲ. ಆದ್ದರಿಂದ ರೆವಿ ಪದ್ಧತಿ ಮೂಲಕ ನಾವು ನಿರೀಕ್ಷಣೆ ಮಾಡಿದಷ್ಟು ಧಾನ್ಯವನ್ನು ವಸೂಲು ಮಾಡುವುದಕ್ಕಾಗುತ್ತದೆಯೇ ಎಂಬ ಆಂಶವನ್ನು ಗಮನಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಹಿಂದೆ ಯಾವ ರೀತಿ ಮಾಡುತ್ತಿದ್ದರೆಂದು, assessment ಮತ್ತು ಪ್ರೊಕ್ಯೂರ್‌ಮೆಂಟ್ ರೀತಿಯನ್ನು ನಮ್ಮ ಮಾಜಿ ಮಂತ್ರಿಗಳು ತಿಳಿಸಿದ್ದಾರೆ. ಈಗ ಹತೋಟಿಯನ್ನು ಸ್ವಲ್ಪಮಟ್ಟಿಗೆ ನಡಿಲಸಿರುವುದರಿಂದ ರೈತರಿಗಿದ್ದ ಅನೇಕ ತೊಂದರೆಗಳು ಹೋಗಿವೆ. ಈಗ ಪ್ರೊಕ್ಯೂರ್‌ಮೆಂಟ್ ಮಾಡಬೇಕಾದರೆ H. S. ಪ್ರಕಾರ ಖಾತೆಯಿರುತ್ತದೆ. ಅದರ ಮೇಲೆ ರಿಯಾಯಿತಿ ಕೇಳಿಕೊಳ್ಳುತ್ತಾರೆ. ಅದರಂತೆ ರಿಯಾಯಿತಿ ತೋರಿಸುವಷ್ಟು ಕೋರಿಸಿ ಬಾಕಿ ವಸೂಲು ಮಾಡಿಕೊಳ್ಳಬಹುದು. ಆದರೆ ರೆವಿ ಸಿಸ್ಟಂ ತಂದರೆ ಎಷ್ಟು ಕಷ್ಟವಾಗುತ್ತದೆಂಬುದನ್ನು ಸಭೆಯ ಗಮನಕ್ಕೆ ತಂದಿದ್ದಾರೆ.

ಶ್ರೀ ಕೆ. ಹನುಮಂತಯ್ಯ.—ಅದರ ವಿಷಯವಾಗಿ ನೀವು ಭಾಷಣ ಮಾಡಬೇಕಾಗಿಲ್ಲ. ನಾವೇ ಅದನ್ನು ಒಪ್ಪಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ನೀವು ಒಪ್ಪಿಕೊಳ್ಳಬಹುದು ಎಂದು ಹೇಳುತ್ತಿದ್ದೇನೆ. ಡಿಮ್ಯಾಂಡ್ ಏನೋ ಒಂದು ಗೊತ್ತುಮಾಡಿ, ಆ ಡಿಮ್ಯಾಂಡಿನಂತೆ, ಕಂದಾಯವನ್ನು ಯಾವರೀತಿ ಗೊತ್ತುಮಾಡಿ ಪಟ್ಟಿಕೊಡುತ್ತೀರೋ ಹಾಗೆ ಇದನ್ನು ಕೊಚ್ಚೇ ತೀರಬೇಕೆಂದು ನಿಗದಿ ಮಾಡಿದರೆ, ಏಷ್ಟು ಕಷ್ಟವಾಗುತ್ತದೆ, ನೋಡಿ. ಈ ಜವಾಬ್ದಾರಿಯನ್ನು ಖಾತೇದಾರನ ಮೇಲೆ ಹೊರಿಸುತ್ತಾರೆಯೇ ಅಥವಾ ಜಮಿನನ್ನು ಮಾಡುವವನ ಮೇಲೆ ಹೊರಿಸುತ್ತಾರೆಯೆ? ಎಂಬ ಪ್ರಶ್ನೆ ಬೇರೆ ಇದೆ. ಏಕೆಂದರೆ ಎಷ್ಟೋ ಸಂದರ್ಭಗಳಲ್ಲಿ ಖಾತೆದಾರನೂ ಇರುತ್ತಾನೆ ಗುತ್ತಿಗೆ ಮಾಡುವವನೂ ಇರುತ್ತಾನೆ. ಜಮಿನನ್ನು ಮಾಡುವವನೇ ಬೇರೆ. ಆಗ್ಗೆ ಜಮಿನುದಾರನ ಮೇಲೆಯೇ ಈ ಜವಾಬ್ದಾರಿಯನ್ನು ಹೊರಿಸುತ್ತಾರೆಯೇ ಅಥವಾ ಜಮಿನನ್ನು ಮಾಡುತ್ತಿರುವವನ ಮೇಲೆ ಹೊರಿಸುತ್ತಾರೆಯೇ ಹೇಳುವುದಕ್ಕಾಗುವುದಿಲ್ಲ. ಇಲ್ಲವೇ ಇಬ್ಬರೂ jointly and severally ಜವಾಬ್ದಾರರಾಗಿರಬೇಕೆಂದು ಹೇಳಬಹುದು. ಆದ್ದರಿಂದ ಈ ವಿಷಯವನ್ನು ನೀವು ಮುಖ್ಯವಾಗಿ ಗಮನಿಸಬೇಕಾಗಿ ಬರುತ್ತದೆ.

ಆದ್ದರಿಂದ ನಮ್ಮ ದೇಶದ ಈ ಆಹಾರ ಸಮಸ್ಯೆಯನ್ನು ಪರಿಹರಿಸಬೇಕಾದರೆ, ನಮ್ಮ ಡೆಮೋಕ್ರಾಟಿಕ್ ಪಾರ್ಟಿ ಸದಸ್ಯರುಗಳು ಹೇಳಿದ ಪ್ರಕಾರ, ಈಗಿರತಕ್ಕ ಭೂ—ವ್ಯವಸ್ಥಾ ಪದ್ಧತಿಯನ್ನು ಬದಲಾಯಿಸಿದೆ ಹೊರತು, ಪ್ರತಿಯೊಬ್ಬಪ್ರಜೆಗೂ ಅವನ ನ್ಯಾಯವಾದ elementary ಹಕ್ಕುಭಾಧ್ಯತೆಗಳನ್ನು ದೊರಕಿಸಿಕೊಟ್ಟ ಹೊರತು, ಬೇರಾವ ರೀತಿಯಿಂದಲೂ ಸಾಧ್ಯವಾಗುವುದಿಲ್ಲ. ಹಾಲಿ ನಮ್ಮದೇಶದಲ್ಲಿ 18 ಲಕ್ಷ ಎಕರೆ ಗಳಷ್ಟು ಜಮಿನು ಪಾಳುಬಿದ್ದಿದೆಯೆಂಬ ಅಂಶವನ್ನು ಶ್ರೀಮಾ॥ ಶ್ರೀನಿವಾಸಯ್ಯಂಗಾರ್‌ರವರು ಅಂಕಿ ಅಂಶಗಳಿಂದ ತೋರಿಸಿಕೊಟ್ಟಿದ್ದಾರೆ. ಈ 18 ಲಕ್ಷ ಎಕರೆ ಗಳನ್ನು ಸರಿಯಾಗಿ ಬೇಸಾಯ ಮಾಡುವ ರೀತಿಯನ್ನನುಸರಿಸಿದರೆ ನಮ್ಮ ದೇಶದಲ್ಲಿ ವ್ಯವಸಾಯ ಅನುಕೂಲವಾಗಿ ನಮ್ಮ ಆಹಾರ ಸಮಸ್ಯೆಯನ್ನು ಪರಿಹಾರಮಾಡುವುದು ಸುಲಭ ಸಾಧ್ಯವೆಂಬುದನ್ನು ಮುಖ್ಯವಾಗಿ ಸರ್ಕಾರದವರು ಗಮನಿಸಬೇಕೆಂದು ನಾನು ಹೇಳುತ್ತೇನೆ.

ಎರಡನೆಯದಾಗಿ ರೈತರು ಲಾಭದ ಬೆಳೆಗಳಾದ ಹೊಗೆಸೊಪ್ಪು, ಕಬ್ಬು, ಕಡಲೇಕಾಯಿ ಮುಂತಾದುವುಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯುವುದಕ್ಕೆ ಪ್ರಾರಂಭಿಸಿದ್ದಾನೆ. ನಾವೀಗ ಆಹಾರ ಸಾಮಗ್ರಿಗಳನ್ನು ಮುಖ್ಯವಾಗಿ ಬೆಳೆಯಬೇಕೆಂಬುದನ್ನು ಅನೇಕ ರೈತರು ಮರೆತಿರುವಂತೆ ಕಾಣುತ್ತದೆ. ಅದಕ್ಕಾಗಿ ಸರ್ಕಾರದವರು ನಮ್ಮ ದೇಶದಲ್ಲಿ ಆಹಾರಸಮಸ್ಯೆ ಸಂಪೂರ್ಣವಾಗಿ ಕೊನೆಗೊಂಡು ಸ್ವಪರಿಪೂರ್ಣತೆಯುಂಟಾಗಿ ಸಾಧಾರಣ ದಿನಗಳು ಬರುವವರೆಗೂ, ಅಂದರೆ ಇನ್ನೂ ಮೂರು ನಾಲ್ಕು ವರ್ಷಗಳತನಕ, ಲಾಭದ ಬೆಳೆಗಳಿಗೆ ಅವಕಾಶಕೊಡದೆ ಬರೀ ಆಹಾರ ಧಾನ್ಯಗಳನ್ನು ಬೆಳೆಯುವಂತೆ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ಹೊಗೆಸೊಪ್ಪು ಬೆಳೆದ ಪ್ರದೇಶದಲ್ಲಿ ಆಹಾರ ಧಾನ್ಯಗಳನ್ನು ಬೆಳೆದರೆ ಇನ್ನೂ ಚೆನ್ನಾಗಿ ಬೆಳೆಯುತ್ತವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದರೂ ಸದ್ಯಕ್ಕೆ ನಮಗೆ ಆಹಾರ ಧಾನ್ಯಗಳು ಹೆಚ್ಚಾಗಿ ಬೇಕಾಗಿರುವುದ

ರಿಂದ ಇನ್ನು ಮೂರು ನಾಲ್ಕುವರ್ಷಗಳು ಬರೀ ಆಹಾರ ಧಾನ್ಯಗಳನ್ನೇ ಬೆಳೆಯಬೇಕೆಂದು ನಿಗದಿಮಾಡಬೇಕೆಂದು ಹೇಳುತ್ತೇನೆ.

ಮೂರನೆಯದಾಗಿ ಕಂಟ್ರೋಲನ್ನು ನಾವು ಈ ರೀತಿ ಸಡಿಲಿಸಿದಮೇಲೆ ನಮ್ಮ ಸೀಮೆಯಲ್ಲಿನ ಧಾನ್ಯ ಪರ ಪ್ರಾಂತಕ್ಕೆ ಸಾಗಿ ಹೋಗುವ ಸಂಭವವಿದೆ. ಇದಕ್ಕೆ ಅವ ಕಾಶವಿಲ್ಲದಂತೆ ಕಟ್ಟುನಿಟ್ಟಾಗಿ ನಿರ್ಬಂಧವನ್ನು ಹಾಕ ಬೇಕು. ಇಷ್ಟೆಲ್ಲಾ ಏರ್ಪಾಡುಗಳನ್ನು ಮಾಡುವು ದಾದರೆ ನಮ್ಮ ಆಹಾರ ಸಮಸ್ಯೆ ನಿರಿಹೋಗುತ್ತದೆಂದು ಹೇಳುತ್ತೇನೆ.

*ಶ್ರೀ ವೆ೦. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಕಂಟ್ರೋಲ್ ವಿಚಾರದಲ್ಲಿ ಅನೇಕ ಸ್ನೇಹಿತರು ಅನೇಕ ತರವಾಗಿ ಸಲಹೆಗಳನ್ನು ಕೊಟ್ಟಿದ್ದಾರೆ. ದೇಶದಲ್ಲಿ ಕಂಟ್ರೋಲ್ ಇರುವವರೆಗೆ ಅನ್ಯಾಯ, ಅಧರ್ಮ, ಅನೀತಿ ತಪ್ಪುವುದಿಲ್ಲ. ದೇಶದಲ್ಲಿ ಮಳೆ ಬೆಳೆ ಆಗುವುದಿಲ್ಲ. ಈ ಕಂಟ್ರೋಲ್ 9—10 ವರ್ಷಗ ಳಿಂದ ಬಂದಿದೆ, ಇವೊತ್ತು ಬಂದಿರುವುದಲ್ಲ. ಈಗ ಕಂಟ್ರೋಲ್ ಇಟ್ಟುಕೊಂಡು ಹೊರಗಡೆಯಿಂದ ಆಹಾರ ವನ್ನು ತರಿಸಿ ಜನಗಳಿಗೆ ಹಂಚಬೇಕಾದರೆ ನಮ್ಮ ಸರ್ಕಾ ರದವರಿಗೆ 1—1½ ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗುತ್ತದೆ. ಲುಕ್ಸಾನು ಆಗುವ ಈ 1½ ಕೋಟಿ ರೂಪಾಯಿಗಳನ್ನು ಅವರಿಗೆ ಬೇಕಾಗಿರತಕ್ಕ ಬೀಜ ಗೊಬ್ಬರ ವಗೈರೆ ಕೊಟ್ಟರೆ ರೈತರು ಸಂತೋಷ ದಿಂದ ಬೆಳೆಯುತ್ತಾರೆ. ರೈತನಿಂದ ದವಸವನ್ನು Controlled rateನಲ್ಲಿ ತಂದುಸಿಟಿಗಳಿಗೆ ಕೊಡಬೇಕಾ ಗಿಲ್ಲ. ಅಂಥ ಕಂಟ್ರೋಲ್‌ನಿಂದ ತಂದ ಅನ್ನವನ್ನು ತಿನ್ನ ಬಾರದು. ರೈತನು ಸಂತೋಷದಿಂದ ಬೆಳೆದು ಪಟ್ಟಣ ದಲ್ಲಿ ಜೀವನ ಮಾಡುವವರಿಗೆ ಮಾರಿದರೆ ರೈತನಿಗೆ ಸಂತೋಷವಾಗುತ್ತದೆ. ತಿನ್ನತಕ್ಕ ಅನ್ನವೂ ಜೀರ್ಣ ವಾಗುತ್ತದೆ, ಮತ್ತು ದೇಶಕ್ಕೂ ಒಳ್ಳೆಯದಾಗುತ್ತದೆ ಎಂದು ನನ್ನ ಭಾವನೆ. ರೈತರ ಮೇಲೆ ಕಂಟ್ರೋಲ್ ಹಾಕಿ, ಅವರಿಗೆ ಹೊಟ್ಟೆ ತುಂಬ ಆಹಾರ ಕೊಡದೆ, ಹಳ್ಳಿಗಳಿಂದ ಆಹಾರವನ್ನು ತಂದು ಪಟ್ಟಣಿಗರಿಗೆ ಕೊಡುವುದು ಧರ್ಮವಲ್ಲ. ಕಂಟ್ರೋಲನ್ನು ಪೂರ್ತಿ ಯಾಗಿ ತೆಗೆಯಬೇಕೆಂದು ಹೇಳುತ್ತೇನೆ, ಮೇರಾಗಿ ತಾವು ಕಂಟ್ರೋಲ್ ಇಟ್ಟಿರುವುದು ದೇಶದ ಮೂರು ಪಟ್ಟಣಗಳಲ್ಲಿ ಮಾತ್ರ ದೇಶವೆಲ್ಲಾ ಒಂದೇ ಎಂದು ನನ್ನ ಭಾವನೆ. ನೀವು ಏತಕ್ಕೆ ಆಹಾರವನ್ನು ಹಳ್ಳಿಗಳಿಂದ ತಂದು ಹಂಚಬೇಕು? ಕಂಟ್ರೋಲ್ ಇಟ್ಟುಕೊಳ್ಳಿ, ಆಹಾರವನ್ನು ಮಾತ್ರ ಹೊರಗಡೆಯಿಂದ ತಂದು ಹಂಚಿ. ಆದರೆ ರೈತನಿಂದ ಮಾತ್ರ ಯಾವಧಾನ್ಯವನ್ನು ವಸೂಲು ಮಾಡಬಾರದು, ಯಾವ ಕಿರುಕುಳವನ್ನೂ ಕೊಡಕೂಡದು. ರೈತರು ಬಡವರು, ಬೇಸಾಯಮಾಡಿ 4-8 ಪಲ್ಲಾ ಭತ್ತ ಬೆಳೆದು ತಾನು ತಿಂದು ಇತರರಿಗೆ ಹಂಚಿದರೆ, ಅತನಿಗೆ ಎಷ್ಟು ಪ್ರೀತಿಯಾಗುತ್ತದೆ ಎಂಬುದು ದೇವರಿಗೆ ಗೊತ್ತು. ಕಂಟ್ರೋಲ್ ತೆಗೆದು ಬಿಡಿ. ರೈತ ಸ್ವಂತ ಬೆಳೆದು ಪಲ್ಲಾ ಒಂದಕ್ಕೆ 5 ರೂಪಾಯಿಗಳಂತೆ ಮಾರಿದರೂ ಸಂತೋಷಪಡುತ್ತಾನೆ. ಆದರೆ ಕಂಟ್ರೋಲ್ ಇಟ್ಟು ಕೊಂಡು ಪಲ್ಲಾಕ್ಕೆ 30 ರೂಪಾಯಿ ಕೊಟ್ಟರೂ ಅವನಿಗೆ ತೃಪ್ತಿಯಾಗುವುದಿಲ್ಲ.

ಸದಸ್ಯರೊಬ್ಬರು.—ಐದು ರೂಪಾಯಿ ಧಾರಣೆ ಆಗುವುದಾದರೆ ಕಂಟ್ರೋಲ್ ಇರಲಿ, ಸ್ವಾಮಿ.

ಶ್ರೀ ವೆ೦. ಎಂ. ಚಂದ್ರಶೇಖರಯ್ಯ.—ಕಂಟ್ರೋಲ್ ರೇಟನ್ನಲ್ಲಾ ಮಾರಿದರೆ ರೈತನಿಗೆ ಸುಖವಿರುವುದಿಲ್ಲ. ನಾನು ಒಬ್ಬ ರೈತ. ರೈತರಿಗೆ ಎಷ್ಟೋಖರ್ಚಾಗುತ್ತದೆ. ಪಲ್ಲಾಕ್ಕೆ 60—70 ರೂ ಖರ್ಚು ಬೀಳುತ್ತದೆ. ರೈತನಿಗೆ ಖರ್ಚು ಕೊಡಿ ಎಂದರೆ ಸಾಧ್ಯವಿಲ್ಲ. ಒಂದು ಎಕರೆಯಲ್ಲಿ ಒಬ್ಬರೈತ 4 ಪಲ್ಲ ರಾಗಿ 2 ಪಲ್ಲ ಹುರುಳಿ ಕಾಳು ಬೆಳೆಯುತ್ತಾನೆ. ಅದನ್ನು ಮಾಡಬೇಕಾದರೆ 320 ರೂ. ಎಕರೆಗೆ ಆಗುತ್ತದೆ. ಬೇಸಾಯ ಕಾಲದಲ್ಲಿ ಹೆಣ್ಣಾಳಿಗೆ 1 ರೂ. ಗಂಡಾಳಿಗೆ 2 ರೂ. ಕೂಲಿಕೊಡ ಬೇಕಾಗುತ್ತದೆ. ಈ ಖರ್ಚನ್ನೆಲ್ಲಾ ಲೆಕ್ಕಹಾಕಿಕೊಂಡು ಆತನಿಗೆ ಸರಿಯಾದ ರೇಟು ಕೊಡುತ್ತಾ ಹೋಗುವುದು ಸರ್ಕಾರದವರಿಗೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಕಂಟ್ರೋಲ್ ತೆಗೆಯಬೇಕು, ಸರಿಯಾದ ಮಾರ್ಕೆಟ್ ಬರಬೇಕು, ರೈತನಿಗೆ ಸಹಾಯ ಒದಗಬೇಕು, ಹೀಗೆ ಮಾಡಿದರೇನೆ ರೈತನಿಗೆ ಸಹಾಯವಾಗುವುದು.

ನಮ್ಮ ಮೈಸೂರು ದೇಶದಲ್ಲಿ ಒಂದು ಎಕರೆಯೊಳಗೆ ಈಗ ಬೆಳೆಯುವುದಕ್ಕಿಂತ 1 ಪಲ್ಲ ಹೆಚ್ಚಿಗೆ ಬೆಳೆದರೆ ಅದ ರಿಂದ ಆತನಿಗೆ ಸಹಾಯವಾಗುತ್ತದೆ. ಆಗ ನೀವು ಹೊರಗಿನಿಂದ ಆಹಾರ ತರಿಸಬೇಕಾಗಿಲ್ಲ, ಕಂಟ್ರೋಲು ಇರಬೇಕಾಗಿಲ್ಲ, ದೇಶದಲ್ಲಿ ಸುಭಿಕ್ಷೆವಾಗುತ್ತದೆ. ಕಂಟ್ರೋಲ್ ತೆಗೆದರೆ ಈ 10 ವರ್ಷಗಳಿಂದಲೂ ಇದ್ದ ಪದ್ಧತಿ ತಪ್ಪಿ ಮಹಾತ್ಮ ಗಾಂಧಿಯವರು ಹೇಳಿದಂತೆ ರೈತರು ಸುಖವಾಗಿ ಬಾಳುವುದಕ್ಕೆ ಸಹಾಯವಾಗುವು ದಲ್ಲದೆ ದೇಶದಲ್ಲಿ ನ್ಯಾಯ ಇರುತ್ತದೆ, ಅನೀತಿ ಹೋಗು ತ್ತದೆ, ಅನ್ಯಾಯ ಹೋಗುತ್ತದೆ, ಬ್ಲಾಕ್‌ಮಾರ್ಕೆಟ್ ಹೋಗುತ್ತದೆ. ಅನೇಕ ಜನ ಅಧಿಕಾರವರ್ಗದವರು ಮಹಡಿಮನೆಕಟ್ಟುವುದು ತಪ್ಪುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಸ್ವಾಮಿ, ಅಧ್ಯಕ್ಷರೇ, ಎರಡು ದಿವಸಗಳ ಕಾಲ ನಡೆದ ಚರ್ಚೆಯಲ್ಲಿ, ಸುಮಾರು 26 ಮಾನ್ಯ ಸದಸ್ಯರು ಭಾಗವಹಿಸಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ; ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದ ಕ್ಕಾಗಿ, ನಾನು ಅವರನ್ನು ಹೃತ್ಪೂರ್ವಕವಾಗಿ ವಂದಿ ಸುತ್ತೇನೆ. ಈ ಚರ್ಚೆಯಲ್ಲಿ ಹೊರಪಟ್ಟ ಅಂಶಗಳಲ್ಲಿ ಮುಖ್ಯವಾಗಿ ಒಂದೆರಡು ಅಂಶಗಳನ್ನು ನಾನು ಜವಾಬು ಕೊಡುವ ಕಾಲದಲ್ಲಿ ತಿಳಿಸಲು ಅಪೇಕ್ಷೆ ಪಡು ತ್ತೇನೆ. ವಿರೋಧ ಪಕ್ಷದ ಸದಸ್ಯರಾದ ಶ್ರೀ ಹುಚ್ಚೇ ಗೌಡರು ಮತ್ತು ಶ್ರೀ ಗೋಪಾಲಗೌಡರು, ನಮಗೆ ಯಾವ ತರಹ ಪ್ಲಾನ್ ಇಲ್ಲ, ಯಾವುದೂ ಇಲ್ಲ; ಸುಮ್ಮನೆ ಕಣ್ಣು ಮುಚ್ಚಿಕೊಂಡು ಹೋಗುತ್ತಿದ್ದಾರೆ ಎನ್ನತಕ್ಕಂಥ ದೋರಣಿ ಬರುವ ರೀತಿಯಲ್ಲಿ ಮಾತನಾಡಿದರು. ಇಷ್ಟು ಮಟ್ಟಿಗೆ ನಾನು ಅವರಿಗೆ ಹೇಳುತ್ತೇನೆ. ನನಗಂತೂ ದೇವರಲ್ಲಿ ಅಚಲವಾದ ನಂಬಿಕೆ ಇದೆ. ಮನುಷ್ಯ ಪ್ರಯತ್ನ ಮಾಡಬೇಕು, ಫಲಕೊಡುವವನು ಪರಮಾತ್ಮ ಎನ್ನುವ ನಂಬಿಕೆ ನನಗಿದೆ. ನನ್ನ ಮಾನ್ಯ ಸ್ನೇಹಿತ ರಾದ ಗೋಪಾಲಗೌಡರಿಗೆ ಆ ರೀತಿಯಾದ ನಂಬಿಕೆ ಇದೆಯೋ ಇಲ್ಲವೋ ಗೊತ್ತಿಲ್ಲ, ಕಾರಣ ಇಷ್ಟೇ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ದೇಶದ ಅಭಿಪ್ರಾ ಯವನ್ನು ಬಹಳ ಸ್ಪಷ್ಟವಾಗಿ ಈ ಸಭೆಯಲ್ಲಿ ಮೂಡಿಸಿ ದರು. ಕೆಲವು ಕಾಲ ಮುಂಗಾರು ಮಳೆ ಹೋದಾಗ ದೇಶದಲ್ಲಿ ಉಂಟಾದ ಹಾಹಾಕಾರವನ್ನು ನೆನಸಿ ಕೊಂಡರೆ ಎಂಥ ವಜ್ರದ ಎದೆಯಾದರೂ ಸ್ವಲ್ಪ ಮೃದುವಾಗ ಬೇಕು, ಒಂದೇ ಸಾರಿ ಬೆಂಕಿ ಹೊರಟ ಹಾಗೆ ಹೊರಟಿತು. ಮುಂಗಾರುಮಳೆ ಅನಿರೀಕ್ಷಿತವಾಗಿ ಇಲ್ಲದೆ ಇದ್ದ ಪರಿಸ್ಥಿತಿ ಒದಗಿತು. ಏನು ಮಾಡಬೇಕು? ಡಿಪೋಗಳ ಮೇಲೆ ಒತ್ತಡ 40-50 ವರ್ಷಗಳ ರಿಕಾರ್ಡಿ ನಲ್ಲೂ ನೋಡಿಲ್ಲದ ರೀತಿಯಲ್ಲಿ ಬಹಳ ಪಾಸ್ತಿ ಆಯಿತು. ಒಂದೊಂದು ಕಾಲದಲ್ಲಿ ಮೇ ಮತ್ತು ಜೂನ್ ತಿಂಗಳು

(ಶ್ರೀ ಎಚ್. ಸಿದ್ದವೀರಪ್ಪ).

ಗಳಲ್ಲಿ ಉಗ್ರಾಣದಲ್ಲಿ ದಾಸ್ತಾನು ಮಾಡುವುದಕ್ಕೆ ಜಾಗವೇ ಇಲ್ಲದೆ ಇರುವ ಸ್ಥಿತಿಯಿರುತ್ತಿತ್ತು. ಆದರೆ ಒಂದೆರಡು ತಿಂಗಳ ಕಾಲ ಪರಮಾತ್ಮನ ಕೃಪೆ ಇಲ್ಲದೆ ಹೋಗಿ ಇಡೀ ಚಿತ್ರವೇ ಭೀಕರವಾಗಿ ಕಾಣತಕ್ಕ ಪರಿಸ್ಥಿತಿ ಬಂತು. ಶರಣರು ಹೇಳಿದ ಹಾಗೆ, ದೇವರು ಒಲಿದರೆ ಒಣಮರವೇ ಚಿಗುರುತ್ತದೆ ಎಂಬಂತೆ, ದೇವರು ಕೃಪೆ ಮಾಡಿದುದರಿಂದ ಒಂದೆರಡು ಹದ ಮಳೆ ಬಂದು ಶಾಂತಿಯಾಯಿತು. ಆಗಿನ ಪರಿಸ್ಥಿತಿಯಲ್ಲಿ ನನಗೆ ಬಂದಿರತಕ್ಕ ರಿಪೋರ್ಟ್ ನೋಡಿದರೆ ಅಲ್ಲಲ್ಲಿ ಅಶಾಂತಿ ವಾತಾವರಣ ತಲೆದೋರುವಂತೆ ತೋರುತ್ತಿತ್ತು. ಮಳೆ ಬಂದ ಕೂಡಲೇ ಒಂದೇಸಾರಿ ಶಾಂತಿ ಬಂತು. ಮಳೆ ಬಂದ ತಕ್ಷಣ ಬೆಳೆಬರಲಿಲ್ಲ. ಹಗೇವುಗಳಲ್ಲಿ ಧಾನ್ಯ ತುಂಬಲಿಲ್ಲ. ಆದರೆ ಮನಸ್ಸಿನ ಶಾಂತಿ ಜನಗಳಲ್ಲಿ ಮೂಡುವುದಕ್ಕೆ ಪ್ರಾರಂಭವಾಯಿತು. ಆಗ ರೂಪಾಯಿಗೆ 2 ಸೇರು ರಾಗಿ ಸಿಕ್ಕುತ್ತಿತ್ತು. ಅದು 1½ ಸೇರಿನವರೆಗೂ ಹೋಯಿತು. ವಾತಾವರಣ ಹೀಗೆ ಇರುವಾಗ ಮಳೆ ಬಂತು. ಆ ಸಮಯದಲ್ಲಿ ನಾನು ನಮ್ಮನೆ ಅಕಸ್ಮಾತ್ತಾಗಿ ಹರಿಹರದ ಸಂತೆಗೆ ಹೋದಾಗ, ಆ ಹೊತ್ತಿನ ದಿವಸ 230 ಚೀಲ ಅಕ್ಕಿ ಸಂತೆಯಲ್ಲಿ ಇತ್ತು. ಎಲ್ಲಿಂದ ಬಂತು? ಮಳೆ ಬಂದು ಶಾಂತಿಯಾದರೆ ಜನಗಳ ಮನಸ್ಸಿಗೆ ಶಾಂತಿಯಾಗುತ್ತದೆ. ನಾವು ಏನೇ ಪ್ಲಾನು ಹಾಕಿದರೂ, ನಮಗಿಂತಲೂ ಹೆಚ್ಚಿನ ಪ್ಲಾನು ಹಾಕುವವನು ಒಬ್ಬನು ಇದ್ದಾನೆ. ನಮ್ಮ ಪ್ಲಾನಿಗೆ ಅನುಸರಿಸಿ ನಾವು ನಡೆಯಬೇಕಾದರೆ, ನಮಗೆ ದೇವರ ಪ್ಲಾನಿನ ಸಹಾಯವೂ ಬೇಕು. ಈ ಸಮಯದಲ್ಲಿ ಒಂದು ವಿಚಾರ ಹೇಳುತ್ತೇನೆ. ಮನುಷ್ಯ ತನ್ನ ಬುದ್ಧಿ ಶಕ್ತಿಗೆ ತಕ್ಕಂತೆ ಎಷ್ಟು ಬೇಕಾದರೂ ರಕ್ಕಹಾಕಬಹುದು. ಅದೂ ಮತ್ತು ಆಹಾರ ಪರಿಸ್ಥಿತಿಯೂ ಒಂದೇ ಎಂದು ಹೇಳುವುದಕ್ಕಾಗುವುದಿಲ್ಲ. ಅದು 2+2=4 ಎಂದು ಹೇಳುವಷ್ಟು ಸುಲಭವಲ್ಲ. ಈ ಹೊತ್ತು ಒಂದು ವಾತಾವರಣ ಇರುತ್ತದೆ, ನಾಳೆ ಇನ್ನೊಂದು ವಾತಾವರಣ ಇರುತ್ತದೆ. ಸರ್ಕಾರದವರು ಆಯಾ ಕಾಲಕ್ಕೆ ತಕ್ಕಂತೆ, ಆಗಿನ ಪರಿಸ್ಥಿತಿಗನುಗುಣವಾಗಿ ತಮ್ಮ ನೀತಿಯನ್ನು ಮಾರ್ಪಡಿಸಬೇಕಾಗಿದೆಯೇ ವಿನಾ ಒಂದೇ ವಿಧವಾಗಿ ಮುಂದುವರಿಯುತ್ತೇವೆ ಎನ್ನುವುದು ಬಹಳ ಕಷ್ಟ ಎಂದು ಈ ಸಮಯದಲ್ಲಿ ನಾನು ಹೇಳಬೇಕಾಗಿದೆ. ಶ್ರೀ ಪಟ್ಟಾಭಿ ರಾಮನ್‌ರವರು ಆ ಒಂದಂಶವನ್ನು ಸ್ಪಷ್ಟಪಡಿಸಿದರು. ಅವರ ಅಭಿಪ್ರಾಯಕ್ಕೆ ನಾನು ಯಾವಾಗಲೂ ಮನ್ನಣೆ ಕೊಡುತ್ತೇನೆ. ಅವರು ಹೇಳಿದ ಒಂದು ಅಂಶವನ್ನು ಈ ಸಮಯದಲ್ಲಿ ಹೇಳಬೇಕಾಗಿದೆ. ಏನೋ ಎದೆಯಲ್ಲಿ ಅಳಕುತನ ಕಂಡುಬರುತ್ತಿದೆ, ಧೈರ್ಯ ಕಂಡುಬಂದಿಲ್ಲ ಇದರಲ್ಲಿ ನೀತಿಯಿಲ್ಲ ಎನ್ನುವ ವಾದವನ್ನು ಹೇಳಿದರು. ಇಷ್ಟು ಹೇಳುತ್ತೇನೆ. ಆಹಾರದ ಪ್ರಶ್ನೆಯನ್ನು ಹೊತ್ತುಕೊಂಡಮೇಲೆ ನಡೆಯಬೇಕಾದರೆ, ಒಂದು ತಂತಿಯ ಮೇಲೆ ನಡೆದಾಗ ಆ ಕಡೆ ಈ ಕಡೆ ನೋಡಿಕೊಂಡು balance ಮಾಡಿ ನಡೆಯುವುದು ಹೇಗೆ ಸ್ವಾಭಾವಿಕವೋ, ಹಾಗೆಯೇ ಹೋಗಬೇಕಾಗುತ್ತದೆ. ಒಂದು ತಪ್ಪು ಹೆಜ್ಜೆ ಇಟ್ಟರೆ ಅದರ ದುಷ್ಪರಿಣಾಮ ದೇಶದಲ್ಲಿ ಯಾವರೀತಿ ಆಗುತ್ತದೆ ಎಂಬುದನ್ನು ಯೋಚನೆ ಮಾಡಲೇಬೇಕು ಎನ್ನುವ ಅಂಶವನ್ನು ನಾನು ಅವರ ಗಮನಕ್ಕೆ ತರುತ್ತೇನೆ.

ಇನ್ನು control ತಗೆಯಬೇಕು ಎಂದು ಎಲ್ಲಾ ಸದಸ್ಯರೂ ಒಂದು ವಾದವನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಅದಕ್ಕೆ ನನ್ನ ಧನ್ಯವಾದಗಳು. ಸರ್ಕಾರದ ನೀತಿ ಅವರ ನೀತಿಗೆ ಒಳಪಡುವುದರಿಂದ, ಸರ್ಕಾರದ ನೀತಿಗೆ ಹೆಚ್ಚಿನ ಪುರಸ್ಕಾರ ಪ್ರೋತ್ಸಾಹ ದೊರೆತಿರುವುದರಿಂದ, ನನಗೆ ತುಂಬಾ ಸಂತೋಷವಾಗುತ್ತದೆ. ಇನ್ನು ಹೆಚ್ಚಿನದಾಗಿ, ಆಹಾರ ಪರಿಸ್ಥಿತಿ ಎಷ್ಟು ವರ್ಷಗಳಕಾಲ ಈ ರೀತಿ ಇರುವುದು? ನುಮಾರು 10 ವರ್ಷಗಳಿಂದಲೂ ಇದೆ; ಯುದ್ಧ ಬಿಟ್ಟು ಹೋದರೂ, ಮಳೆ ಬಿಟ್ಟರೂ ಮರದ ಹನಿ ಬಡಲಲ್ಲ ಎಂಬಂತೆ, ಎಷ್ಟು ವರ್ಷಗಳ ಕಾಲವಿಂದ ಕಾಡುತ್ತಿದೆ ಎಂಬ ಅಂಶವನ್ನು ಹುಚ್ಚೇಗೌಡರು ಎತ್ತಿದರು. ಕೆಲವರು, control ಇರುವವರೆಗೂ ಆಹಾರದ ಅಭಾವ ಹೋಗುವುದಿಲ್ಲ ಎಂದು ಹೇಳಿದರು. Control ಕಿರುಕುಳದಿಂದ ರೈತರು ಭಯಗ್ರಸ್ತರಾಗಿ (money crops) ದುಡ್ಡಿನ ವಸ್ತುಗಳನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ ಎಂಬ ಅಂಶವನ್ನು ಕೆಲವರು ಹೇಳಿದರು. ಈ ಸಮಯದಲ್ಲಿ ಅಂಕಿ ಅಂಶಗಳನ್ನು ಮುಚ್ಚಿಡಲು ನನಗೆ ಇಷ್ಟವಿಲ್ಲ, ಏತಕ್ಕೆಂದರೆ: ಇದು ಜನಜೀವನದ ಪ್ರಶ್ನೆಯಾಗಿರುವುದರಿಂದ ಇರತಕ್ಕ ಸ್ಥಿತಿಯನ್ನು ದೇಶದ ಮುಂದೆ ಇಡುವುದು ಬಹಳ ಮುಖ್ಯ ಎಂದು ತಿಳಿದಿದ್ದೇನೆ. ಒಟ್ಟಿನಲ್ಲಿ, ನಮ್ಮ ದೇಶದಲ್ಲಿ ಇರತಕ್ಕಂಥ ಒಟ್ಟು ಪ್ರದೇಶದಲ್ಲಿ 62 ಲಕ್ಷ ಎಕರೆ ಜಮೀನು ಸಾಗುವಳಿಯಲ್ಲಿ ಇದ್ದು 1,496,693 ಎಕರೆ current fallows (ಬಂಜರು ಜಮೀನು). ಅದರಲ್ಲಿ 166,657 ತರೀ ಜಮೀನು ಸಹ ಬಂಜರಿನಲ್ಲಿ ಇದೆ ಎಂದು ಕಂಡುಬಂದಿದೆ. 33 ಲಕ್ಷ ಎಕರೆ ಆಹಾರ ಪ್ರದೇಶ.....

ಒಬ್ಬ ಸದಸ್ಯರು.—ರಾಗಿ ಎಷ್ಟು?

ಶ್ರೀ ಎಚ್. ಸಿದ್ದವೀರಪ್ಪ.—ಒಟ್ಟಿನಲ್ಲಿ ಹೇಳುತ್ತೇನೆ. I do not want to hide anything from this House. I have taken you into my full confidence. ಆಹಾರದ ದಿನಸಿಗಳ ಅಂಕಿ ಅಂಶ 1945-46 ರಿಂದ ಇವೆ. ಒಟ್ಟಿಗೆ ಹೇಳಬೇಕು ಎಂದರೆ:

1945—46ರಲ್ಲಿ	...	36ಲಕ್ಷ 33 ಸಾವಿರ ಟಿಲ್ಲರೆಎಕರೆ
1946—47ರಲ್ಲಿ	...	35ಲಕ್ಷ 58 ಸಾವಿರ ಟಿಲ್ಲರೆಎಕರೆ
1947—48ರಲ್ಲಿ	...	32ಲಕ್ಷ 37 ಸಾವಿರ ಟಿಲ್ಲರೆಎಕರೆ
1948—49ರಲ್ಲಿ	...	30ಲಕ್ಷ 17 ಸಾವಿರ ಟಿಲ್ಲರೆಎಕರೆ
1949—50ರಲ್ಲಿ	...	32ಲಕ್ಷ 75 ಸಾವಿರ ಟಿಲ್ಲರೆಎಕರೆ
1950—51ರಲ್ಲಿ	...	33ಲಕ್ಷ 8 ಸಾವಿರ ಟಿಲ್ಲರೆಎಕರೆ
1951—52ರಲ್ಲಿ	...	30ಲಕ್ಷ 50 ಸಾವಿರ ಟಿಲ್ಲರೆಎಕರೆ

1951-52ರಲ್ಲಿ ಅಷ್ಟು ಕಡಮೆಯಾಗುವುದಕ್ಕೆ ಕಾರಣ ಕೊಡಬೇಕೆಂದರೆ, 3 ಡಿಸ್ಟ್ರಿಕ್ಟುಗಳಲ್ಲಿ ರಾಗಿ, ಕುಷ್ಕಿ ಫಸಲು ಸಂಪೂರ್ಣವಾಗಿ ಕೆಟ್ಟು ಹೋಗಿತ್ತು. ಮಳೆ ಬೆಳೆ ಇಲ್ಲದ ಪರಿಸ್ಥಿತಿಯಿಂದ ಅಷ್ಟು ಕಡಮೆ ಆಯಿತು ಎಂದು explanation ಕೊಡುತ್ತೇನೆ. ಇನ್ನು cash crops ವಿಚಾರ ಹೀಗೆ ಇತ್ತು.—

		ಎಕರೆಗಳು
1946—47 ರಲ್ಲಿ	...	359,077
1947—48 ರಲ್ಲಿ	...	399,374
1948—49 ರಲ್ಲಿ	...	408,402
1949—50 ರಲ್ಲಿ	...	468,313
1950—51 ರಲ್ಲಿ	...	506,432
1951—52 ರಲ್ಲಿ	...	585,818

(Interruption) I have told you. I am giving figures with a purpose. I want you to kindly bear with me. Then Grow

More Food Campaign ಗೋಸ್ಕರ 3 ವರ್ಷಗಳಲ್ಲಿ ಅಂದರೆ 1949–50, 1950–51 ಮತ್ತು 1951-52ರಲ್ಲಿ 3,37,77,855 ರೂಪಾಯಿಗಳನ್ನು ನಾವು ಖರ್ಚುಮಾಡಿದೆವು. Grow More Food Campaignನ ಬಹುಭಾಗ ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿಸುವುದಕ್ಕೂ, ಮೈನರ್ ಕೆರೆಗಳ ರಿಪೇರಿ ಮಾಡುವುದಕ್ಕೂ ಮತ್ತು ಇದೇ ರೀತಿಯ ಸಾರೋದ್ಧಾರ ಕೆಲಸಗಳಿಗೆ ಖರ್ಚಾಗಿದೆ.

ಒಟ್ಟಿನಲ್ಲಿ ಸರ್ಕಾರ ವ್ಯವಸಾಯಗಾರರಿಗೆ ಬೇಕಾದ ಸಹಾಯಗಳನ್ನು ಮಾಡುವುದಕ್ಕೆ ಹಿಂಜರಿದಿಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ. ಇದರಲ್ಲಿ ಒಂದು ನ್ಯೂನತೆಯೆಂದರೆ, ಆಹಾರ ದವಸವನ್ನು ಬೆಳೆಯುವ ಕಡೆ ನಮ್ಮ ವ್ಯವಸಾಯಗಾರರ ಮನಸ್ಸು ಹೋಗದಿರಲು ಕಾರಣ ಒಂದಿದೆಯೆಂದು ಊಹಿಸಬಹುದು —ಇದೊಂದೇ ಕಾರಣವೆಂದು ಹೇಳುವುದಕ್ಕಾಗುವುದಿಲ್ಲ. ಆಹಾರ ಧಾನ್ಯಕ್ಕೆ ಎಕ್ಕ ಬೆಳೆಗಳಷ್ಟು ಧಾರಣೆ ಬರುವುದಿಲ್ಲ. Huge price disparity between money crop and food crop ಇರುವುದು ಒಂದು ಪ್ರಬಲವಾದ ಕಾರಣವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಕಂಟ್ರೋಲುಗಳ ದೆಸೆಯಿಂದ ಇಷ್ಟು ವರ್ಷಗಳ ಕಾಲ ರೈತ ನೊಂದು ನೊಂದು ಬೇಸರವಾಗಿ ತನಗೆ ಎಷ್ಟು ಆಹಾರ ದವಸ ಬೇಕೋ ಅಷ್ಟು ಮಾತ್ರ ಬೆಳೆಯುವುದಕ್ಕೆ ಪ್ರಯತ್ನಮಾಡುತ್ತಿದ್ದಾನೆಯೋ ಏನೋ ಎಂದು ಅಂಕಿ ಅಂಶಗಳನ್ನು ನೋಡಿ ಪ್ರಬಲವಾಗಿ ಊಹಿಸಬಹುದು. ಏನೇ ಆಗಲಿ ಸರ್ಕಾರ ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವ ಕಾಲ ಬಂದಿದೆ. ಇದರಲ್ಲಿರುವ ಲೋಪದೋಷಗಳೇನು, ನ್ಯೂನತೆಗಳೇನು, ಇವುಗಳನ್ನು ಪರಿಹಾರ ಮಾಡುವುದಕ್ಕೆ ಏನು ಮಾರ್ಗಗಳನ್ನು ಕಂಡುಹಿಡಿಯಬೇಕು, ಹೇಗೆ ಮಾಡಬೇಕು ಎಂಬುದನ್ನು ಶೀಘ್ರವಾಗಿ, ಕೂಡಲೇ ಯೋಚನೆ ಮಾಡುತ್ತೇವೆ ಎಂಬುದಾಗಿ ಈ ಸಮಯದಲ್ಲಿ ಹೇಳುತ್ತೇನೆ.

ಮಾನ್ಯ ಸ್ನೇಹಿತರಾದ ಶ್ರೀಮಾನ್ ರಂದ್ರಪ್ಪನವರೂ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರೂ ಪ್ರಕೃತ ಪರಿಸ್ಥಿತಿಯನ್ನು ಮರೆಯಬೇಡಿ ಎಂದು ಎಚ್ಚರಿಸಿದರು. ಈಗಿನ ಪರಿಸ್ಥಿತಿಯನ್ನು, ಆಹಾರಾಭಾವದಿಂದ ಜನರು ಆ ಪ್ರದೇಶದಲ್ಲಿ ಪಡುತ್ತಿರುವ ಕಷ್ಟವನ್ನು ನೋಡಿ ಅವರು ಬಹಳವಾಗಿ ನೊಂದಿದ್ದಾರೆಂಬುದು ಅವರ ಮಾತಿನಿಂದ ಎದ್ದುಕಾಣುತ್ತದೆ. ಒಂದಂಶವನ್ನು ಈ ಸಮಯದಲ್ಲಿ ಸಭೆಯ ಗಮನಕ್ಕೆ ತರುವುದು ಸೂಕ್ತವೆಂದು ಕಾಣುತ್ತದೆ. ಹತ್ತು ಹೆನ್ನೆರಡು ವರ್ಷಗಳ ಕಾಲ ಧಾರಣೆ ಚೆನ್ನಾಗಿತ್ತು. ಸೇಂಗಾಯಿ 60—70 ರೂಪಾಯಿ ಮೇಲೆ ಹೋಗಿತ್ತು. ಹತ್ತಿ ಮಣಕ್ಕೆ 15—16 ರೂಪಾಯಿಗೆ ಮಾರಾಟವಾಯಿತು. ಹೀಗಿದ್ದರೂ ಅಕಸ್ಮಾತ್ ಒಂದು ವರ್ಷ ಕಷ್ಟ ಬಂದರೂ ತಡೆದುಕೊಳ್ಳುವ ಶಕ್ತಿ ನಮ್ಮ ರೈತರಿಗೆ ಇಲ್ಲವಲ್ಲ, ಈ staying power ಎನ್ನುವುದು ಇವರಲ್ಲಿಲ್ಲವಲ್ಲಾ ಎಂಬುದನ್ನು ಯೋಚನೆ ಮಾಡುವ ಕಾಲ ಸರ್ಕಾರಕ್ಕೆ ಬಂದಿದೆ.

ಈ ಕಂಟ್ರೋಲ್ ವಿಚಾರದಲ್ಲಿ ಇನ್ನೊಂದು ಅಂಶವನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಇದೊಂದು ಅಖಿಲಭಾರತಕ್ಕೆ ಸಂಬಂಧಪಟ್ಟ ವಿಷಯ. ಇಡೀ ಇಂಡಿಯಾ ದೇಶವೇ ಒಂದು ಕ್ಷೇತ್ರವೆಂದು ತಿಳಿದುಕೊಂಡಿದ್ದೇವೆ. ಇತ್ತೀಚೆಗೆ ಇಂಡಿಯಾ ಸರ್ಕಾರದ ಧೋರಣೆ ಯಾವ ರೀತಿ ಹೋಗುತ್ತಿದೆ ಎಂಬುದನ್ನು ಗಮನಿಸಿದರೆ, ಅದು ಒಂದು ದಾರಿಯನ್ನು ತೋರಿಸುತ್ತದೆಯೋ ಏನೋ ಎನ್ನಿಸುತ್ತದೆ. ಇದು ವ್ಯತ್ತ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಭಾರತ ಸರ್ಕಾರದ ಆಹಾರ ಮಂತ್ರಿಗಳು ಮಾಡಿದ ಭಾಷಣದ ವರದಿಯನ್ನು ನೋಡಿದರೆ ವ್ಯಕ್ತವಾಗುತ್ತದೆ. ಭಾರತ ಸರ್ಕಾರದ ಆಹಾರ ಮಂತ್ರಿಗಳ ಆಹ್ವಾನದ ಮೇರೆ ನಾನು 27ನೆಯ ತಾರೀಖು ಅವರನ್ನು ಬೊಂಬಾಯಿನಲ್ಲಿ ನೋಡುವವನಾಗಿದ್ದೇನೆ. ಆಗ ಈ ವಿಷಯದಲ್ಲಿ ಈ ಸಭೆಯ ಅಭಿಪ್ರಾಯವೇನು, ನಮ್ಮ ದೇಶದ ಜನರ ಅಭಿಪ್ರಾಯವೇನು ಎಂಬುದನ್ನೆಲ್ಲಾ ಕ್ರೋಡೀಕರಿಸಿ ತಿಳಿಸುತ್ತೇನೆ. ಒಟ್ಟಿನಲ್ಲಿ ಇಷ್ಟನ್ನು ಹೇಳಬಯಸುತ್ತೇನೆ. ಸರ್ಕಾರ ಯಾವ ದೃಷ್ಟಿಯಿಂದಲೂ ಈ ಕಂಟ್ರೋಲನ್ನು ಇನ್ನೂ ಅನೇಕ ಕಾಲ ನಡಸಿಕೊಂಡು ಹೋಗಬೇಕೆಂಬ ಮನಸ್ಸಿನಿಂದ ಕೂಡಿಲ್ಲವೆಂಬುದನ್ನು ಖಚಿತವಾಗಿ ಹೇಳುತ್ತೇನೆ. ಈ ಸಂದರ್ಭದಲ್ಲಿ ಕಂಟ್ರೋಲ್ ಇರಲಿ ಅಥವಾ ಇಲ್ಲದಿರಲಿ ಕೆಲವು ದವಸಗಳನ್ನು ನಾವು ಶೇಖರಣೆ ಮಾಡಬೇಕಾದುದು ಅತ್ಯಾವಶ್ಯಕ ಮತ್ತು ಅನಿವಾರ್ಯ ಎಂಬುದನ್ನು ಈ ಸಭೆಯಲ್ಲಿರುವ ಎಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ. ಡಿ-ಕಂಟ್ರೋಲ್ ಮಾಡಿದರೆ ಫೇರ್ ಪ್ರೈಸ್ ಷಾಪ್‌ಗಳನ್ನಿಚ್ಚೇ ಇಡಬೇಕೆ, ಕಂಟ್ರೋಲ್ ಇದ್ದರೆ ಏನು ಮಾಡಬೇಕು ಎಂಬುದನ್ನೆಲ್ಲಾ ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ಆಹಾರ ಧಾನ್ಯವನ್ನು ಸಂಗ್ರಹಣೆ ಮಾಡಬೇಕೆಂಬುದು ನಿರ್ವಿವಾದವಾದ ವಿಚಾರ. ಯಾವ ರೀತಿ ಮಾಡಬೇಕು, ಹೇಗೆ ಮಾಡಬೇಕು ಎಂಬ ವಿಷಯದಲ್ಲಿ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ಮಾದಯ್ಯನವರು ಒಂದು ತಿದ್ದುಪಡಿಯನ್ನು ಕೂಡ ಸಭೆಯು ಮುಂದಿಟ್ಟಿದ್ದಾರೆ. ಅವರ ತಿದ್ದುಪಡಿಯ ವಿಷಯದಲ್ಲಿ ಒಂದೆರಡು ಮಾತುಗಳನ್ನುಹೇಳುವುದು ಪ್ರಕೃತವೆಂದುತೋರುತ್ತದೆ. ಯಾರಿಗೆ ಆಹಾರ ದವಸವನ್ನು ಕೊಡತಕ್ಕ ಶಕ್ತಿ ಇದೆಯೋ ಯಾರು ಕೊಡ ಬಲ್ಲರೋ ಅಂಥವರಿಂದ ಮಾತ್ರ ಖರೀದು ಮಾಡಿ, ಶಕ್ತಿಯಿಲ್ಲದಿದ್ದವರಿಂದ ಮಾಡಬೇಡಿ ಎಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆಂದು ಕಾಣುತ್ತದೆ. ಸರ್ಕಾರದವರು ಮಾಡುವುದೂ ಅಷ್ಟೆ. ಯಾರಲ್ಲಿ ಹೆಚ್ಚು ಧಾನ್ಯವಿದೆಯೋ ಅವರಿಂದ ತೆಗೆದುಕೊಳ್ಳಬೇಕೇ ಹೊರತು ಇಲ್ಲದಿದ್ದವರಿಂದ ತೆಗೆದುಕೊಳ್ಳುವುದೇ ಇಲ್ಲ.

ಇದರಲ್ಲಿ ಇನ್ನೊಂದು ಅರ್ಥವಿದೆಯೆಂದು ಕಾಣುತ್ತದೆ. ಅದೇನೆಂದರೆ, ಸಣ್ಣ ಸಣ್ಣವರನ್ನು ಕಿರುಕುಳ ಮಾಡಬೇಡಿ ಎಂಬ ಅರ್ಥವೂ ಇದರಲ್ಲಿದೆಯೆಂದು ಊಹಿಸುತ್ತೇನೆ. ಸರ್ಕಾರದ ದೃಷ್ಟಿಯಲ್ಲಿ ಯಾರಿಂದ ಸಾಮಗ್ರಿಗಳನ್ನು ತೆಗೆದುಕೊಳ್ಳಬಹುದೋ, ಯಾರಲ್ಲಿ ಕೊಡಲು ಶಕ್ತಿಯಿದೆಯೋ ಅಂಥವರಿಂದ ತೆಗೆದುಕೊಳ್ಳಬೇಕೆಂಬ ಉದ್ದೇಶ ಇದರಲ್ಲಿರುವುದರಿಂದ ಈ ತಿದ್ದುಪಡಿಯ ಉದ್ದೇಶವನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಅವರ ಈ ತಿದ್ದುಪಡಿಗೆ ಈ ದೃಷ್ಟಿಯಿಂದ ನನ್ನ ಅಭ್ಯಂತರವೇನೂ ಇಲ್ಲವೆಂದು ಹೇಳುತ್ತೇನೆ.

ಒಟ್ಟಿನಲ್ಲಿ ಆಹಾರ ಪರಿಸ್ಥಿತಿ ಮುಂದಿನ ವರ್ಷ ಯಾವ ರೀತಿ ಇರುತ್ತದೆಂಬುದನ್ನು ಈಗಲೇ ಊಹಿಸಬಹುದು. ಮುಂದೆ ಕಷ್ಟಕಾಲವಿದೆ ಎಂಬುದನ್ನು ಊಹಿಸಬಹುದು. ಹೀಗೆ ಕಷ್ಟವಿದ್ದಮಾತ್ರಕ್ಕೆ ನಾವು ಎದೆಗುಂದಿ ನಿರುತ್ಸಾಹಗೊಳ್ಳುವುದು ಸರಿಯಲ್ಲವೆಂಬುದನ್ನೂ ಒಪ್ಪುತ್ತೇನೆ, ಬಂದಿರತಕ್ಕ ಕಷ್ಟವನ್ನು ತಮ್ಮೆಲ್ಲರ ಸಹಾಯದಿಂದಲೂ ಪರಮಾತ್ಮನ ಅನುಗ್ರಹದಿಂದಲೂ ಬಗೆಹರಿಸುವುದಕ್ಕೆ ದೇವರು ನನಗೆ ಶಕ್ತಿಯನ್ನು ಕೊಡಲೆಂದು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.—ನಮ್ಮ ಅಸೆಂಬ್ಲಿಗೆ ದೇವರನ್ನೇಕೆ ಎಳೆಯಬೇಕು ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲಾದರೂ ನಾವು ದೇವರನ್ನು ಬಿಡುವುದಿಲ್ಲ. ದೇವರು ನಾವು ಎಲ್ಲಿ ಹೋದರೂ ನಮ್ಮ ಜೊತೆಯಲ್ಲೇ ಇರುತ್ತಾನೆಂಬ ನಂಬಿಕೆ ನಮಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಧಾರಣೆ ವಿಚಾರ ಏನೂ ಹೇಳಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ ನಾನು ಏಕೆ ಅದನ್ನು ಹೇಳಲಿಲ್ಲವೆಂದರೆ, ಪುನರುಕ್ತಿಯಾಗುತ್ತದೆಂದು ಹೇಳಲಿಲ್ಲ. ಈಗಿರತಕ್ಕ ಧಾರಣೆ ಕಡಮೆ, ಹೆಚ್ಚು ಕೊಡುವುದು ಒಳ್ಳೆಯದೆಂದು ಹೇಳಿದ್ದಲ್ಲದೆ ಅದರಲ್ಲಿರುವ ಕಷ್ಟವನ್ನೂ ಹೇಳಿದ್ದೇನೆ.

Mr. SPEAKER.—Then probably Sri Puttaswamy was not here.

Sri J. MOHAMED IMAM.—One point I want to make clear. We have expressed our views that we want decontrol immediately, that we are not for levy system and that we are not for procurement. But Sri Madiah's amendment has made it worse.

Mr. SPEAKER.—The Hon'ble Minister has accepted the amendment. But it has to be put to vote.

The question is:

"That at the end of the motion the following words be added:

'and the system of procuring from surplus holders with the ultimate aim of complete decontrol be adopted'."

The motion was adopted.

Mr. SPEAKER.—Now, the motion as amended. The question is:

"That the food situation and the Levy System be taken into consideration and the system of procuring from surplus holders with the ultimate aim of complete decontrol be adopted."

The motion was adopted.

Mr. SPEAKER.—To-morrow we have the discussion on the Appropriation Bill and that will not take much time. With the consent of the Hon'ble Leader of the House, if there is time, non-official business, *i.e.*, Resolutions, will be taken up.

Sri J. MOHAMED IMAM.—I want to say something.....

Mr. SPEAKER.—The House will now rise for the day and meet again to-morrow at 12 Noon.

The Assembly adjourned at Twenty-two Minutes past Five of the Clock to meet again at Twelve of the Clock on Friday, 24th October 1952.

WD 3662—GPB—500—23-2-53